ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ


ಸಂಪುಟ 14 | ಸಂಚಿಕೆ 7 | ಫೆಬ್ರವರಿ 10–16, 2020 | ಪುಟ 16 | ರೂ.10/-

Web : www.janashakthi.co.in e-mail : janashakthi2007@gmail.com





ಹೋರಾಟಗಳನ್ನು ಚುರುಕುಗೊಳಿಸಲು ಸ್ಫೂರ್ತಿ ನೀಡಿದ ಸಿಐಟಿಯು ಸಮ್ಮೇಳನ



ಆರ್ಥಿಕ ಯಾತನೆಗಳನ್ನು ಆಳಗೊಳಿಸುವ ಕೇಂದ್ರ ಬಜೆಟ್



ಎಲ್ ಐ ಸಿ 'ಲಿಸ್ಟಿಂಗ್' ಪಾಪರ್ ಸರಕಾರದ ಕ್ರಮ

ಗಾದಿಗೇರಿದ ಅಕ್ರಮ ಸಂತತಿ





ಬೆಂಗಳೂರಲ್ಲಿ ಬಿಸಿಯೂಟ ತಯಾರಕರ ಬೃಹತ್ ಪ್ರತಿಭಟನೆ

ಫೆಬ್ರುವರಿ 12ರಿಂದ 18 : ಜನ-ವಿರೋಧಿ ಬಜೆಟ್ ವಿರುದ್ಧಎಡಪಕ್ಷಗಳ ರಾಷ್ಟ್ರವ್ಯಾಪಿ ಪ್ರತಿಭಟನೆ

ಈ ವರ್ಷದ ಬಜೆಟ್ಟಿನಲ್ಲಿ ವ್ಯಾಪಕವಾಗಿ ತುಂಬಿರುವ ಜನ-ವಿರೋಧಿ ಧೋರಣೆಗಳ ವಿರುದ್ಧ ಎಡಪಕ್ಷಗಳು, ಅಂದರೆ ಸಿಪಿಐ(ಎಂ), ಸಿಪಿಐ, ಫಾರ್ವರ್ಡ್ ಬ್ಲಾಕ್, ಸಿಪಿಐ(ಎಂಎಲ್)-ಲಿನರೇಷನ್ ಮತ್ತು ಆರ್‌ಎಸ್‌ಪಿ, ರಾಷ್ಟ್ರವ್ಯಾಪಿ ಪ್ರತಿಭಟನೆ ನಡೆಸಲಿವೆ. ಇವು ನಮ್ಮ ಬಹುಪಾಲು ಜನಗಳ ಜೀವನೋಪಾಯ ಪರಿಸ್ತಿತಿಗಳನ್ನು ಹಿಂಡಿ ಹಾಕುವ ಧೋರಣೆಗಳು. ಮೋದಿ ಸರಕಾರ ಭಾರತೀಯ ಅರ್ಥವ್ಯವಸ್ಥೆಯನ್ನು ಧ್ವಂಸ ಮಾಡಿ, ಜನಗಳ ಮೇಲೆ ಅಭೂತಪೂರ್ವ ಹೊರೆಗಳನ್ನು ಹೇರಿದೆ. ಅದೇ ವೇಳೆಗೆ, ಶ್ರೀಮಂತರಿಗೆ ಮತ್ತು ಕಾರ್ಪೊರೇಟ್‌ಗಳಿಗೆ ಒಂದಾದ ಮೇಲೊಂದರಂತೆ ರಿಯಾಯ್ತಿಗಳನ್ನು ಕೊಡುತ್ತಿದೆ. ಇವು ಸ್ವತಂತ್ರ ಭಾರತದಲ್ಲಿ ಹಿಂದೆಂದೂ ಕಾಣದಷ್ಟು ರೀತಿಯಲ್ಲಿ ಆರ್ಥಿಕ ಸಮಾನತೆಗಳನ್ನು ಇನ್ನಷ್ಟು ಹೆಚ್ಚಿಸಿವೆ.

ಫೆಬ್ರುವರಿ 12ರಿಂದ 18ರ ವರೆಗೆ ನಡೆಯಲಿರುವ ಈ ಪ್ರತಿಭಟನೆಗಳಲ್ಲಿ ಈ ಕೆಳಗಿನ ಪ್ರಶ್ನೆಗಳನ್ನು ಮತ್ತು ಬೇಡಿಕೆಗಳನ್ನು ಎಡಪಕ್ಷಗಳು ಎತ್ತಲಿವೆ:

1. **ಜನಗಳ ಜೀವನಪರ್ಯಂತದ ಉಳಿತಾಯಗಳು ಮತ್ತು ಭದ್ರತೆಯ ಭಂಡಾರವಾದ ಎಲ್‌ಐಸಿಯಲ್ಲಿನ ಶೇರು ಹಿಂಪಡಿಕೆ ಸೇರಿದಂತೆ ರಾಷ್ಟ್ರೀಯ ಆಸ್ತಿಗಳನ್ನು ದೊಡ್ಡ ಪ್ರಮಾಣದಲ್ಲಿ ಖಾಸಗೀಕರಿಸುವುದನ್ನು ಕೈಬಿಡಬೇಕು.**
2. **ಅಭೂತಪೂರ್ವ ಮಟ್ಟದ ನಿರುದ್ಯೋಗ ಮತ್ತು ಕಾರ್ಖಾನೆಗಳನ್ನು ಮುಚ್ಚುವುದರಿಂದ ಅಥವ ಅವುಗಳ ಗಾತ್ರ ಕುಗ್ಗಿಸುತ್ತಿರುವುದರಿಂದ ಆಗುತ್ತಿರುವ ರಿಟ್ರೆಂಚ್‌ಮೆಂಟ್‌ಗಳ ವಿರುದ್ಧ;**
   ರೂ.21,000 ಕನಿಷ್ಟ ಕೂಲಿ ಕೊಡಬೇಕು ಮತ್ತು ಸಾಕಷ್ಟು ಪ್ರಮಾಣದ ನಿರುದ್ಯೋಗ ಭತ್ತೆ ಕೊಡಬೇಕು ಎಂದು ಆಗ್ರಹ
3. **ಕೃಷಿ ಸಂಕಟಗಳನ್ನು ಆಳಗೊಳಿಸುವುದರ ವಿರುದ್ಧ.**
   ರೈತರಿಗೆ ಒಮ್ಮೆ ಸಾಲ ಮನ್ನಾಕ್ಕೆ ಆಗ್ರಹ
4. **ಬಹುಮುಖ್ಯವಾದ ಕ್ಷೇತ್ರಗಳಲ್ಲಿ ಸರಕಾರದ ವೆಚ್ಚಗಳಲ್ಲಿ ದೊಡ್ಡ ಪ್ರಮಾಣದ ಕಡಿತಗಳ ವಿರುದ್ಧ-ಆಹಾರ ಸಬ್ಸಿಡಿ(75,532 ಕೋಟಿ ರೂ.); ಕೃಷಿ ಮತ್ತು ಮೀನುಗಾರಿಕೆಯಂತಹ ಸಂಬಂಧಿತ ಕ್ಷೇತ್ರಗಳು(30,683 ಕೋಟಿ ರೂ.); ಮನರೇಗ(9500 ಕೋಟಿ ರೂ.); ಸಾಮಾಜಿಕ ಕಲ್ಯಾಣ(2640 ಕೋಟಿ ರೂ.); ನಗರಾಭಿವೃದ್ಧಿ(5765 ಕೋಟಿ ರೂ.); ಆರೋಗ್ಯ(1169 ಕೋಟಿ ರೂ.) ಇತ್ಯಾದಿ. ಕೋಟ್ಯಂತರ ಭಾರತೀಯರನ್ನು ಬಡತನಕ್ಕೆ ತಳ್ಳುವ ಕಡಿತಗಳ ವಿರುದ್ಧ**

ಈ ಎಲ್ಲ ಪ್ರಮುಖ ಕ್ಷೇತ್ರಗಳಲ್ಲಿ ಸರಕಾರದ ವೆಚ್ಚಗಳನ್ನು ಈ ಹಿಂದಿನ ಮಟ್ಟಕ್ಕಿಂತ ಹೆಚ್ಚಿಸದಿದ್ದರೂ, ಆ ಮಟ್ಟಕ್ಕಾದರೂ ತರಬೇಕು.

ಮೋದಿ ಸರಕಾರ ನಮ್ಮ ಸಂವಿಧಾನದ ಮೇಲೆ ಪ್ರಹಾರ ನಡೆಸುತ್ತಿರುವ, ಕಟ್ಟಾ ಹಿಂದುತ್ವ ಅಜೆಂಡಾವನ್ನು, ಸಿಎಎ-ಎನ್‌ಪಿಆರ್- ಎನ್‌ಆರ್‌ಸಿಯನ್ನು ಜಾರಿಗೊಳಿಸುತ್ತ ಜನಗಳನ್ನು ಒಡೆಯುತ್ತಿರುವ ಮತ್ತು ದೇಶಾದ್ಯಂತ ಜನಗಳ ನಡುವೆ ಹೆಚ್ಚೆಚ್ಚು ದ್ವೇಷ ಮತ್ತು ಹಿಂಸಾಚಾರವನ್ನು ಹುಟ್ಟಿಸುತ್ತಿರುವ ಸಮಯದಲ್ಲೇ ಜನಗಳ ಜೀವನೋಪಾಯಗಳ ಮೇಲೆ ಇಂತಹ ಕ್ರಿಮಿನಲ್ ದಾಳಿಗಳನ್ನು ನಡೆಸುತ್ತಿದೆ.

ಈ ಪ್ರತಿಭಟನೆಗಳನ್ನು ಆಯಾಯ ರಾಜ್ಯಗಳಲ್ಲಿರುವ ಪರಿಸ್ತಿತಿಗಳಿಗೆ ಅನುಗುಣವಾಗಿ ಈ ಪ್ರತಿಭಟನಾ ವಾರಾಚರಣೆಯನ್ನು ಸಂಘಟಿಇಸಬೇಕು ಎಂದು ಎಡಪಕ್ಷಗಳು ತಮ್ಮ ರಾಜ್ಯ ಘಟಕಗಳಿಗೆ ಕರೆ ನೀಡಿವೆ.

ಜಮ್ಮು ಮತ್ತು ಕಾಶ್ಮೀರದ ಇಬ್ಬರು ಮಾಜಿ ಮುಖ್ಯಮಂತ್ರಿಗಳ ಮೇಲೆ ಕರಾಳ ಪಿಎಸ್‌ಎ ಏಟು – ಅದೂ ಸುಳ್ಳು ಸುದ್ದಿಗಳ ಆಧಾರದಲ್ಲಿ! : ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಸಿಪಿಐ(ಎಂ) ಪೊಲಿಟ್‌ಬ್ಯರೊ ಜಮ್ಮು ಮತ್ತು ಕಾಶ್ಮೀರದ ಇಬ್ಬರು ಮಾಜಿ ಮುಖ್ಯಮಂತ್ರಿಗಳು, ಒಮರ್ ಅಬ್ದುಲ್ಲ ಮತ್ತು ಮೆಹಬೂಬ ಮುಫ್ತಿ, ವಿರುದ್ಧ ಕರಾಳ ಸಾರ್ವಜನಿಕ ಭದ್ರತಾ ಕಾನೂನು(ಪಿಎಸ್‌ಎ) ಪ್ರಯೋಗಿಸಿರುವುದನ್ನು ಬಲವಾಗಿ ಖಂಡಿಸಿದೆ. ಒಮರ್ ಅಬ್ದುಲ್ಲ ಒಂದು ಬಿಜೆಪಿ ಸರಕಾರದಲ್ಲಿ ರಾಜ್ಯಖಾತೆಯ ಮಂತ್ರಿಯಾಗಿ, ಮತ್ತು ಮೆಹಬೂಬ ಮುಫ್ತಿ ರಾಜ್ಯದಲ್ಲಿ ಬಿಜೆಪಿಯೊಂದಿಗೆ ಮೈತ್ರಿ ಸರಕಾರದ ಮುಖ್ಯಮಂತ್ರಿಯಾಗಿ ಭಾರತೀಯ ಸಂವಿಧಾನದ ಅಡಿಯಲ್ಲಿ ಪ್ರತಿಜ್ಞಾ ಸ್ವೀಕಾರ ಮಾಡಿ ಸೇವೆ ಸಲ್ಲಿಸಿದವರು.

ಪ್ರಧಾನ ಮಂತ್ರಿ ಮೋದಿ ರಾಜ್ಯಸಭೆಯಲ್ಲಿ ರಾಷ್ಟ್ರಪತಿಗಳ ಭಾಷಣಕ್ಕೆ ಧನ್ಯವಾದ ಗೊತ್ತುವಳಿಯ ಮೇಲಿನ ಚರ್ಚೆಗೆ ಉತ್ತರ ಕೊಡುತ್ತ ಇವರಿಬ್ಬರು ನೀಡಿರುವ ಹೇಳಿಕೆಗಳು "ಸ್ವೀಕಾರಾರ್ಹವಲ್ಲ" ಎಂದರು. ಈ ಹೇಳಿಕೆಗಳನ್ನು ಒಂದು ವಿಡಂಬನಾ ವೆಬ್‌ತಾಣ 'ಫೇಕಿಂಗ್ ನ್ಯೂಸ್'ನ ಟ್ವಟರ್‌ನಿಂದ ತಗೊಂಡದ್ದು ಎಂದು ಈಗ ಗೊತ್ತಾಗಿದೆ ಮತ್ತು ಈ ಆಪಾದನೆಗಳು ಆಧಾರಹೀನ ಎಂದು ಸಾಬೀತಾಗಿದೆ ಎಂಬ ಸಂಗತಿಯತ್ತ ಪೊಲಿಟ್‌ಬ್ಯುರೊ ಗಮನ ಸೆಳೆದಿದೆ.

ಮೋದಿ ಸರಕಾರ ಈ ಕುಖ್ಯಾತ ಪಿಎಸ್‌ಎ ಕಾಯ್ದೆಯ ಏಟು ಹೊಡೆಯಲು ಇಂತಹ ಸುಳ್ಳು ಸುದ್ದಿಗಳ ಮೊರೆ ಹೋಗಬೇಕಾಗಿ ಬಂದಿರುವುದು "ಜಮ್ಮು ಮತ್ತು ಕಾಶ್ಮೀರದಲ್ಲಿ ಎಲ್ಲವೂ ಸಾಮಾನ್ಯವಾಗಿದೆ" ಎಂಬ ಅದರ ದಾವೆಯನ್ನು ಸುಳ್ಳಾಗಿಸುತ್ತದೆ. ಆರು ತಿಂಗಳ ನಂತರವೂ ಸಾವಿರಾರು ಮಂದಿ ಈಗಲೂ ಬಂಧನದಲ್ಲಿದ್ದಾರೆ. ಲಕ್ಷಾಂತರ ಜೀವನಾಧಾರಗಳು ಛಿದ್ರಗೊಂಡಿವೆ, ಮತ್ತು ಸಾಮಾನ್ಯ ದೈನಂದಿನ ಚಟುವಟಿಕೆ ಇಲ್ಲವೇ ಇಲ್ಲ ಎಂಬಂತಾಗಿದೆ.

ಇದು ಭಾರತೀಯ ಸಂವಿಧಾನಕ್ಕೆ ಮತ್ತು ಪ್ರಜಾಪ್ರಭುತ್ವಕ್ಕೆ ಮಾಡಿರುವ ಮುಖಭಂಗ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಇವರನ್ನು ಮತ್ತು ಆಗಸ್ಟ್4, 2019ರ ರಾತ್ರಿಯಿಂದ ಬಂಧಿಸಿಟ್ಟಿರುವ ಎಲ್ಲರನ್ನೂ ತಕ್ಷಣವೇ ಬಿಡುಗಡೆ ಮಾಡಬೇಕು ಮತ್ತು ಭಾರತೀಯ ಸಂವಿಧಾನದ ಅಡಿಯಲ್ಲಿ ಪ್ರಜಾಪ್ರಭುತ್ವವ ಪ್ರಕ್ರಿಯೆಗಳನ್ನು ಮತ್ತೆ ನೆಲೆಗೊಳಿಸಬೇಕು ಎಂದು ಆಗ್ರಹಿಸಿದೆ.

ಕಾಶ್ಮೀರದಲ್ಲಿ ಪ್ರಜಾ ಪ್ರಭುತ್ವವನ್ನು ಮತ್ತೆ ನೆಲೆಗೊಳಿಸಿ, ಅವರಿಗೆ ನೀಡಿದ ಆಶ್ವಾಸನೆಗಳನ್ನು ಗೌರವಿಸಿ- ಪ್ರಧಾನ ಮಂತ್ರಿಗಳಿಗೆ 'ಸೀತಾರಾಮ್ ಯೆಚುರಿ ಪತ್ರ

ಇದಕ್ಕೆ ಮೊದಲು ಫೆಬ್ರುವರಿ 5ರಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಧಾನಮಂತ್ರಿಗಳಿಗೆ ಒಂದು ಪತ್ರ ಬರೆದು ಎಲ್ಲ ಬಂಧಿತರನ್ನು ಬಿಡುಗಡೆ ಮಾಡಬೇಕು, ಕಾಶ್ಮೀರದಲ್ಲಿ ಪ್ರಜಾ ಪ್ರಭುತ್ವವನ್ನು ಮತ್ತೆ ನೆಲೆಗೊಳಿಸಿ, ಅವರಿಗೆ ನೀಡಿದ ಆಶ್ವಾಸನೆಗಳನ್ನು ಗೌರವಿಸಬೇಕು ಎಂದು ಆಗ್ರಹಿಸಿದ್ದರು.

ಜಮ್ಮು ಮತ್ತು ಕಾಶ್ಮೀರದಲ್ಲಿ ಸಂವಿಧಾನದ 370 ನೇ ಕಲಮು ಮತ್ತು 35ಎ ನ್ನು ಇದ್ದಕ್ಕಿದಂತೆ ರದ್ದು ಮಾಡಿ, ತೀವ್ರ ಮಿತಿಗಳನ್ನು ಹೇರಿ ಆರು ತಿಂಗಳಾಗಿವೆ. ಸಾವಿರಾರು ಜನಗಳನ್ನು ಸ್ಥಾನಬದ್ದತೆಯಲ್ಲಿ ಇಡಲಾಗಿದೆ. ಹಲವರನ್ನು ಜಮ್ಮು ಕಾಶ್ಮೀರದ ಒಳಗೆ ಮತ್ತು ಹೊರಗೆ ಜೈಲುಗಳಲ್ಲಿ ಇಡಲಾಗಿದೆ, ಹಲವರನ್ನು ಗೃಹಬಂಧನದಲ್ಲಿಡಲಾಗಿದೆ, ಅಥವ ಬೇರೆಡೆಗಳಲ್ಲಿ ಬಂಧಿಸಿಡಲಾಗಿದೆ. ಇವರಲ್ಲಿ ಈ ಹಿಂದೆ ಕೇಂದ್ರ ಮಂತ್ರಿಗಳಾಗಿದ್ದವರೂ ಸೇರಿದ್ದಾರೆ, ಮೂವರು ಮಾಜಿ ಮುಖ್ಯಮಂತ್ರಿಗಳೂ ಇದ್ದಾರೆ. ಈಗ ರದ್ದಾಗಿರುವ ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯಲ್ಲಿ ನಾಲ್ಕು ಬಾರಿ ಚುನಾಯಿತರಾದ ಸಿಪಿಐ(ಎಂ)ನ ಹಿರಿಯ ಮುಖಂಡ ಮಹಮ್ಮದ್ ಯೂಸುಫ್ ತರಗಾಮಿಯವರೂ ಇದ್ದಾರೆ.

ಇವರೆಲ್ಲರಿಗೆ ಸಂವಿಧಾನ ಅವರಿಗೆ ನೀಡಿರುವ ಸ್ವಾತಂತ್ರ್ಯವನ್ನು ಮರಳಿ ಕೊಡಬೇಕು, ಸಂಪರ್ಕದ ಮೇಲೆ ಹೇರಿರುವ ಮಿತಿಗಳನ್ನು ತೆಗೆಯಬೇಕು, ಮತ್ತು ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಮತ್ತ ನೆಲೆಗೊಳಿಸಬೇಕು ಎಂದು ಸೀತಾರಾಂ ಯೆಚುರಿ ತಮ್ಮ ಪತ್ರದಲ್ಲಿ ಪ್ರಧಾನ ಮಂತ್ರಿಗಳನ್ನು ಆಗ್ರಹಿಸಿದ್ದಾರೆ. ಇವು ರಾಜ್ಯದ ಅರ್ಥವ್ಯವಸ್ಥೆಯ ಮೇಲೆ ತೀರ ದುಷ್ಪರಿಣಾಮ ಬೀರಿವೆ.

ಜಮ್ಮು ಮತ್ತು ಕಾಶ್ಮೀರ ಭಾರತಕ್ಕೆ ಸೇರ್ಪಡೆಯಾಗುವಾಗ ಅಲ್ಲಿ ಜನರಿಗೆ ಕೊಟ್ಟ ಆಶ್ವಾಸನೆಗಳನ್ನು ಈಡೇರಿಸಬೇಕು, ಇದನ್ನು ಅತ್ಯಂತ ಗಂಭೀರತೆಯಿಂದ ಪರಿಗಣಿಸಬೇಕಾಗಿದೆ ಎಂದು ಯೆಚುರಿ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಅನುರಾಗ್ ಠಾಕುರ್ ವಿರುದ್ಧ ಎಫ್‌ಐಆರ್ ಏಕಿಲ್ಲ- ಉತ್ತರ ನೀಡಲು ಡಿಸಿಪಿಗೆ ಕೋರ್ಟ್ ನೋಟೀಸು

ಅನುರಾಗ್ ಠಾಕುರ್ ಮತ್ತು ಪರ್ವೆಶ್ ವರ್ಮ ವಿರುದ್ಧ ಎಫ್‌ಐಆರ್ ಏಕೆ ದಾಖಲಿಸಿಲ್ಲ ಎಂಬ ಬಗ್ಗೆ ವರದಿ ಸಲ್ಲಿಸುವಂತೆ ದಿಲ್ಲಿಯ ಅಡಿಶನಲ್ ಚೀಫ್ ಮೆಟ್ರೊಪೊಲಿಟನ್ ಮ್ಯಾಜಿಸ್ಟ್ರೇಟ್ ವಿಶಾಲ್ ಪಹುಜ ಅವು ನವದೆಹಲಿಯ ಡಿಸಿಪಿ ಯವರಿಗೆ ನೋಟೀಸು ಕಳಿಸಿದ್ದಾರೆ. ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಮತ್ತು ದಿಲ್ಲಿ ರಾಜ್ಯಸಮಿತಿಯ ಕಾರ್ಯದರ್ಶಿ ಕೆ.ಎಂ. ತಿವಾರಿ ಇವರಿಬ್ಬರೂ ಚುನಾವಣಾ ಸಂದರ್ಭದಲ್ಲಿ ದ್ವೇಷ ಭಾಷಣ ಮಾಡಿದ್ದರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಎಂದು ಡಿಸಿಪಿಗೆ ಆಗ್ರಹಿಸಿದ್ದರು.

ಆದರೆ ಡಿಸಿಪಿ ಈ ಬಗ್ಗೆ ಏನೂ ಕ್ರಮ ಕೈಗೊಳ್ಳದ್ದರಿಂದ ಇವರಿಬ್ಬರು ನ್ಯಾಯಾಲಯಲ್ಲೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ವಿಚಾರಣೆ ಎತ್ತಿಕೊಂಡ ನ್ಯಾಯಾಲಯ ಡಿಸಿಪಿಗೆ ಈ ನೋಟೀಸು ಕಳಿಸಿದೆ, ಡಿಸಿಪಿ ಫ್ರಬ್ರುವರಿ 11ರ ಒಳಗೆ ತನ್ನ ಉತ್ತರವನ್ನು ಸಲ್ಲಿಸಬೇಕು ಎಂದು ನ್ಯಾಯಾಲಯ ಹೇಳಿದೆ. ಈ ಇಬ್ಬರು ಎಂಪಿಗಳ ಪ್ರಚೋದನಕಾರಿ ಹೇಳಿಕೆಗಳಿಂದಾಗಿ ಎರಡು ಕಡೆ ಮೂರು ಗೋಲೀಬಾರಿನ ಘಟನೆಗಳು ನಡೆದವು.

ಎರಡು ದಿನಗಳ ಯಶಸ್ವಿ ಬ್ಯಾಂಕ್ ಮುಷ್ಕರ

ಜನವರಿ 31 ಮತ್ತು ಫೆಬ್ರುವರಿ1ರಂದು ಬ್ಯಾಂಕ್ ನೌಕರರು ಎರಡು ದಿನಗಳ ರಾಷ್ಟ್ರವ್ಯಾಪಿ ಮುಷ್ಕರ ನಡೆಸಿದರು. ಬ್ಯಾಂಕ್ ಸಂಘಗಳ ಸಂಯುಕ್ತ ವೇದಿಕೆ(ಯುಎಫ್‌ಬಿಯು)ಯ ಕರೆಯ ಮೇರೆಗೆ ಎಂಟು ಲಕ್ಷಕ್ಕೂ ಹೆಚ್ಚು ಬ್ಯಾಂಕ್ ನೌಕರರು ಮತ್ತು ಅಧಿಕಾರಿಗಳು ಇದರಲ್ಲಿ ಭಾಗವಹಿಸಿದರು. ಇದಕ್ಕೆ ಸಿದ್ಧತೆಯಾಗಿ ನಡೆದ ರ್‍ಯಾಲಿಗಳಲ್ಲಿ, ಸಭೆಗಳಲ್ಲಿ, ಮತಪ್ರದರ್ಶನಗಳಲ್ಲಿ ಕಾಂಟ್ರಾಕ್ಟ್ ನೌಕರರು, ಎಟಿಎಂ ಗಾರ್ಡ್‌ಗಳು, 'ಬ್ಯಾಂಕ್‌ಮಿತ್ರ'ರು ಕೂಡ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ತಕ್ಷಣ ವೇತನ ಪರಿಷ್ಕರಣೆ, ಹೊಸ ಪೆನ್ಶನ್ ಸ್ಕೀಮನ್ನು ರದ್ದು ಮಾಡಬೇಕು, ಕಾಂಟ್ರಾಕ್ಟ್ ನೌಕರರು ಮತ್ತು ಬಿಸಿನೆಸ್ ಕರೆಸ್ಪಾಂಡೆಂಟ್‌ಗಳಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಮುಂತಾದ 12 ಬೇಡಿಕೆಗಳ ಮೇಲೆ ಈ ಮುಷ್ಕರ ನಡೆದಿದೆ.

ಈ ಎರಡು ದಿನ ಎಲ್ಲ ಬ್ಯಾಂಕ್ ಶಾಖೆಗಳು ಮುಚ್ಚಿದ್ದವು, ಕ್ಲಿಯರಿಂಗ್ ಗ್ರಿಡ್‌ಗಳು ಕೆಲಸ ಮಾಡಲಿಲ್ಲ, ಹಲವು ಎಟಿಎಂಗಳೂ ಕೆಲಸ ಮಾಡಲಿಲ್ಲ. ಈ ಅತ್ಯಂತ ಯಶಸ್ವಿ ಮುಷ್ಕರ ಐಬಿಎ ಮತ್ತು ಸರಕಾರಕ್ಕೆ ಎಚ್ಚರಿಕೆಯ ಗಂಟೆಯಾಗಿದೆ, ಈಗಲೂ ಸಕಾರಾತ್ಮಕವಾಗಿ ಸ್ಪಂದಿಸದಿದ್ದರೆ ಮಾರ್ಚ್ 11ರಿಂದ 13 ರ ವರೆಗೆ ಮೂರು ದಿನಗಳ ಮುಷ್ಕರ, ಮತ್ತು ಅದಕ್ಕೂ ಸ್ಪಂದಿಸದಿದ್ದರೆ ಎಪ್ರಿಲ್1 ರಿಂದ ಅನಿರ್ದಿಷ್ಟ ಕಾಲದ ಮುಷ್ಕರವನ್ನು ಬ್ಯಾಂಕ್ ನೌಕರರು ನಡೆಸುವುದಾಗಿ ಯುಎಫ್‌ಬಿಯು ಎಚ್ಚರಿಸಿದೆ.



ಸಂಸತ್ತಿನ ಎದುರು ಎಡಪಕ್ಷಗಳ ಎಂಪಿಗಳ ಪ್ರತಿಭಟನೆ

ಫೆಬ್ರುವರಿ 6 ರಂದು ಎಡಪಕ್ಷಗಳ ಸಂಸತ್ ಸದಸ್ಯರು ಸಂಸತ್ತಿನ ಎದುರು ಎಲ್‌ಐಸಿ ಮತ್ತು ಬಿಪಿಸಿಎಲ್ ಶೇರು ಹಿಂಪಡಿಕೆಯ ವಿರುದ್ಧ ಮತ್ತು ನಿರುದ್ಯೋಗ ಮತ್ತು ಕೇರಳದ ವಿರುದ್ಧ ಬಜೆಟಿನಲ್ಲಿ ಪಕ್ಷಪಾತಕ್ಕೆ ಪ್ರತಿಭಟನೆ ವ್ಯಕ್ತಪಡಿಸಿದರು.

ನಮ್ಮ ಕೇಂದ್ರ-ರಾಜ್ಯ ಸಂಬಂಧಗಳಲ್ಲಿ ಬಹಳಷ್ಟು ನ್ಯೂನ್ಯತೆಗಳಿವೆ. ಅಭಿವೃದ್ಧಿ ಕೆಲಸಗಳ ಹೊಣೆ ಬಹುಪಾಲು ರಾಜ್ಯ ಸರಕಾರಗಳ ಮೇಲಿದ್ದರೆ, ತೆರಗೆ ಎತ್ತು ಬಹುಪಾಲು ಅಧಿಕಾರ ಕೇಂದ್ರ ಸರಕಾರದ ಕೈಗಳಲ್ಲಿವೆ. ಇದನ್ನು ಅದು ಆಯ್ದ ರಾಜ್ಯಗಳ ವಿರುದ್ಧ ಪಕ್ಷಪಾತ ನಡೆಸಲು ಬಳಸುತ್ತದೆ. ಉದಾಹರಣೆಗೆ, 2019-20ರ ಬಜೆಟಿನ ಪ್ರಕಾರ ಆ ಹಣಕಾಸು ವರ್ಷದ ಕೊನೆಯ ತ್ರೈಮಾಸಿಕದಲ್ಲಿ ಕೇರಳಕ್ಕೆ 10, 233ಕೋಟಿ ರೂ. ಸಾಲವನ್ನು ಕೇರಳಕ್ಕೆ ಕೊಡಬೇಕಾಗಿತ್ತು. ಆದರೆ ಕೊಟ್ಟದ್ದು 1,00 ಕೋಟಿ ರೂ. ಮಾತ್ರ. ಜಿಎಸ್‌ಟಿ ಪರಿಹಾರ ಡಿಸೆಂಭರ್ ನಂತರ ಸಿಕ್ಕಿಲ್ಲ. ರಾಷ್ಟ್ರೀಯ ಅನಾಹುರ ಪರಿಹಾರ ನಿಧಿಯಿಂದ ಏಳು ರಾಜ್ಯಗಳಿಗೆ 5908.56 ಕೋಟಿ ರೂ.ಗಳ ಪರಿಹಾರ ನೀಡಲಾಗಿದೆ, ಆದರೆ 2019ರಲ್ಲಿ ತೀವ್ರ ನೆರಹಾವಳಿ ಕಂಡ ಕೇರಳಕ್ಕೆ ಏನೂ ಕೊಟ್ಟಿಲಲ್. 2020-21ರ ಬಜೆಟ್ ಕೇರಲ್ಲೆ ಇನ್ನಷ್ಟು ಅನ್ಯಾಯ ಮಾಡಿದೆ. ತೆರಿಗೆಗಳಲ್ಲಿ ಕೇರಳದ ಪಾಲನ್ನು 2.5%ದಿಂದ 1.94%ಕಕೆ ಇಳಿಸಲಾಗಿದೆ. ಅಂದರೆ ಸುಮಾರು 1200 ಕೋಟಿ ರೂ..ಗಳಷ್ಟು ಕಡಿತವಾಗುತ್ತದೆ.

ಸಂಪಾದಕೀಯ

ಗಾದಿಗೇರಿದ ಅಕ್ರಮ ಸಂತತಿ

ರಾಜ್ಯದಲ್ಲಿ ಅಕ್ರಮವಾಗಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬರುವುದಕ್ಕೆ ಕಾರಣ ಕರ್ತರಾದ 10 ಮಂದಿ ಶಾಸಕರನ್ನು ಗಾದಿಗೇರಿಸುವ ಮೂಲಕ ಮುಖ್ಯ ಮಂತ್ರಿ ಬಿ.ಎಸ್. ಯಡಿಯೂರಪ್ಪ ಭ್ರಷ್ಟಾಚಾರಿಗಳಿಗೆ ಕೊಟ್ಟ ಮಾತನ್ನು ಈಡೇರಿಸಿ ಧನ್ಯರಾಗಿದ್ದಾರೆ! ಕಾಂಗ್ರೆಸ್-ಜೆಡಿಎಸ್ ತೊರೆದು, ಪಕ್ಷಾಂತರ ನಿಷೇದ ಕಾಯ್ದೆಯನ್ನು ಗಾಳಿಗೆ ತೂರಿ ಬಂದಿದ್ದ 11 ಮಂದಿ ಪೈಕಿ 10 ಮಂದಿಗೆ ಮಂತ್ರಿ ಪದವಿ ಧಕ್ಕಿದೆ. ಎಲ್ಲರಿಗೂ ಸಂಪುಟ ದರ್ಜೆಯ ಸಚಿವ ಭಾಗ್ಯ ಒಲಿದು ಬಂದಿದೆ. ಪ್ರಮಾಣ ವಚನ ಸ್ವೀಕರಿಸಿದ ಇವರು ವೇದಿಕೆಯಲ್ಲಿ ಯಡಿಯೂರಪ್ಪ ಅವರ ಕಾಲಿಗೆರಗಿದ್ದು ಗಮನಾರ್ಹವಾಗಿತ್ತು.

ಭ್ರಷ್ಟ ರಾಜಕಾರಣಕ್ಕಾಗಿ ಕರ್ನಾಟಕ ಹಲವು ಬಾರಿ ದೇಶದ ಮುಂದೆ ತಲೆ ತಗ್ಗಿಸುವಂತಾಗಿದೆ. ಈ ಸಲವೂ ಹಾಗೆ ಆಗಿದೆ. ಆದರೆ ಈ ಸಲ ಅವರಿಗೆ ಅನಿರೀಕ್ಷಿತವಾಗಿ ನ್ಯಾಯಾಂಗದ ಬೆಂಬಲ ಸಿಗುವಂತಾಯಿತು. ಅನರ್ಹರಾಗಿದ್ದವರನ್ನು ಅರ್ಹಗೊಳಿಸಲಾಯಿತು. ಅತ್ಯಂತ ಭ್ರಷ್ಟ ವಿಧಾನಗಳ ಮೂಲಕ ಉಪಚುನಾವಣೆಯಲ್ಲಿ 17 ರ ಪೈಕಿ 11 ಮಂದಿ ಗೆದ್ದೇಬಿಟ್ಟರು. ಅವರಲ್ಲಿ 10 ಮಂದಿ ಗಾದಿಗೇರಿದ್ದಾರೆ.

ಮುಖ್ಯ ಮಂತ್ರಿ ಯಡಿಯೂರಪ್ಪರವರು ಕೊಟ್ಟ ಮಾತನ್ನು ಈಡೇರಿಸುವ ಮೂಲಕ ಸದ್ಯಕ್ಕೆ ನಿರಾಳರಾಗಿದ್ದಾರೆ. ಆದರೆ ಅವರು ಮಾತುಕೊಟ್ಟದ್ದು ತಮ್ಮ ಪಕ್ಷ ತೊರೆದು ಬಂದವರಿಗೆ, ಅವರು ಯಾರೂ ಒಳ್ಳೆಯ ಚರಿತ್ರೆ ಉಳ್ಳವರಲ್ಲ. ಅವರು ತಮ್ಮ ಪಕ್ಷಕ್ಕೆ, ಮತನೀಡಿದ ತಮ್ಮ ಕ್ಷೇತ್ರದ ಜನತೆಗೆ ದ್ರೋಹ ಮಾಡಿ ಬಂದವರು. ಅವರು ಕೇವಲ ಮಂತ್ರಿ ಪದವಿಯಿಂದ ತೃಪ್ತರಾದಗುವ ಸಾಧ್ಯತೆ ತೀರಾ ಕಡಿಮೆ. ಅವರು ತಮ್ಮ ಸ್ವಾರ್ಥ ಸಾಧನೆಗಾಗಿ ಯಡಿಯೂರಪ್ಪಗೆ ತಲೆನೋವಾಗದೆ ಇರಲಾರರು. ಈಗಾಗಲೇ ಇವರಲ್ಲಿ ಕೆಲವರು ತಾವು ಬಯಸುವ ಪ್ರಬಲ ಖಾತೆಗಳನ್ನು ಮುಖ್ಯ ಮಂತ್ರಿ ಮುಂದಿಡಲು ತಡಮಾಡಿಲ್ಲ; ತಮ್ಮ ಕೋರಿಕೆಗಳಿಗೆ ತಕ್ಕಂತೆ ಖಾತೆಗಳ ಹಂಚಿಕೆಯಾಗದಿದ್ದರೆ ಅವರು ಸುಮ್ಮನಿರಲಾರರು. ಉಪ ಚುನಾವಣೆಯಲ್ಲಿ ಸೋತವರೂ ಇದ್ದಾರೆ. ಅವರೂ ತಮ್ಮ ಬೇಡಿಕೆಗಳ ಈಡೇರಿಕೆಗೆ ಒತ್ತಡ ತರದಿರಲಾರರು.

ಸಚಿವ ಸ್ಥಾನ ಸಿಗದೆ ಇರುವ ಮೂಲ ಬಿಜೆಪಿ ಶಾಸಕರಲ್ಲಿಯೂ ಅಸಮಾಧಾನ ಮುಂದುವರೆದಿದೆ. 4-5 ಬಾರಿ ಗೆದ್ದು ಸಚಿವ ಸ್ಥಾನದ ಆಕಾಂಕ್ಷೆ ಹೊಂದಿರುವ ಹಲವು ಹಿರಿಯ ಶಾಸಕರು ಈ ಎಲ್ಲ ಬೆಳವಣೆಗೆಗಳಿಂದ ದೂರು ಉಳಿದಿದ್ದಾರೆ. ಇನ್ನೂ ಕೇವಲ 6 ಸಚಿವ ಸ್ಥಾನಗಳು ಖಾಲಿ ಇವೆ. ಅವುಗಳನ್ನು ತುಂಬಲು ಇನ್ನೂ ಹಲವು ತಿಂಗಳು ಹೈಕಮಾಂಡಿನ ಆದೇಶಕ್ಕಾಗಿ ಕಾಯಬೇಕಾಗಬಹುದು. ಅಲ್ಲಿಯ ವರೆಗೆ ರಾಜ್ಯದಲ್ಲಿ ಒಂದು ಕೆಲಸ ಮಾಡುವ ಸರ್ಕಾರ ಬೇಡವೆ? ಇಂತಹ ಒತ್ತಡಗಳಿಗೆ ಒಳಗಾದ ಮುಖ್ಯ ಮಂತ್ರಿ ಒಂದು ಜನಪರ ಆಡಳಿತ ನೀಡಬಲ್ಲರೆ?

ಬಿಜೆಪಿ ಸರ್ಕಾರ ಹಿಂಬಾಗಿಲಿನಿಂದ ಅಧಿಕಾರಕ್ಕೆ ಬಂದು 6 ತಿಂಗಳು ಕಳೆದಿವೆ. ಆರಂಭದ ಒಂದು ತಿಂಗಳು ಮುಖ್ಯ ಮಂತ್ರಿಯೊಬ್ಬರೇ ಆಡಳಿತ ನಿರ್ವಹಿಸಿದರು. ರಾಜ್ಯದಲ್ಲಿ ಭೀಕರ ನೆರೆಹಾವಳಿ ಸಂಭವಿಸಿದರೂ ಸಂಪುಟ ವಿಸ್ತರಣೆಗೆ ಬಿಜೆಪಿ ಹೈಕಮಾಂಡ್ ಅನುಮತಿ ನೀಡಲೇ ಇಲ್ಲ. ಇದರಿಂದಾಗಿ ಆಡಳಿತ ಸಂಪೂರ್ಣ ಹದಗೆಟ್ಟಿತು. ಸಂಪುಟ ರಚನೆ ಮುಖ್ಯ ಮಂತ್ರಿಯವರ ಪರಮಾಧಿಕಾರ. ಹೈಕಮಾಂಡ್ ಇದರಲ್ಲಿ ಮೂಗುತೂರಬಾರದು.

ಎರಡನೇ ಸುತ್ತಿನ ಸಂಪುಟ ವಿಸ್ತರಣೆ ಕೊನೆಗೂ ಪೂರ್ಣಗೊಂಡಿದೆ. ಆದರೂ ಮುಖ್ಯ ಮಂತ್ರಿಗೆ ಹೈಕಮಾಂಡ್‌ನಿಂದ ಪೂರ್ಣ ಸಹಕಾರ ಸಿಗುತ್ತಿಲ್ಲ. ಬಾಕಿ ಉಳಿದಿರುವ 6 ಸಚಿವ ಸ್ಥಾನಗಳಿಗೆ ಬಾರೀ ಪೈಪೋಟಿ ನಡೆಯುವ ಸಾಧ್ಯತೆ ಕಂಡು ಬರುತ್ತಿದೆ. ಹೀಗಾಗಿ ಯಡಿಯೂರಪ್ಪ ಸರ್ಕಾರ ಅತ್ಯಂತ ಬಲಹೀನ ಸರ್ಕಾರವಾಗಿ, ಎಲ್ಲರ ರಂಗಗಳಲ್ಲಿ ವಿಫಲವಾದ ಸರ್ಕಾರ ಎಂದು ಖ್ಯಾತಿಗಳಿಸಿ ನಿರ್ಗಮಿಸುವಂತಾಗುವುದು ಖಚಿತ. ಸಚಿವ ಸ್ಥಾನಗಳಿಗೆ ಯಾಕೆ ಇಷ್ಟೊಂದು ಪೈಪೋಟಿ. ಮಂತ್ರಿಯಾಗಲು ಪೈಪೋಟಿ! ಉಪ ಮುಖ್ಯಮಂತ್ರಿ ಆಗಲು ಪೈಪೋಟಿ!! ಜನಸೇವೆಗಾಗಿ ಇವರೊಳಗೆ ಈ ಸ್ಪರ್ಧೆ ಇರಬಹುದೆ? ದೇಶಕ್ಕಾಗಿ ತಮ್ಮ ತನು, ಮನ, ಧನವನ್ನು ತ್ಯಾಗಮಾಡಲು ಇವರು ಅವಕಾಶಕ್ಕಾಗಿ ಸ್ಪರ್ಧೆಗಿಳಿದಿರಬಹುದೆ? ಇಲ್ಲ, ಇವರ ಪೈಪೋಟಿ ಏನಿದ್ದರೂ ರಾಜಕಾರಣ ಎಂಬ ದಂದೆಯಲ್ಲಿ ಲಾಭಗಳಿಸಲು. ಜನ ಸೇವೆ, ದೇಶ ಸೇವೆ ಎಂಬ ಮಾತಗಳು ಕೇವಲ ನಾಟಕ! ನಮ್ಮ ಮುಗ್ದ ಜನ ಅವರ ನಾಟಕದ ಮಾತುಗಳೇ ನಿಜವೆಂದು ಮೋಸ ಹೋಗುತ್ತಿದ್ದಾರೆ. ಅವರಿಗೆ ಮಂತ್ರಿ ಪದವಿ ಸಿಗುವಂತೆ ಮಾಡಲು ಕೂಗಾಡುತ್ತಾರೆ, ಜಯಘೋಷ ಮಾಡುತ್ತಾರೆ. ಮಂತ್ರಿಯಾದ ಮೇಲೆ ಆತ ಕಂತ್ರಿ ಕೆಲಸ ಆರಂಭಿಸುತ್ತಾನೆ. ಸರಕಾರಿ ಹಣ, ಸರ್ವಜನಿಕರ ಹಣವನ್ನು ತನ್ನ ಬೊಕ್ಕಸಕ್ಕೆ ಸೇರಿಸಿ ನಿಶ್ಚಿಂತೆಯಿಂದ ಇರುತ್ತಾರೆ. ಮುಗ್ದ ಜನತೆಗೆ ತಾವು ಮೋಸ ಹೋಗಿರುವುದು ತಿಳಿಯುವುದೇ ಇಲ್ಲ.

ಶಾಲಾ ಮಕ್ಕಳ ಮೇಲೆ ಪೊಲೀಸ್ ದರ್ಪ-ಖಂಡನೆ

ಬೀದರ ಜಿಲ್ಲೆಯ ಶಾಹಿನ್ ಶಿಕ್ಷಣ ಸಂಸ್ಥೆಯ ಕಾರ್ಯಕ್ರಮದಲ್ಲಿ ಶಾಲೆಯ ಮಕ್ಕಳು ಎನ್‌ಆರ್‌ಸಿ-ಎನ್‌ಪಿಆರ್-ಸಿಎಎ ವಿರುದ್ಧ ನಾಟಕವೊಂದನ್ನು ಪ್ರದರ್ಶಿಸಿರುವುದನ್ನು ವಿವಾದಗೊಳಿಸಿದ್ದು ಈಗಾಗಲೇ ಎಲ್ಲರಿಗೂ ತಿಳಿದಿದೆ. ಜನವಾದಿ ಮಹಿಳಾ ಸಂಘಟನೆಯ ನಿಯೋಗವು ಜೈಲಿನಲ್ಲಿರುವ ಮಹಿಳೆಯರನ್ನೂ ಮತ್ತು ಮಕ್ಕಳನ್ನೂ ಭೇಟಿ ಮಾಡಿದೆ. ನಾಟಕದ ಸ್ಕ್ರಿಪ್ಟ್‌ನಲ್ಲಿ ಇಲ್ಲದ ಶಬ್ದವೊಂದು ಮಗು ನುಡಿದಿರುವುದನ್ನೇ ದೊಡ್ಡದು ಮಾಡಿ ಜಿಲ್ಲೆಯ ಪೋಲಿಸರು ವ್ಯಕ್ತಿಯೊಬ್ಬರ ದೂರನ್ನು ಆಧರಿಸಿ ದೇಶದ್ರೋಹದ ಕೇಸನ್ನು ದಾಖಲಿಸಿದ್ದಾರೆ. ಈ ಕಾಯ್ದೆಯಡಿಯಲ್ಲಿ ವಿದ್ಯಾರ್ಥಿಯ ತಾಯಿ ಮತ್ತು ಶಿಕ್ಷಕಿಯನ್ನು ಬಂದಿಸಿರುವರು. ಹಾಗೂ ಆ ಮಕ್ಕಳನ್ನು ಕನಿಷ್ಠ ನಾಲ್ಕು ಬಾರಿ ಪೋಲಿಸರು ವಿಚಾರಣೆ ಮಾಡಿರುವರು. ಮೊದಲಿಗೆ ನಡೆದ ವಿಚಾರಣೆಯಲ್ಲಿಯಂತೂ ಪೋಲಿಸರು ವರ್ದಿಯ(ಡ್ರೆಸ್) ಮೇಲೆಯೇ ವಿಚಾರಣೆ ಮಾಡಿದ್ದು ಮಾಧ್ಯಮಗಳಲ್ಲಿಯೂ ಬಂದಿದೆ. ವರ್ದಿಯ ಮೇಲೆ ಮಕ್ಕಳನ್ನು ವಿಚಾರಣೆ ಮಾಡುವುದು ಅಪರಾಧ. ಇವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು. ವಿದ್ಯಾರ್ಥಿಯು ನಾಟಕದಲ್ಲಿ ನುಡಿದ ಶಬ್ದವು ದೇಶದ್ರೋಹದ ವ್ಯಾಪ್ತಿಗೆ ಬರುವುದಿಲ್ಲವೆಂಬುದು ಕಾನೂನು ಬಲ್ಲವರಿಗೆ ಸ್ಪಷ್ಟವಾಗುವ ಸಂಗತಿಯಾಗಿದೆ. ಆದಾಗ್ಯೂ ದೇಶದ್ರೋಹದ ಕೇಸು ದಾಖಲಿಸಿರುವುದು ನೋಡಿದರೆ ಜಿಲ್ಲಾ ಆಡಳಿತವು ಕೋಮುಶಕ್ತಿಯ ಕೈಗೊಂಬೆಯಂತೆ ವರ್ತಿಸುತಿದೆ ಎಂಬುದು ರುಜುವಾಗುತಿದೆ. ಸರಕಾರದ ಕಾನೂನುಗಳ ವಿರುದ್ದ ಅಭಿಪ್ರಾಯ ವ್ಯಕ್ತಪಡಿಸುವುದು ನ್ಯಾಯ ಶಾಸ್ತ್ರದ ಪ್ರಕಾರ ದೇಶದ್ರೋಹವಾಗುವುದಿಲ್ಲ. ಟೀಕೆಯನ್ನೇ ದೇಶದ್ರೋಹವೆನ್ನುವುದು ಅಪರಾಧ. ಈ ಪ್ರಕರಣವನ್ನು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಬಳಸಿಕೊಳ್ಳುತ್ತಿರುವುದು ನೋಡಿದರೆ ಸರಕಾರವು ಕಾನೂನಿನ ದುರ್ಬಳಕೆ ಮಾಡುತಿದೆ ಎಂಬುದು ಗೊತ್ತಾಗುತದೆ. ಈ ಪ್ರಕರಣದಲ್ಲಿ ಮಗುವಿನ ತಾಯಿಯನ್ನು ಮತ್ತು ಶಿಕ್ಷಕಿಯೊಬ್ಬರನ್ನು ಬಂಧಿಸಲಾಗಿದೆ. ಹಾಗೂ ಪದೆ ಪದೆ ಮಕ್ಕಳನ್ನು ವಿಚಾರಣೆ ನೆಪದಲ್ಲಿ ಮಾನಸಿಕವಾಗಿ ಹಿಂಸಿಸುವಷ್ಟರ ಮಟ್ಟಿಗೆಜಿಲ್ಲಾಡಳಿತವುವರ್ತಿಸುತಿದೆ.ಇದನ್ನುಜನವಾದಿ ಮಹಿಳಾ ಸಂಘಟನೆಯು ತೀವ್ರವಾಗಿ ಖಂಡಿಸುತದೆ. ಅಲ್ಪಸಂಖ್ಯಾತ ಸಮುದಾಯಕ್ಕೆ ಸಂಬಂಧಪಟ್ಟ ಶಿಕ್ಷಣ ಸಂಸ್ಥೆ ಇದು ಎನ್ನುವುದಕ್ಕಾಗಿಯೂ ಸರಕಾರವು ಕಾನೂನಿನ ದುರ್ಬಳಕೆ ಮಾಡಿಕೊಂಡು ಹಣಿಯಲು ಹೊರಟಿದೆ ಎಂಬುದು ಸ್ಪಷ್ಟವಾಗಿದೆ. ಏಕೆಂದರೆ ಕಳೆದ ತಿಂಗಳು ಪ್ರಭಾಕರ ಕಲ್ಲಡ್ಕ ಭಟ್ಟ ಎಂಬುವವರ ಶಿಕ್ಷಣ ಸಂಸ್ಥೆಯಲ್ಲಿ ಬಾಬ್ರಿ ಮಸಿದಿ ಧ್ವಂಸವನ್ನು ಮಕ್ಕಳಿಂದ ಆಡಿಸಲಾಗಿತ್ತು. ಇವರ್ಯಾರ ಮೇಲೂ ಒಂದು ಸಣ್ಣ ಕೇಸು ಸಹ ಆಗಲಿಲ್ಲ. ಸರಕಾರವು ಮೌನ ವಹಿಸಿತು. ಆದರೆ ಪಾತ್ರಧಾರಿ ವಿದ್ಯಾರ್ಥಿಯು ನುಡಿದ ಶಬ್ದವನ್ನೇ ಮುಂದಿಟ್ಟುಕೊಂಡು ದೇಶದ್ರೋಹದ ಕೇಸು ದಾಖಲಿಸಲಾಗಿದ್ದರ ಹಿಂದೆ ಕೋಮುವಾದಿ ಮನಸ್ಥಿತಿ ಅಡಗಿದೆ. ಇದನ್ನು ಜನವಾದಿ ಮಹಿಳಾ ಸಂಘಟನೆಯು ಖಂಡಿಸುತದೆ.

ಎನ್‌ಆರ್‌ಸಿ-ಎನ್‌ಪಿಆರ್ ಮತ್ತು ಸಿಎಎ ಕುರಿತು ದೇಶದಾದ್ಯಂತ ಬಹುದೊಡ್ಡ ಚಳುವಳಿಗಳು ನಡೆಯುತ್ತಿವೆ. ಏಕೆಂದರೆ ಈ ಕಾಯ್ದೆಯು ಸಂವಿಧಾನವನ್ನೇ ಬುಡಮೇಲು ಮಾಡುವಂತಹದ್ದಾಗಿದೆ. ಈ ಸಮಯದಲ್ಲಿ ಚಳುವಳಿಯನ್ನು ಹತ್ತಿಕ್ಕಲು ಸರಕಾರವು ಇಂತಹ ಅಡ್ಡದಾರಿಯಿಂದ ಕಾನೂನು ದುರ್ಬಳಕೆಗೆ ಕೈ ಹಾಕುತಿದೆ. ಕಾನೂನು ದುರ್ಬಳಕೆ ಮಾಡಿಕೊಂಡವರ ಮೇಲೆ ಕ್ರಮ ಕೈಗೊಳ್ಳಬೇಕು. ಮತ್ತು ಇಂತಹ ದುರ್ಬಳಕೆ ಧೋರಣೆಯು ತಕ್ಷಣ ನಿಲ್ಲಿಸಬೇಕು ಎಂದು ಜನವಾದಿ ಮಹಿಳಾ ಸಂಘಟನೆಯು ಆಗ್ರಹಿಸುತದೆ.

ಆರ್ಥಿಕ ಯಾತನೆಗಳನ್ನು ಮತ್ತಷ್ಟು ಆಳಗೊಳಿಸುವ ಕೇಂದ್ರ ಬಜೆಟ್

ಕೇಂದ್ರದ ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ಫೆಬ್ರವರಿ 1ರಂದು ಲೋಕಸಭೆಯಲ್ಲಿ ಮಂಡಿಸಿದ ಬಜೆಟ್ ಭಾಷಣವು ದೇಶವನ್ನು ಈಗ ಆವರಿಸಿರುವ ಆರ್ಥಿಕ ಬಿಕ್ಕಟ್ಟನ್ನು ಹೇಗೆ ಎದುರಿಸುವುದು ಎಂಬ ಬಗ್ಗೆ ಯಾವ ದಾರಿಗಳೂ ಈ ಸರಕಾರದ ಬಳಿ ಇಲ್ಲ ಎನ್ನುವುದನ್ನು ಬಹಿರಂಗಪಡಿಸಿದೆ ಎಂದು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಧರ್ಮೇಶ್ ತಿಳಿಸಿದ್ದಾರೆ.

ಹಣಕಾಸು ಮಂತ್ರಿಗಳು ದೇಶ ಇಂದು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳನ್ನು ನೇರವಾಗಿ ಎದುರಿಸಬೇಕಾದ ಸಕಾರಾತ್ಮಕ ಕ್ರಮಗಳ ಬದಲು, ಎರಡೂವರೆ ಗಂಟೆಗಳ ಕಾಲ ತಮ್ಮ ಬಜೆಟ್ ಭಾಷಣದಲ್ಲಿ ಸಂಕಷ್ಟದಲ್ಲಿರುವ ಅರ್ಥವ್ಯವಸ್ಥೆಯ ಕಟು ವಾಸ್ತವಗಳನ್ನು ಮರೆಮಾಚುವ ಪ್ರಯತ್ನವನ್ನಷ್ಟೇ ಮಾಡಿದ್ದಾರೆ.

ಸರ್ಕಾರ ಜನರ ಕಲ್ಯಾಣಕ್ಕಾಗಿ ಖರ್ಚು ಮಾಡುವ ಹಣದಲ್ಲಿ ಮತ್ತಷ್ಟು ಕಡಿತ ಮಾಡಿ ಕಾರ್ಪೊರೇಟ್‌ಗಳಿಗೆ ಮತ್ತು ಶ್ರೀಮಂತರಿಗೆ ಮತ್ತಷ್ಟು ರಿಯಾಯ್ತಿಗಳು ಹಾಗೂ ಅದಕ್ಕಾಗಿ ದೇಶದ ಸಾರ್ವಜನಿಕ ಆಸ್ತಿಗಳ ಮಾರಾಟದ ಚಾಳಿಯೂ ಮುಂದುವರಿಸಿದೆ. ಸರ್ಕಾರ ಈ ನಿಟ್ಟಿನಲ್ಲಿ ಎಷ್ಟೊಂದು ಮುಂದುವರಿದಿದೆಯೆಂದರೆ ಅದು ತನ್ನ ಯೋಜನೆಗಳಿಗೆ ಎಲ್ಲರಿಗಿಂತ ಅತಿ ಹೆಚ್ಚು ಹಣ ಒದಗಿಸುತ್ತಿರುವ ಹಾಗೂ ಸರ್ಕಾರದ ಯೋಜನೆಗಳಿಗೆ ಹಣ ನೀಡುವುದರಲ್ಲಿ ಒಂದು ಮಾದರಿಯೇ ಆಗಿರುವ ಎಲ್‌ಐಸಿಯಲ್ಲಿನ ತನ್ನ ಶೇರುಗಳನ್ನೂ ಮಾರಾಟ ಮಾಡುವ ಮುಖಾಂತರ ಎಲ್‌ಐಸಿಯ ಖಾಸಗಿಕರಣಕ್ಕೆ ಸರ್ಕಾರ ಮುಂದಾಗಿದೆ.

ಆದ್ದರಿಂದ ಈ ಕೇಂದ್ರ ಬಜೆಟ್ ಆರ್ಥಿಕ ಮಂದಗತಿಯನ್ನು ಎದುರಿಸುವ ಬದಲು ಬೇಡಿಕೆಯ ಕೊರತೆಯ ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸುತ್ತದೆ, ಮತ್ತು ವ್ಯಾಪಕಗೊಂಡಿರುವ ಆರ್ಥಿಕ ಯಾತನೆಗಳನ್ನು ಇನ್ನಷ್ಟು ಆಳಗೊಳಿಸುತ್ತದೆ. ನಮ್ಮದೇಶದ ಆಸ್ತಿಗಳನ್ನು ದೊಡ್ಡ ಪ್ರಮಾಣದಲ್ಲಿ ಮಾರಾಟ ಮಾಡುವುದರ ವಿರುದ್ಧ, ಎಲ್‌ಐಸಿ ಮತ್ತು ವಿಮಾ ವಲಯದಲ್ಲಿ ಶೇರು ಮಾರಾಟದ ವಿರುದ್ಧ, ನಮ್ಮ ಬಹುಪಾಲು ಜನಗಳ ಮೇಲೆ ಮತ್ತಷ್ಟು ಕಷ್ಟಕೋಟಲೆಗಳನ್ನು, ಸಂಕಟಗಳನ್ನು ಹೇರುತ್ತಿರುವುದರ ವಿರುದ್ಧ ಪ್ರತಿಭಟನೆಗಳನ್ನು ತೀವ್ರಗೊಳಿಸಬೇಕು ಎಂದು ಜನತೆಗೆ ಸಿಪಿಐ(ಎಂ) ಕರೆ ನೀಡಿದೆ.

ಕೇಂದ್ರ ಸರ್ಕಾರ ವಾಸ್ತವಿಕ ಮಾಹಿತಿ ಮತ್ತು ಅಂಕಿ ಅಂಶಗಳನ್ನು ತಿರುಚುವ ವಂಚಕ ಪ್ರಯತ್ನಗಳನ್ನು ಎಷ್ಟೇ ನಡೆಸಿದರೂ, ಆರ್ಥಿಕ ಬಿಕ್ಕಟ್ಟು ಬಜೆಟ್ಟಿನ ಅಂಕೆ-ಸಂಖ್ಯೆಗಳಲ್ಲಿ ಸ್ಪಷ್ಟವಾಗಿ ಪ್ರಕಟಗೊಂಡಿದೆ. ಮೋದಿ ಸರಕಾರಕ್ಕೆ ಕಾರ್ಪೊರೇಟ್ ವಲಯಕ್ಕೆ ಮತ್ತು ಶ್ರೀಮಂತರಿಗೆ ಪರಿಹಾರ ಕೊಡುವುದರಲ್ಲಿಯೇ ಆಸಕ್ತಿ ಇದೆಯೇ ಹೊರತು, ಆರ್ಥಿಕತೆಗೆ ಮೂಲ ಕಾರಣವಾದ, ದುಡಿಯುವ ಜನಗಳು-ಕಾರ್ಮಿಕರು, ರೈತರು ಮತ್ತು ಸ್ವಯಂ ಉದ್ಯೋಗಕ್ಕೆ ತಳ್ಳಲ್ಪಟ್ಟವರ ಉದ್ಯೋಗ ಅಭದ್ರತೆ ಮತ್ತು ಆದಾಯ ಇಳಿಕೆಯಿಂದಾಗಿ ಹೆಚ್ಚೆಚ್ಚು ಗಂಭೀರಗೊಳ್ಳುತ್ತಿರುವ ಪರಿಸ್ಥಿತಿಗಳನ್ನು ಎದುರಿಸುವ ಬಗ್ಗೆ ಯಾವುದೇ ಆಸಕ್ತಿಯನ್ನು ತೋರಿಸುತ್ತಿಲ್ಲ.

ಆದಾಯಗಳ ಬಿಕ್ಕಟ್ಟನ್ನು ಎದುರಿಸಬೇಕಾದರೆ ಬೇಡಿಕೆ ಮತ್ತು ಸಂಪನ್ಮೂಲಗಳ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು. ಅದಕ್ಕಾಗಿ ವೆಚ್ಚಗಳನ್ನು ಹೆಚ್ಚಿಸುವ ಒಂದು ಕಾರ್ಯಕ್ರಮವನ್ನು ಮುಂದಿಡುವ ಬದಲು, ಈ ಬಜೆಟ್ ಕಸರತ್ತುಗಳು ವಿತ್ತೀಯ ಕೊರತೆಯನ್ನು ಕಡಿಮೆ ಮಾಡುವುದಕ್ಕೇ ಈ ಸರಕಾರ ಬದ್ಧವಾಗಿದೆ ಎಂಬುದನ್ನು ತೋರಿಸುತ್ತಿವೆ, ಅದಕ್ಕಾಗಿ ಇವರ ಬಳಿ ಇರುವುದು ಸರ್ಕಾರದ ಖರ್ಚುಗಳನ್ನು ಕಡಿತ ಮಾಡುವ ಮತ್ತುದೇಶದ ಆಸ್ತಿಗಳನ್ನು ದೊಡ್ಡ ಕಾರ್ಪೊರೇಟ್‌ಗಳಿಗೆ ಮಾರುವ ಯೋಚನೆಯಷ್ಟೇ. ಇವೆಲ್ಲವುಗಳ ಹೊರೆಯನ್ನು ಅನುಭವಿಸಬೇಕಾದವರು ದೇಶದ ದುಡಿಯುವ ಜನಗಳು ಎನ್ನುವುದು ಸಿಪಿಐ(ಎಂ) ಅಭಿಪ್ರಾಯವಾಗಿದೆ.

ವರದಿ: ವಾ.ಉ.

ಎಲ್ಲೈಸಿ ಷೇರು ಮಾರಾಟದ ವಿರುದ್ಧ ಉಡುಪಿಯಲ್ಲಿ ನೌಕರರ ಪ್ರತಿಭಟನೆ:

ಎಲ್ಲೈಸಿಯ ಷೇರುಗಳನ್ನು ಮಾರಾಟ ಮಾಡುವ ಕೇಂದ್ರ ಸರಕಾರದ ಬಜೆಟ್ ಪ್ರಸ್ತಾಪಗಳನ್ನು ವಿರೋಧಿಸಿ ಅಖಿಲ ಭಾರತ ವಿಮಾ ನೌಕರರ ಸಂಘ, ಎಲ್ಲೈಸಿ ಅಧಿಕಾರಿಗಳ ಒಕ್ಕೂಟ ಮತ್ತು ಎಲ್ಲೈಸಿ ಅಭಿವೃದ್ಧಿ ಅಧಿಕಾರಿಗಳ ಒಕ್ಕೂಟಗಳು ಜಂಟಿಯಾಗಿ ಉಡುಪಿಯ ವಿಭಾಗೀಯ ಕಚೇರಿ ಆವರಣದಲ್ಲಿ ಮತಪ್ರದರ್ಶನ ಮತ್ತು ಪ್ರತಿಭಟನೆ ನಡೆಸಿದವು.

ಸರಕಾರದ ನಡೆಯನ್ನು ವಿರೋಧಿಸಿ ವಿಭಾಗೀಯ ಕಚೇರಿಯಲ್ಲಿ ದುಡಿಯುತ್ತಿರುವ ನೌಕರರು, ಅಧಿಕಾರಿಗಳು ಹಾಗೂ ಅಭಿವೃದ್ಧಿ ಅಧಿಕಾರಿಗಳು ಒಂದು ಗಂಟೆ ಕಾಲ 'ಹೊರ ನಡೆ ಮುಷ್ಕರ' ನಡೆಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಅಧಿಕಾರಿಗಳ ಸಂಘವು ಉಡುಪಿ ವಿಭಾಗದ ಕಾರ್ಯದರ್ಶಿ ಅಣ್ಣಯ್ಯ ನೀಲಾವರ, ವಿಮಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಭಾಕರ್ ಬಿ.ಕುಂದರ್, ಅಭಿವೃದ್ಧಿ ಅಧಿಕಾರಿಗಳ ಸಂಘದ ಪ್ರಧಾನ ಕಾರ್ಯದರ್ಶಿ ದೇವಪ್ಪ ನಾಯಕ್ ಮಾತನಾಡಿದರು. ಮಹಿಳಾ ಉಪಸಮಿತಿ ಸಂಚಾಲಕಿ ಪದ್ಮರೇಖಾ ಆಚಾರ್ಯ, ಎಸ್ಸಿಎಸ್ಟಿ ನೌಕರರ ಸಂಘದ ಗೋಪಾಲ್ ಜಿ.ನಾಯಕ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಬಿಸಿಯೂಟ ನೌಕರರಿಂದ ಮಂಗಳೂರು ಮತ್ತು ಬೆಳ್ತಂಗಡಿಯಲ್ಲಿ ಧರಣಿ

ವೇತನ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ಅಕ್ಷರದಾಸೋಹ ನೌಕರರ ಸಂಘ (ಸಿಐಟಿಯು) ನೇತೃತ್ವದಲ್ಲಿ ಅಕ್ಷರದಾಸೋಹ ನೌಕರರು ಫೆಬ್ರವರಿ 4 ರಂದು ಮಂಗಳೂರಿನಲ್ಲಿ ಮತ್ತು ಬೆಳ್ತಂಗಡಿಯಲ್ಲಿ ಧರಣಿ ಸತ್ಯಾಗ್ರಹ ನಡೆಸಿದರು.

ಬಿಸಿಯೂಟ ಯೋಜನೆಯನ್ನು ಸರಕಾರ ಕೆಲವು ಜಿಲ್ಲೆಗಳಲ್ಲಿ ಧರ್ಮಾಧಾರಿತ ಸಂಘ ಸಂಸ್ಥೆಗಳಿಗೆ ನೀಡುತ್ತಿದ್ದು, ಅದನ್ನು ಹಿಂಪಡೆದು ಸರಕಾರವೇ ಯೋಜನೆಯನ್ನು ಮುನ್ನಡೆಸಬೇಕು. ಶಾಲೆಗಳಲ್ಲಿ ಅಡುಗೆ ಕೆಲಸದೊಂದಿಗೆ 'ಡಿ' ಗ್ರೂಪ್ ನೌಕರರ ಕೆಲಸವನ್ನು ಮಾಡಿಸುವುದು ಸರಿಯಲ್ಲ; ಡಿ ಗ್ರೂಪ್ ನೌಕರರನ್ನಾಗಿ ಅಧಿಕೃತವಾಗಿ ನೇಮಿಸಬೇಕು. ಯೋಜನೆಯನ್ನು ಪದವಿಪೂರ್ವ ತರಗತಿಗಳಿಗೂ ವಿಸ್ತರಿಸಬೇಕು, ಪ್ರತಿ ಶಾಲೆಗೆ ಇಬ್ಬರು ಅಡುಗೆಯವರನ್ನು ನೇಮಿಸಬೇಕು. ಬಿಸಿಯೂಟ ನೌಕರರಿಗೆ ಹೆರಿಗೆ ರಜೆ, ಹೆರಿಗೆ ಭತ್ತೆ ನೀಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಮಂಗಳೂರಿನಲ್ಲಿ ದ.ಕ.ಜಿಲ್ಲಾ ಪಂಚಾಯತ್ ಕಚೇರಿ ಎದುರು ನಡೆದ ಧರಣಿಯನ್ನುದ್ದೇಶಿಸಿ ಜಿಲ್ಲಾ ಸಮಿತಿಯ ಅಧ್ಯಕ್ಷೆ ಪದ್ಮಾವತಿ ಶೆಟ್ಟಿ ಮಾತನಾಡಿ, ಅಕ್ಷರದಾಸೋಹ ನೌಕರರಿಗೆ ವೇತನ ಪಾವತಿಯಲ್ಲಿ ರಾಜ್ಯ ಸರಕಾರ ತಾತ್ಸಾರ ಧೋರಣೆ ಅನುಸರಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸಂಘದ ಕಾರ್ಯದರ್ಶಿ ಗಿರಿಜಾ ಮೂಡಬಿದ್ರಿ, ಖಜಾಂಚಿ ಭವ್ಯಾ ಮುಚ್ಚೂರು, ಸಿಐಟಿಯು ಮುಖಂಡರಾದ ಜಯಂತಿ ಬಿ.ಶೆಟ್ಟಿ, ಜಯಂತ ನಾಯಕ್ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಬೆಳ್ತಂಗಡಿ ತಾಲೂಕು ಅಕ್ಷರದಾಸೋಹ ನೌಕರರ ಸಂಘದ ನೇತೃತ್ವದಲ್ಲಿ ತಾಲೂಕಿನ ಬಿಸಿಯೂಟ ನೌಕರರು ಬೆಳ್ತಂಗಡಿ ತಾಲೂಕು ಪಂಚಾಯತಿ ಎದುರು ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ನಡೆಸಿದರು. ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ರಾಜ್ಯ ಸಮಿತಿ ಸದಸ್ಯ ಶಿವಕುಮಾರ್, ತಾಲೂಕು ಕಾರ್ಯದರ್ಶಿ ವಸಂತ ನಡ, ಅಕ್ಷರದಾಸೋಹ ನೌಕರರ ಸಂಘದ ಅಧ್ಯಕ್ಷೆ ಲಲಿತ ಮದ್ದಡ್ಕ ಮಾತನಾಡಿದರು. ಪ್ರತಿಭಟನೆಯ ನೇತೃತ್ವವನ್ನು ಸಂಘದ ಕಾರ್ಯದರ್ಶಿ ಸುಮಿತ್ರಾ ಹತ್ಯಡ್ಕ ಮತ್ತು ಕಾರ್ಯಕಾರಿ ಸದಸ್ಯರು ವಹಿಸಿದ್ದರು.

ಬೆಂಗಳೂರಿನಲ್ಲಿ ಬಿಸಿಯೂಟ ನೌಕರರ ರಾಜ್ಯ ಸಮಿತಿಯು ನಡೆಸಿದ ಮುಷ್ಕರದ ಸಂದರ್ಭದಲ್ಲಿ ಆಗಮಿಸಿದ ಸಚಿವರು ಬೇಡಿಕೆಗಳನ್ನು ಪರಿಶೀಲಿಸುವುದಾಗಿ ಭರವಸೆ ನೀಡಿದ ಮೇರೆಗೆ ದ.ಕ.ಜಿಲ್ಲೆಯಲ್ಲಿ ಫೆಬ್ರವರಿ 4ರ ಸಾಯಂಕಾಲವೇ ಅನಿರ್ದಿಷ್ಟ ಧರಣಿ ಸತ್ಯಾಗ್ರಹವನ್ನು ಮುಕ್ತಾಯಗೊಳಿಸಲಾಯಿತು.

ರಸ್ತೆ ಕಾಂಕ್ರೀಟೀಕರಣಕ್ಕೆ ಆಗ್ರಹಿಸಿ ಡಿವೈಎಫ್ಐ ಪ್ರತಿಭಟನೆ:

ಮಂಗಳೂರಿನ ಬಜಾಲ್ ಪಕ್ಕಲಡ್ಕದಿಂದ ಚರ್ಚ್ ರಸ್ತೆವರೆಗಿನ ರಸ್ತೆ ಕಾಂಕ್ರೀಟೀಕರಣ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಬೇಕೆಂದು ಆಗ್ರಹಿಸಿ, ಡಿವೈಎಫ್ಐ ಪಕ್ಕಲಡ್ಕ ಘಟಕದ ನೇತೃತ್ವದಲ್ಲಿ ಫೆಬ್ರವರಿ 4 ರಂದು ಪಕ್ಕಲಡ್ಕದಲ್ಲಿ ಪ್ರತಿಭಟನೆಯನ್ನು ನಡೆಸಲಾಯಿತು.

ನಗರದ ಹೊರವಲಯದ ಬಜಾಲಿನಂಥ ಪ್ರದೇಶಗಳಿಗೆ ತುರ್ತಾಗಿ ಬೇಕಾದ ಸೌಕರ್ಯಗಳನ್ನು ಒದಗಿಸುವಲ್ಲಿ ಮಂಗಳೂರು ನಗರಪಾಲಿಕೆಯಾಗಲೀ, ಸ್ಥಳೀಯ ಶಾಸಕರಾಗಲೀ ಆಸಕ್ತಿ ವಹಿಸುತ್ತಿಲ್ಲ ಎಂದು ಪ್ರತಿಭಟನಾಕಾರರು ಟೀಕಿಸಿದರು. ಪ್ರತಿಸಾರಿಯೂ ನಾಗರಿಕರು ಬೀದಿಗಿಳಿದ ಮೇಲೆಯೇ ಪಾಲಿಕೆ, ಸರಕಾರಗಳು ಎಚ್ಚೆತ್ತು ಕಾರ್ಯಪ್ರವೃತ್ತರಾಗುವುದು ಖಂಡನೀಯ. ಕಾಮಗಾರಿಗಳನ್ನು ವಿಳಂಬ ಮಾಡುತ್ತಿರುವ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಡಿವೈಎಫ್ಐ ದ.ಕ. ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ನಗರ ಸಮಿತಿ ಅಧ್ಯಕ್ಷ ನವೀನ್ ಕೊಂಚಾಡಿ ಮಾತನಾಡಿದರು. ಪಕ್ಕಲಡ್ಕ ಘಟಕದ ಮುಖಂಡರಾದ ದೀರಜ್ ಪಕ್ಕಲಡ್ಕ, ವರಪ್ರಸಾದ್, ಅಶೋಕ್ ಎನೆಲ್‌ಮಾರ್ ಆನಂದ ಎನೆಲ್‌ಮಾರ್, ಪ್ರಕಾಶ್ ಶೆಟ್ಟಿ ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಸ್ಥಳೀಯ ಮುಖಂಡರಾದ ದೀಪಕ್ ಬೊಲ್ಲ, ಡಾಫ್ಲಾಯಿಡ್ ಡಿಸೋಜ, ಅಶೋಕ್ ಸಾಲ್ಯಾನ್, ಉದಯ ಕುಂಟಲಗುಡ್ಡೆ ಮುಂತಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಪಾಲಿಕೆಯ ಇಬ್ಬರು ಇಂಜಿನಿಯರ್‌ಗಳು ಆಗಮಿಸಿ ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿದರು.



ಕಾ. ಕೂಸಪ್ಪ ಗಟ್ಟಿ ನಿಧನ:

ಸಿಪಿಐ(ಎಂ) ಪಕ್ಷದ ಹಿರಿಯ ಸದಸ್ಯ ಹಾಗೂ ನಿಷ್ಠಾವಂತ ಕಾರ್ಯಕರ್ತರಾಗಿದ್ದ ಕೂಸಪ್ಪ ಗಟ್ಟಿ 70 ವರ್ಷ ಅವರು ತೊಕ್ಕೊಟ್ಟು ಸಮೀಪದ ಕುಂಪಲದ ತಮ್ಮ ಸ್ವಗೃಹದಲ್ಲಿ ಅಲ್ಪಕಾಲದ ಅಸೌಖ್ಯದಿಂದ ಫೆಬ್ರವರಿ 1 ರಂದು ನಿಧನರಾಗಿದ್ದಾರೆ. ಅವರು ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾಗಿದ್ದ ಸೋದರ ವಾಸು ಗಟ್ಟಿ, ಪತ್ನಿ ಹಾಗೂ ಮೂವರು ಮಕ್ಕಳನ್ನು ಅಗಲಿದ್ದಾರೆ.

ಮೂಲತಃ ಬಂಟ್ವಾಳದವರಾಗಿದ್ದ ಕೂಸಪ್ಪ ಗಟ್ಟಿ ಅವರು ಇನ್ನೂ ಹುಡುಗವಯಸ್ಸಿನಲ್ಲೇ ಕಮ್ಯೂನಿಸ್ಟ್ ಚಳುವಳಿಯತ್ತ ಆಕರ್ಷಿತರಾಗಿದ್ದರು. ಬಂಧನಕ್ಕೂ ಒಳಗಾಗಿದ್ದರು. 1972 ರಲ್ಲಿ ನಡೆದ ಆಹಾರ ಚಳುವಳಿಯಲ್ಲಿ ಕ್ರಿಯಾಶೀಲ ಪಾತ್ರ ವಹಿಸಿದ್ದರು. ಬಳಿಕ ಮಂಗಳೂರಿಗೆ ವಾಸ್ತವ್ಯವನ್ನು ಬದಲಾಯಿಸಿದ ಅವರು ಸಿಪಿಐ(ಎಂ) ಪಕ್ಷದ ಕಾರ್ಯಕರ್ತನಾಗಿ ಮಂಗಳೂರು ನಗರದ ಪಕ್ಷದ ಮೈದಾನು ಕಚೇರಿಯಲ್ಲಿ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಕಾರ್ಮಿಕ ರಂಗದಲ್ಲಿ ತೊಡಗಿಸಿಕೊಂಡು, ಸಾರಿಗೆ ರಂಗದಲ್ಲಿರುವ ನೌಕರರ ಮಧ್ಯೆ ಸಂಘಟನಾ ಕೆಲಸಕ್ಕೆ ದುಮುಕಿ ಪಕ್ಷದ ಸಾರಿಗೆ ಶಾಖೆಯ ಕಾರ್ಯದರ್ಶಿಯಾಗುವ ಮೂಲಕ ಜಿಲ್ಲಾ ಕೇಂದ್ರದಲ್ಲಿ ನಡೆಯುತ್ತಿದ್ದ ಎಲ್ಲಾ ಹೋರಾಟಗಳಲ್ಲಿ ಸಕ್ರಿಯ ಪಾತ್ರ ವಹಿಸುತ್ತಿದ್ದರು. ಕೆಲವು ವರ್ಷಗಳಿಂದೀಚೆಗೆ ಕುಂಪಲ ಎಂಬಲ್ಲಿ ಮನೆ ಮಾಡಿ ಪತ್ನಿ ಮಕ್ಕಳೊಂದಿಗೆ ವಾಸಿಸುತ್ತಿದ್ದರು.

ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಸದಸ್ಯರಾದ ವಸಂತ ಆಚಾರಿ, ಜೆ.ಬಾಲಕೃಷ್ಣ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ಕೃಷ್ಣಪ್ಪ ಸಾಲ್ಯಾನ್, ಯು.ಬಿ.ಲೋಕಯ್ಯ, ವಾಸುದೇವ ಉಚ್ಚಿಲ, ಮುನೀರ್ ಕಾಟಿಪಳ್ಳ, ಪದ್ಮಾವತಿ ಶೆಟ್ಟಿ, ಜಯಂತ ನಾಯಕ್ ಅವರುಗಳು ಕೂಸಪ್ಪ ಗಟ್ಟಿಯವರ ಮನೆಗೆ ಭೇಟಿಯಿತ್ತು ಗೌರವ ವಂದನೆ ಸಲ್ಲಿಸಿದರು.

ಕಾರ್ಮಿಕ ಹೋರಾಟಗಾರ ಕಾಮ್ರೇಡ್ ವಿ.ಕೆ. ಬಾಳಿಕಾಯಿ ಶ್ರದ್ಧಾಂಜಲಿ ಸಭೆ



ಹಾವೇರಿ: ಅನಾರೋಗ್ಯದಿಂದ ನಿಧನರಾದ ಹಾವೇರಿ ಜಿಲ್ಲಾ ಗ್ರಾಮ ಪಂಚಾಯತ ನೌಕರರ ಸಂಘಟನೆ ಸಿಐಟಿಯು ಜಿಲ್ಲಾ ಅಧ್ಯಕ್ಷರಾಗಿದ್ದ ಕಾಮ್ರೇಡ್ ವಿ.ಕೆ. ಬಾಳಿಕಾಯಿಯವರ ಸ್ವಗ್ರಾಮ ಹಾನಗಲ್ ತಾಲೂಕಿನ ಕೂಡಲದಲ್ಲಿ ಶ್ರದ್ಧಾಂಜಲಿ ಸಭೆ ನಡೆಸಲಾಯಿತು.

ಶ್ರದ್ಧಾಂಜಲಿ ಸಭೆಯನ್ನುದ್ದೇಶಿಸಿ ಗ್ರಾಮ ಪಂಚಾಯತ ನೌಕರರ ಸಂಘದ ರಾಜ್ಯಾಧ್ಯಕ್ಷರಾದ ಕಾಮ್ರೇಡ್ ಮಾರುತಿ ಮಾನ್ಪಡೆ ಮಾತನಾಡಿ ವಿ.ಕೆ. ಬಾಳಿಕಾಯಿ ಅವರ ನಿಧನ ಕಾರ್ಮಿಕ ವರ್ಗಕ್ಕೆ ನಷ್ಟ ಉಂಟಾಗಿದೆ. ಕಾರ್ಮಿಕರ ಹಕ್ಕುಗಳಿಗಾಗಿ 25 ವರ್ಷ ಹಗಲು ರಾತ್ರಿ ಶ್ರಮಿಸಿದರು. ಗ್ರಾಮ ಪಂಚಾಯತಿ ನೌಕರರು ಹೋರಾಟದ ನಾಯಕತ್ವದ ಜೊತೆಗೆ ಅನೇಕ ಶ್ರಮಿಕರ, ಶೋಷಿತರ, ವಿದ್ಯಾರ್ಥಿ-ಯುವಜನ, ರೈತ ಚಳುವಳಿಯಲ್ಲಿ ಭಾಗಿಯಾಗಿದ್ದರು. ಕಾರ್ಮಿಕ ಚಳುವಳಿಗೆ ಬಾಳಿಕಾಯಿಯವರ ಪಾತ್ರದೊಡ್ಡದು. ಗ್ರಾಮ ಪಂಚಾಯತಿ ನೌಕರರ ಕಾಯಂ ಮಾಡಬೇಕು ಎಂದು ಕನಸು ಕಂಡಿದ್ದರು. ಅವರ ಆಶಯಗಳನ್ನು ಈಡೇರಿಸಲು ಬಲಿಷ್ಠ ಚಳುವಳಿ ಕಟ್ಟಲು ಮುಂದಾಗೋಣ. ಅವರ ಶ್ರಮದಾಯಕ ತತ್ವಗಳನ್ನು ಅಳವಡಿಸಿಕೋಳ್ಳೋಣ ಎಂದರು.

ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ ಮಾತನಾಡಿ ಚಳುವಳಿಯನ್ನು ಕಟ್ಟುವ ಮಾರ್ಗದರ್ಶಕವಾಗಿ ಕಾರ್ಮಿಕ ವ್ಹಿ.ಕೆ. ಬಾಳಿಕಾಯಿಯವರು ನಮ್ಮೊಂದಿಗೆ ಸದಾ ಉತ್ಸಾಗಿಗಳಾಗಿದ್ದವರು. ಅವರು ಸದಾ ಕ್ರೀಯಾಶೀಲರಾಗಿ ಹೋರಾಟದ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದರು. ಹೋರಾಟದ ಮೂಲಕ ದುಡಿಯುವ ವರ್ಗಕ್ಕೆ ನೆಮ್ಮದಿಯ ಬದುಕು ಒದಗಿಸುವ ಉದ್ದೇಶ ಇಟ್ಟುಕೊಂಡು ಮುನ್ನುಗ್ಗುತ್ತಿದ್ದರು. ಅಗವ ಅಗಲಿಕೆ ದುಡಿಯುವ ವರ್ಗಕ್ಕೆ ತುಂಬಲಾರದ ನಷ್ಟ ಉಂಟು ಮಾಡಿದೆ. ಕುಟುಂಬ ವರ್ಗದವರಿಗೆ ಭಗವಂತ ಅಗಲಿಕೆಯ ದುಃಖ ಭರಿಸುವ ಶಕ್ತಿ ನೀಡಲಿ ಎಂದು ಶ್ರದ್ಧಾಂಜಲಿ ಸಲ್ಲಿಸಿದರು.

ಬೆಂಗಳೂರಲ್ಲಿ ಬಿಸಿಯೂಟ ತಯಾರಕರ ಬೃಹತ್ ಪ್ರತಿಭಟನೆ



ಕನಿಷ್ಠ ವೇತನ ಜಾರಿ ಹಾಗೂ ಸೇವಾ ಭದ್ರತೆಗೆ ಕಲ್ಪಿಸಬೇಕು, ಖಾಸಗಿ ಸಂಸ್ಥೆಗಳಿಗೆ ಬಿಸಿಯೂಟ ನಿರ್ವಹಣೆ ವಹಿಸುವ ಹುನ್ನಾರ ಕೈಬಿಡಬೇಕು. ನಮ್ಮನ್ನು ಕಾರ್ಮಿಕರೆಂದು ಪರಿಗಣಿಸಿ ಕಾರ್ಮಿಕ ಕಾಯ್ದೆಯಡಿ ತರಬೇಕೆಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಇಟ್ಟುಕೊಂಡು ಬಿಸಿಯೂಟ ತಯಾರಕರು ನಗರದಲ್ಲಿಂದು ಪೊಲೀಸರ ಅನುಮತಿ ನಿರಾಕರಣೆ ನಡುವೆಯೂ ಬೃಹತ್ ಪ್ರತಿಭಟನೆ ನಡೆಸಿದರು.

ದಾವಣಗೆರೆ, ಹಾವೇರಿ, ಗದಗ, ಬಳ್ಳಾರಿ, ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ, ರಾಮನಗರ, ತುಮಕೂರು, ಬೀದರ್, ಯಾದಗಿರಿ ಸೇರಿದಂತೆ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಬಿಸಿಯೂಟ ಕಾರ್ಯಕರ್ತೆಯರು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಿಂದ ಫ್ರೀಡಂ ಪಾರ್ಕ್‌ವರೆಗೆ ರ್ಯಾಲಿ ನಡೆಸಲು ಮುಂದಾದರಾದರೂ ಅದಕ್ಕೆ ಪೊಲೀಸರು ಅವಕಾಶ ನೀಡದ ಕಾರಣ ರೈಲ್ವೆ ನಿಲ್ದಾಣದ ಬಳಿಯೇ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಗೆ ಅವಕಾಶ ನೀಡದಿದ್ದರೂ ಪ್ರತಿಭಟನೆಗೆ ಕರೆ ಕೊಟ್ಟಿದ್ದ ಸಿಐಟಿಯು ರಾಜ್ಯಾಧ್ಯಕ್ಷೆ ಹಾಗೂ ರಾಜ್ಯ ಅಕ್ಷರ ದಾಸೋಹ ಗೌರವ ಅಧ್ಯಕ್ಷೆ ವರಲಕ್ಷ್ಮಿ ಅವರನ್ನು ಉಪ್ಪಾರಪೇಟೆ ಪೊಲೀಸರು ಮುಂಜಾಗ್ರತಾ ಕ್ರಮವಾಗಿ ವಶಕ್ಕೆ ಪಡೆದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮುಖ್ಯ ಅಡುಗೆಯವರಿಗೆ 2,700 ರೂ. ಸಹಾಯಕ ಅಡುಗೆಯವರಿಗೆ 2,600 ರೂ. ನೀಡಲಾಗುತ್ತಿದೆ.

ರಾಜ್ಯ ಸರ್ಕಾರ ಶೇ.75ರಷ್ಟು, ಕೇಂದ್ರ ಸರ್ಕಾರ ಶೇ.25 ರಷ್ಟು ಹಣ ಪಾವತಿ ಮಾಡುತ್ತಿದೆ. ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಇವರು ಬಿಸಿಯೂಟ ತಯಾರು ಮಾಡುತ್ತಾರೆ. ಶಾಲೆಗಳಲ್ಲಿ ಹೆಚ್ಚುವರಿ ಮೆನು ಜಾರಿಗೆ ತಂದಿದ್ದಾರೆ. ಇದರಿಂದ ಕೆಲಸ ಮಾಡಲು ಆಗುತ್ತಿಲ್ಲ. ಒಟ್ಟು 1.18 ಲಕ್ಷ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಬೆಳಗ್ಗೆ 9 ರಿಂದ ಸಂಜೆ 4ರವರೆಗೆ ಸ್ಕೂಲ್‌ಗಳಲ್ಲಿ ಕೆಲಸ ಮಾಡಿಸಲಾಗುತ್ತಿದೆ. ಇಷ್ಟು ಪ್ರಮಾಣದಲ್ಲಿ ಕೆಲಸ ಮಾಡುವವರಿಗೆ ಕನಿಷ್ಠ ವೇತನ ನೀಡಲಾಗುತ್ತಿಲ್ಲ ಎಂದು ಆರೋಪಿಸಿದರು.

ಬೇಡಿಕೆಗಳು ಈಡೇರುವವರೆಗೂ ಪ್ರತಿಭಟನೆಯನ್ನು ಹಿಂತೆಗೆದುಕೊಳ್ಳುವುದಿಲ್ಲ. ಬೆಂಗಳೂರು ನಗರ ಪೊಲೀಸ್ ಆಯುಕ್ತರು ಪ್ರತಿಭಟನೆಯನ್ನು ಹತ್ತಿಕ್ಕುವ ಕೆಲಸ ಮಾಡುತ್ತಿದ್ದಾರೆ. ಮಹಿಳೆಯರು ತಮ್ಮ ಹಕ್ಕನ್ನು ಕೇಳುವುದು ತಪ್ಪೇ ಎಂದು ಪ್ರಶ್ನಿಸಿದರು.

ಕೋಲಾರ, ಪಾವಗಡ, ಚಾಮರಾಜನಗರ, ಗುಡಿಬಂಡೆ ಸೇರಿದಂತೆ ವಿವಿಧೆಡೆಯಿಂದ ಬೆಂಗಳೂರಿಗೆ ಪ್ರತಿಭಟನೆಗೆ ಹೊರಟ ಕಾರ್ಯಕರ್ತರನ್ನು ತಡೆಯುವ ಕೆಲಸವನ್ನು ಮಾಡಲಾಗಿದೆ. ಗುಡಿಬಂಡೆಯಲ್ಲಿ ಪೊಲೀಸರು ಮತ್ತು ಕಾರ್ಯಕರ್ತೆಯರ ನಡುವೆ ಮಾತಿನ ಚಕಮಕಿ ನಡೆದಿದೆ. ನಾವು ನಡೆದುಕೊಂಡು ಹೋಗಿಯಾದರೂ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುತ್ತೇವೆ ಎಂದು ಕಾರ್ಯಕರ್ತೆಯರು ಹೇಳಿದ್ದಾರೆ. ಇತ್ತ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಲ್ಲಿ ಧರಣಿ ಕುಳಿತಿರುವ ಪ್ರತಿಭಟನಾನಿರತ ಬಿಸಿಯೂಟ ಕಾರ್ಯಕರ್ತೆಯರು ಅಹೋರಾತ್ರಿ ಧರಣಿ ನಡೆಸಿದ್ದರು.

ಬೇಡಿಕೆ ಈಡೇರುವವರೆಗೆ ನಾವು ಪ್ರತಿಭಟನೆಯಿಂದ ಹಿಂದೆ ಸರಿಯುವುದಿಲ್ಲ. ಕೇವಲ 2,700 ರೂ.ಗಳಲ್ಲಿ ಜೀವನ ಮಾಡುವುದು ಹೇಗೆ? ಸರ್ಕಾರಗಳು ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ಈ ಹಿಂದೆಯೂ ಹಲವಾರು ಬಾರಿ ಹೋರಾಟ ಮಾಡಿದ್ದೇವೆ. ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಂಡಿಲ್ಲ. ಹಾಗಾಗಿ ಮತ್ತೆ ಹೋರಾಟಕ್ಕೆ ಬಂದಿದ್ದೇವೆ. ನಮಗೆ ವೇತನ ಹೆಚ್ಚಳ ಮಾಡಬೇಕು. ಅಕ್ಷರ ದಾಸೋಹ ಕಾರ್ಯಕ್ರಮವನ್ನು ಖಾಸಗಿಯವರಿಗೆ ವಹಿಸುವ ಕ್ರಮವನ್ನು ಕೈಬಿಡಬೇಕು ಎಂದು ಆಗ್ರಹಿಸಿದರು.

ಶಾಂತಿಯುತ ಪ್ರತಿಭಟನೆಗೆ ಅಡ್ಡಿಪಡಿಸುವುದು ಸಂವಿಧಾನ ಉಲ್ಲಂಘನೆ ಅಲ್ಲವೇ?

ಪ್ರತಿಭಟನೆಗೆ ಅನುಮತಿಯನ್ನೂ ಕೇಳಲಾಗಿತ್ತು. ಪೊಲೀಸ್ ಇಲಾಖೆ ಮಾತ್ರ ಪ್ರತಿಭಟನೆ ನಡೆಸಲು ಅನುಮತಿ ನಿರಾಕರಿಸಿತು. ಬಿಸಿಯೂಟ ಕಾರ್ಯಕರ್ತರು ಬೆಂಗಳೂರು ಪ್ರವೇಶಿಸದಂತೆ ಆಯಾ ಜಿಲ್ಲೆಗಳಲ್ಲೇ ತಡೆಯಲು ಸೂಚನೆ ಕೊಡಲಾಗಿತ್ತು.

ರಾಜ್ಯ ಸರ್ಕಾರದ ವಿರುದ್ಧ ಅಂಗನವಾಡಿ ಕಾರ್ಯಕತೆಯರು, ಬಿಸಿಯೂಟ ಕಾರ್ಯಕತೆಯರು, ಆಶಾ ಕಾರ್ಯಕತೆಯರು ಸೇರಿದಂತೆ ಒಂದಲ್ಲ ಒಂದು ಸಂಘಟನೆ ಪ್ರತಿಭಟನೆ ನಡೆಸುತ್ತಿರುವುದು ಸಾಮಾನ್ಯ. ಆದರೆ ಪ್ರ5ತಿಭಟನೆ ಮಾಡಿದ ಬಳಿಕ ಸರ್ಕಾರ ಎಲ್ಲಾ ಬೇಡಿಕೆಗಳನ್ನು ಈಡೇರಿಸುತ್ತದೆ ಎನ್ನುವ ನಂಬಿಕೆ ಇರಲ್ಲ. ಆದರೂ ಪ್ರತಿಭಟನಾಕಾರರು ಸರ್ಕಾರಕ್ಕೆ ತಮ್ಮ ಕೂಗು ಕೇಳಿಸ ಬೇಕು ಎನ್ನುವ ಕಾರಣದಿಂದ ಸಾವಿರಾರು ಜನರು ಜಮಾಯಿಸಿ ಪ್ರತಿಭಟನೆ ಮಾಡುತ್ತಾರೆ. ಇವತ್ತು ರಾಜ್ಯ ಬಿಸಿಯೂಟ ತಯಾರಕ ಸಂಘದಿಂದ ಪ್ರಭಟನೆಗೆ ಕರೆ ಕೊಡಲಾಗಿತ್ತು, ಪೊಲೀಸರ ಬಳಿ ಪ್ರತಿಭಟನೆಗೆ ಅನುಮತಿಯನ್ನೂ ಕೇಳಲಾಗಿತ್ತು. ಪೊಲೀಸ್ ಇಲಾಖೆ ಮಾತ್ರ ಪ್ರತಿಭಟನೆ ನಡೆಸಲು ಅನುಮತಿ ನಿರಾಕರಿಸಿತು. ಅಲ್ಲದೆ ಬಿಸಿಯೂಟ ಕಾರ್ಯಕರ್ತರು ಬೆಂಗಳೂರು ಪ್ರವೇಶ ಮಾಡದಂತೆ ತಮ್ಮ ತಮ್ಮ ಜಿಲ್ಲೆಗಳಲ್ಲೇ ತಡೆಯಲು ಜಿಲ್ಲಾಡಳಿತಗಳಿಗೆ ಸೂಚನೆ ಕೊಡಲಾಗಿತ್ತು.

ಪ್ರತಿಭಟನಾ ಸ್ಥಳದಲ್ಲಿ ನಿಷೇಧಾಜ್ಞೆ ಜಾರಿ ಮಾಡಲಾಗಿತ್ತು. ಆದರೂ ರಾಜಧಾನಿಯತ್ತ ಸಾವಿರಾರು ಜನ ಬಿಸಿಯೂಟ ಕಾರ್ಯಕರ್ತೆಯರು ಜಮಾಯಿಸಿದರು. ಬೆಂಗಳೂರಿನ ಮೆಜೆಸ್ಟಿಕ್ ರೈಲ್ವೆ ನಿಲ್ದಾಣಕ್ಕೆ ಆಗಮಿಸಿರುವ ಸಾವಿರಾರು ಕಾರ್ಯಕರ್ತೆಯರು ಅಲ್ಲಿಂದ ಹೊರಬಾರದಂತೆ ತಡೆಯಲಾಯಿತು. ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಬಿಸಿಯೂಟ ಕಾರ್ಯಕರ್ತರಿಂದ ಅಹೋರಾತ್ರಿ ಧರಣಿಗೂ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಸಿಐಟಿಯು ರಾಜ್ಯಾಧಕ್ಷೆ ವರಲಕ್ಷ್ಮೀ ನೇತೃತ್ವದಲ್ಲಿ ಮುಷ್ಕರಕ್ಕೆ ಕರೆ ಕೊಟ್ಟ ಬಳಿಕ ಬೆಂಗಳೂರಿನಲ್ಲಿ ಪ್ರತಿಭಟನೆಗೆ ಅವಕಾಶ ನೀಡದ ನಗರ ಪೊಲೀಸ್ ಆಯುಕ್ತ ಭಾಸ್ಕರ್ ರಾವ್ 144 ಸೆಕ್ಷನ್ ಜಾರಿ ಮಾಡಿದ್ದರು. ವರಲಕ್ಷ್ಮೀಯವರನ್ನು ಮುಂಜಾಗ್ರತಾ ಕ್ರಮವಾಗಿ ಉಪ್ಪಾರಪೇಟೆ ಪೊಲೀಸರು ವಶಕ್ಕೆ ಪಡೆದಿದ್ದರು.

7 ಕ್ರೂಸರ್ ವಾಹನಗಳಲ್ಲಿ ಬಂದ ನೂರಾರು ಬಿಸಿಯೂಟ ಕಾರ್ಯಕರ್ತೆಯರನ್ನು ಪೀಣ್ಯದ ಬಳಿಯೇ ಬಾಗಲಗುಂಟೆ ಪೊಲೀಸರು ವಶಕ್ಕೆ ಪಡೆದಿದ್ದರು. ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಲ್ಲಿ ಸುಮಾರು ನಾಲ್ಕೈದು ಸಾವಿರ ಬಿಸಿಯೂಟ ಕಾರ್ಯಕರ್ತೆಯರನ್ನು ತಡೆದು ನಿಲ್ಲಿಸಲಾಗಿತ್ತು. ಕ್ಷಣ ಕ್ಷಣಕ್ಕೂ ಬಿಸಿಯುಟ ಕಾರ್ಯಕರ್ತೆಯರ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪೊಲೀಸ್ ಸರ್ಪಗಾವಲು ಹೆಚ್ಚಿಸಲಾಯಿತು. ಡಿಸಿಪಿ, 3 ಜನ ಎಸಿಪಿ, 12 ಪಿಎಸ್‌ಐ, 500 ಕ್ಕೂ ಹೆಚ್ಚು ಪೊಲೀಸರ ನಿಯೋಜನೆ ಮಾಡಲಾಗಿತ್ತು.

ಬೇಡಿಕೆಗಳೇನು..?

ಖಾಸಗೀಕರಣ ಮಾಡುವ ಆಲೋಚನೆಯನ್ನು ಕೈ ಬಿಡಬೇಕು, ಕನಿಷ್ಟ ಕೂಲಿ ಹೆಚ್ಚಳ ಮಾಡಬೇಕು. ನಮ್ಮ ಮುಂದಿನ ಜೀವನಕ್ಕಾಗಿ ನಿವೃತ್ತಿ ವೇತನ ನೀಡಬೇಕು ಎನ್ನುವುದಾಗಿದೆ. ಆದರೆ ಬಿಸಿಯೂಟ ಕಾರ್ಯಕರ್ತೆಯರ ಪ್ರತಿಭಟನೆಗೆ ಪರ್ಮಿಶನ್ ಕೊಟ್ಟಿಲ್ಲ ಎಂದು ಡಿಸಿಪಿ ರಮೇಶ್ ಬಾನೋತ್ ಹೇಳಿದ್ದಾರೆ.

ಅವರು ಕೊಟ್ಟಿರುವ ಕಾರಣಗಳೆಂದರೆ, ಬೆಂಗಳೂರಿನಲ್ಲಿ 15 ರಿಂದ 20 ಸಾವಿರ ಜನ ಬಂದರೆ ಪ್ರತಿಭಟನೆಗೆ ಜಾಗದ ಕೊರತೆ ಇದೆ. ಕಳೆದ ಬಾರಿ ಪ್ರತಿಭಟನೆ ವೇಳೆ ಶೇಷಾದ್ರಿ ರಸ್ತೆಯಲ್ಲಿ ಸಾಕಷ್ಟು ಟ್ರಾಫಿಕ್ ಸಮಸ್ಯೆ ಉಂಟಾಗಿತ್ತು. ಆಂಬುಲೆನ್ಸ್ ಓಡಾಟಕ್ಕೂ ಸಹ ಅಡ್ಡಿಯಾಗಿತ್ತು. ಯಾವುದೇ ಕಾರಣಕ್ಕೂ ಇಂದಿನ ಬಿಸಿಯೂಟ ಕಾರ್ಯಕರ್ತೆಯ ಜಾಥಾ ಮತ್ತು ಪ್ರತಿಭಟನೆಗೆ ಅವಕಾಶ ನೀಡುವುದಿಲ್ಲ ಎಂದಿದ್ದಾರೆ. ಆದರೆ ಪ್ರತಿಭಟನೆಗೆ ಸಜ್ಜಾಗಿ ಬಂದಿರುವ ಕಾರ್ಯಕರ್ತೆಯರು ಏನೇ ಆದರೂ ಸರಿ ಪ್ರತಿಭಟನೆ ಕೈಬಿಡಲ್ಲ. ವಶಕ್ಕೆ ಪಡೆದಿರುವ ಮುಖ್ಯಸ್ಥೆ ವರಲಕ್ಷ್ಮಿ ಬಿಡುಗಡೆ ಮಾಡಬೇಕು. ಶಿಕ್ಷಣ ಸಚಿವರೇ ಖುದ್ದು ಬಂದು ಮಾತನಾಡಬೇಕು ಎಂದು ಆಗ್ರಹಿಸಿದ್ದರು.

ಪ್ರತಿಭಟನೆ ನಡೆಸಲು ಭಾರತದ ಸಂವಿಧಾನದಲ್ಲೇ ಅವಕಾಶ ಇದೆ. ಆಳುವ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುವುದು ಮೂಲಭೂತ ಹಕ್ಕುಗಳಲ್ಲಿ ಒಂದಾಗಿದೆ. ಪ್ರತಿಭಟನೆ ವೇಳೆ ವಿಧ್ವಂಸಕ ಕೃತ್ಯಗಳನ್ನು ಎಸಗಿದರೆ, ಸಾರ್ವಜಮಿಕ ಆಸ್ತಿ ಪಾಸ್ತಿಗೆ ನಷ್ಟ ಉಂಟು ಮಾಡಿದರೆ ಪ್ರತಿಭಟನೆಯನ್ನು ಪೊಲೀಸರು ತಡೆಯಬಹುದು. ಬಿಸಿಯೂಟ ಕಾರ್ಯಕರ್ತೆಯರು ಯಾವುದೇ ಬಸ್‌ಗೆ ಕಲ್ಲು ಹೊಡೆದಿಲ್ಲ. ಸರ್ಕಾರಿ ಕಚೇರಿಗೆ ನುಗ್ಗಿ ದಾಂಧಲೆಯನ್ನೂ ಮಾಡಿಲ್ಲ. ಆದರೂ ಪೊಲೀಸರು ಕುಂಟು ನೆಪ ಹೇಳಿ ಪ್ರತಿಭಟನೆಯನ್ನು ಹತ್ತಿಕ್ಕುತ್ತಿರುವುದು ಸಂವಿಧಾನ ಮೂಲ ಆಶಯಕ್ಕೆ ಧಕ್ಕೆ ತಂದಂತಾಗಿದೆ.

ಸಾವಿರಾರು ಜನರು ಪ್ರತಿಭಟನೆ ಮಾಡಲು ಸ್ಥಳಾವಕಾಶದ ಕೊರತೆ ಇದೆ ಎಂದರೆ, ಸರ್ಕಾರ ಸೂಕ್ತ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು, ಟ್ರಾಫಿಕ್ ಜಾಮ್ ಆಗುತ್ತೆ, ಆಂಬ್ಯುಲೆನ್ಸ್ ಓಡಾಟಕ್ಕೆ ಅಡ್ಡಿಯಾಗುತ್ತೆ ಎನ್ನುವುದು ಸಕಾರಣವಲ್ಲ. ಪ್ರತಿಭಟನೆ ವೇಳೆ ಗುಂಡಾವರ್ತನೆ ಮಾಡಿದ್ದರೆ, ಉದ್ದೇಶಪೂರ್ವಕವಾಗಿ ದೊಂಬಿ, ಗಲಾಟೆ ಸೃಷ್ಟಿಸಿದ ಆರೋಪವಿದ್ದರೆ ಪ್ರತಿಭಟನೆಗೆ ಅವಕಾಶ ನಿರಾಕರಿಸುವ ಅಧಿಕಾರ ಪೊಲೀಸರಿಗೆ ಇರಬಹುದು. ಅದನ್ನು ಬಿಟ್ಟು ಪೊಲೀಸರು ಮನಸೋಇಚ್ಛೆ ಅನುಮತಿ ನಿರಾಕರಿಸುವಂತಿಲ್ಲ. ಬಿಸಿಯೂಟ ಕಾರ್ಯಕರ್ತೆಯರ ಮುಖಂಡರು ಪೊಲೀಸರ ಕ್ರಮದ ವಿರುದ್ಧ ಹೈಕೋರ್ಟ್ ಮೆಟ್ಟಿಲೇರಿದರೆ ಖಾಕಿಪಡೆಗೆ ಛೀಮಾರಿ ಕಟ್ಟಿಟ್ಟ ಬುತ್ತಿ.

ನಂತರ ಸ್ಥಳಕ್ಕೆ ಬೇಟಿ ನೀಡಿದ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಉಮಾಶಂಕರ್ ಫೆಬ್ರುವರಿ 13 ರಂದು ಶಿಕ್ಷಣ ಸಚಿವರಾದ ಸುರೇಶ್ ಕುಮಾರ್ ಸಂಘಟನೆಯ ಮುಖಂಡರ ಸಭೆ ಕರೆದಿದ್ದಾರೆ. ಪ್ರತಿಭಟನೆ ಕೈ ಬಿಡಿ, ವಶಕ್ಕೆ ಪಡೆದಿದ್ದ ಮುಖಂಡರನ್ನು ಬಿಡುಗಡೆ ಮಾಡುವುದಾಗಿ ಲಿಖಿತ ಭರವಸೆಯನ್ನು ನೀಡಿದರು. ಕಾರ್ಯಕರ್ತೆಯರು ತಮ್ಮ ಮುಕಂಡರೊಂದಿಗೆ ಚರ್ಚಿಸಿ ಪ್ರತಿಭಟನೆಯನ್ನು ತಾತ್ಕಾಲಿಕವಾಗಿ ಹಿಂತೆಗೆದುಕೊಂಡರು.

➘ ಮುಖಂಡ ಉಪಾಧ್ಯಕ್ಷರಾದ ಬಿ.ಐ. ಈಳಗೇರ, ಸಿಐಟಿಯು ಜಿಲ್ಲಾ ಸಂಚಾಲಕ ವಿನಾಯಕ ಕುರುಬರ, ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷರಾದ ಸುಭಾಸ್ ಎಂ, ಜಿಲ್ಲಾ ಪಂಚಾಯತ ಸದಸ್ಯರಾದ ಮಾಲತೇಶ ಸೊಪ್ಪಿನ, ಗ್ರಾಮ ಪಂಚಾಯತಿ ನೌಕರ ಸಂಘದ ಜಿಲ್ಲಾ ಕಾರ್ಯದರ್ಶಿ ಜಗದೀಶ್ ಕೋಟಿ, ಮುಖಂಡರಾದ ಅಂದಾನೆಪ್ಪ ಹೆಬಸೂರು, ನಾರಾಯಣ ಕಾಳೆ, ಗಂಗಯ್ಯ ಕುಲಕರ್ಣಿ ಮಾತನಾಡಿದರು.

ಮುಖಂಡರಾದ ಬಸವರಾಜ ಭೋವಿ, ಅಣ್ಣಪ್ಪ ಚಿಕ್ಕಣ್ಣವರ, ನಿಂಗಪ್ಪ ಎಂ. ಆರೇರ, ವಿಜಯಕುಮಾರ್ ಮಿಳ್ಳಿ, ಎಂಬಿ ಬಾರ್ಕಿ, ಮುಸ್ತಾಕ ಕೊಲ್ಲಾಪುರ, ಅಜ್ಜಪ್ಪ, ದಯಾನಂದ, ಜಯಣ್ಣ ಸಂಗನಗೌಡರ ಗ್ರಾಮಸ್ಥರು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

CITU ರಾಜ್ಯಾಧ್ಯಕ್ಷರಾದ ಎಸ್. ವರಲಕ್ಷ್ಮಿ ಯವರ ಬಂಧನ

20 ಕ್ಕೂ ಹೆಚ್ಚು ಜನರ ಪೊಲೀಸ್ ರ ತಂಡ CITU ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮಿ ಯವರನ್ನು ಬಂಧಿಸಿತು. 144 ಸೆಕ್ಷನ್ ಮೂಲಕ ಬಿಜೆಪಿ ಸರಕಾರ ಹೋರಾಟಗಳನ್ನು ಹತ್ತಿಕ್ಕುವ ಪ್ರಯತ್ನ ಮಾಡುತ್ತಿದೆ ಎಂದು ಅವರು ಸರ್ಕಾರದ ಕ್ರಮವನ್ನು ಖಂಡಿಸಿದರು.

ಕಲಬುರ್ಗಿಯಲ್ಲಿ ಕೇಳಿ ಬಂದ ಭಿನ್ನದನಿಗಳು

ಕನ್ನಡ ಸಾಹಿತ್ಯ ಸಮ್ಮೇಳನದ ಗೋಷ್ಠಿಗಳಲ್ಲಿ ಚರ್ವಿತ ಚರ್ವಣವೇ ಹೆಚ್ಚು. ಸಮಕಾಲೀನ ತವಕ-ತಲ್ಲಣಗಳು, ಭಿನ್ನದನಿಗಳು ಕೇಳಿ ಬರುವುದಿಲ್ಲ ಎಂಬುದು ಸಾಮಾನ್ಯ ನಿರೀಕ್ಷೆ. ಅದರಲ್ಲೂ ಚಿಕ್ಕಮಗಳೂರು ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಕೇಂದ್ರ ಸರಕಾರ ನಡೆದುಕೊಂಡ ರೀತಿ ಮತ್ತು ಕಸಾಪ ಕೇಂದ್ರ ಘಟಕ ಅದರ ತಾಳಕ್ಕೆ ಕುಣಿದ ನಂತರ ನಿರೀಕ್ಷೆ ಇನ್ನಷ್ಟು ಕಡಿಮೆಯಾಗಿತ್ತು. ಆದರೂ ಕೇಳಿ ಬಂದ ಕೆಲವು ಭಿನ್ನ ದನಿಗಳು ಇಲ್ಲಿವೆ.



'ಮನು ಬಳಿಗಾರ್ ರಾಜೀನಾಮೆ ನೀಡಬೇಕು'

ಪರಿಷತ್ತಿಗೆ ಆಳುವ ವರ್ಗವು ನೀಡುವ ಹಣ ಜನರ ತೆರಿಗೆಯಿಂದ ಬಂದಿದ್ದು. ಅದನ್ನು ಶೃಂಗೇರಿ ಸಾಹಿತ್ಯ ಸಮ್ಮೇಳನಕ್ಕೆ ಬಿಡುಗಡೆ ಮಾಡಲು ನಿರಾಕರಿಸಿದ್ದನ್ನು ನಾನು ಸಾಹಿತಿಯಾಗಿ ತೀವ್ರವಾಗಿ ಖಂಡಿಸುತ್ತೇನೆ.. ..

ಶೃಂಗೇರಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಬದಲಾವಣೆ ಮಾಡುವಂತೆ ಆಳುವ ವರ್ಗವು ಹೇಳಿದಾಗ, ಹಾಗೆ ಮಾಡಲು ಆಗದು ಎಂದು ಮನು ಬಳಿಗಾರ್ ಸಮಜಾಯಿಷಿ ನೀಡಬೇಕಿತ್ತು. ಆದರೆ ಹಾಗೆ ಮಾಡದ ಅವರು ರಾಜೀನಾಮೆ ನೀಡಲಿ. ಸರ್ವಾಧಿಕಾರಿ ಧೋರಣೆಯಿಂದ ಮುಕ್ತಗೊಳಿಸಿ ಪರಿಷತ್ತನ್ನು ಉಳಿಸಿಕೊಳ್ಳುವ ಹೊಣೆ ನಮ್ಮೆಲ್ಲರ ಮೇಲಿದೆ.. ..

6 ಕೋಟಿ ಜನರ ಪ್ರಾತಿನಿಧಿಕ ಸಂಸ್ಥೆಯಾಗಿರುವ ಕನ್ನಡ ಸಾಹಿತ್ಯ ಪರಿಷತ್ತು ಈಗ ಆಳುವ ವರ್ಗದ ಅಡಿಯಾಳಾಗಿದ್ದು, ಇದಕ್ಕೆ ಕಾರಣರಾದ ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ರಾಜೀನಾಮೆ ನೀಡಬೇಕು.. ..

ಕೊಪ್ಪಳ ಜಿಲ್ಲೆಯ ಆನೆಗೊಂದಿ ಉತ್ಸವದಲ್ಲಿ ಸಿಎಎ ವಿರುದ್ಧವಾಗಿ ಕವನ ವಾಚಿಸಿದ ಕವಿ ಸಿರಾಜ್ ಬಿಸರಳ್ಳಿ ವಿರುದ್ಧ ಪ್ರಕರಣ ದಾಖಲಿಸಿದ್ದು ಖಂಡನೀಯ.. ಕವನ ಎಂಬುದು ಹಕ್ಕಿ. ಅದನ್ನು ಮುಕ್ತವಾಗಿ ಹಾರಲು ಬಿಡಬೇಕೇ ಹೊರತು ಕಟ್ಟಿ ಹಾಕಬಾರದು. ಆಡಳಿತ ವರ್ಗದ ಧೋರಣೆ ವಿರುದ್ಧ ಕವನ ವಾಚಿಸಿದ ಏಕೈಕ ಕಾರಣಕ್ಕೆ ಎಫ್.ಐ.ಆರ್ ದಾಖಲಿಸಿದ್ದು ಸರಿಯಲ್ಲ. ಅವರ ವಿರುದ್ಧದ ಪ್ರಕರಣ ಹಿಂಪಡೆಯಬೇಕು.. ..

ಪ್ರಧಾನಿ ನಿಂದಿಸಿದ ನಾಟಕವನ್ನು ಮಕ್ಕಳು ಪ್ರದರ್ಶಿಸಿದ್ದಾರೆ ಎಂಬ ನೆಪವೊಡ್ಡಿ ಬೀದರಿನ ಶಾಹೀನ್ ಶಿಕ್ಷಣ ಸಂಸ್ಥೆ ವಿರುದ್ಧ ಪ್ರಕರಣ ದಾಖಲಿಸಿರುವುದು ಮತ್ತು ಮಕ್ಕಳಿಗೆ ಮಾನಸಿಕ ಹಿಂಸೆ ನೀಡುತ್ತಿರುವುದು ಖಂಡನೀಯ. ಈ ಪ್ರಕರಣ ಹಿಂಪಡೆಯಬೇಕು.. ..

– ಕೆ. ನೀಲಾ, ಸಾಹಿತಿ ಹೋರಾಟಗಾರ್ತಿ 'ಕಲ್ಯಾಣ ಕರ್ನಾಟಕ: ಅಂದು-ಇಂದು-ಮುಂದು' ಗೋಷ್ಠಿಯಲ್ಲಿ

ಹಲವು ಶಾಹಿನ್ ಬಾಗ್ ಗಳು ಮೊಳಕೆಯೊಡೆದಿವೆ

ಬೀದರಿನಲ್ಲಿ ಆ ತಾಯಂದಿರನ್ನು ಬಂಧಿಸಿರುವ ವಿರುದ್ಧ ನಾವು ದನಿ ಎತ್ತಬೇಕಾಗಿದೆ. ಜತೆಗೆ ದೇಶದಾದ್ಯಂತ ವಿವಿಧ ಶಾಹಿನ್ ಬಾಗ್ ಗಳು ಮೊಳಕೆಯೊಡೆದಿವೆ. ಮಹಿಳೆಯರು ನಡೆಸುತ್ತಿರುವ ಹೋರಾಟ ನಮ್ಮ ಕಾಲದ ವಿಶೇಷ ಬೆಳವಣಿಗೆ. ಮಹಿಳೆಯ ಕರುಳಲ್ಲಿ ಬೇರೂರಿರುವ ಸಮಾನತೆಯ ಬೀಜವೇ ಈ ಎಲ್ಲಾ ಹೋರಾಟಗಳಿಗೆ ಪ್ರೇರಣೆಯಾಗಿದೆ.. ..

ಕೇಂದ್ರದಲ್ಲಿ ಬಿಜೆಪಿ ಸರ್ಕಾರ ತಂದಿರುವ ಸಿಎಎ, ಎನ್.ಆರ್.ಸಿ ಮತ್ತು ಎನ್.ಪಿ.ಆರ್ ಅಂತಹ ಜೀವವಿರೋಧಿ ನೀತಿಗಳ ವಿರುದ್ಧದ ಹೋರಾಟಗಳಲ್ಲಿ ಸಾವಿರ ಸಾವಿರ ಸಂಖ್ಯೆಯಲ್ಲಿ ಮಹಿಳೆಯರು ಪಾಲ್ಗೊಳ್ಳುತ್ತಿರುವುದು ಭರವಸೆ ಹುಟ್ಟಿಸುತ್ತಿರುವ ಸಂಗತಿಯಾಗಿದೆ.. ..

ಮಹಿಳೆಯರಿಗೆ ಸವಲತ್ತು ಕೊಡುವುದು ನಿಜವಾದ ಸಬಲೀಕರಣವಲ್ಲ. ಆಕೆಗೆ ಅಧಿಕಾರ ಕೊಡುವುದು ನಿಜವಾದ ಸಬಲೀಕರಣ. ನಮ್ಮನ್ನು ಆಳುವ ಗಂಡು ವರ್ಗ ಈ ಮಸೂದೆಯನ್ನು ಸಂಸತ್ತಿನಲ್ಲೇ ಕೊಳೆಯುವಂತೆ ಮಾಡಿದ್ದಾರೆ.

– ಆರ್. ಪೂರ್ಣಿಮಾ, ಹಿರಿಯ ಪತ್ರಕರ್ತೆ, 'ಸ್ತ್ರೀ ಲೋಕ: ತಲ್ಲಣಗಳು' ಗೋಷ್ಠಿಯಲ್ಲಿ

'ಸ್ತ್ರೀ ವಾದ ಎಂದರೆ ಶಬರಿಮಲೆ ದೇವಸ್ಥಾನಕ್ಕೆ ಪ್ರವೇಶ ಪಡೆಯುವುದಲ್ಲ; ಸಂಸತ್ತಿಗೆ ಪ್ರವೇಶ ಪಡೆಯುವುದೇ ಆಗಿದೆ'

– ಪ್ರೊ. ಶಿವಗಂಗಾ ರುಮ್ಮಾ, 'ಸ್ತ್ರೀ ಲೋಕ: ತಲ್ಲಣಗಳು' ಗೋಷ್ಠಿಯಲ್ಲಿ

ಯಾಕೆ ಮಹಿಳೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿಲ್ಲ ?

ದೇಶದಲ್ಲಿ ಇರಲು ನನ್ನ ಅಪ್ಪನ, ಅಜ್ಜನ ಗುರುತು ಕೇಳಲಾಗುತ್ತಿದೆ. ಇಂದು ಒಬ್ಬ ತಾಯಿ ತನ್ನ ಗಂಡನ ಬಳಿಯೇ ವಯಸ್ಸಿಗೆ ಬಂದ ಮಗಳನ್ನು ಬಿಡದಿರುವ ಪರಿಸ್ಥಿತಿ ಇದೆ. ಇಂಥ ಹಲವಾರು ತಲ್ಲಣಗಳು ನಮ್ಮ ನಡುವೆ ಇವೆ. ಇದಕ್ಕೆ ನಾವು ಪರಿಹಾರ ಕಂಡುಕೊಳ್ಳಬೇಕು.

ನಿರ್ಭಯಾ ಪ್ರಕರಣದ ಅಪರಾಧಿಗಳನ್ನು ಗಲ್ಲಿಗೇರಿಸುವ ಪ್ರಕ್ರಿಯೆ ನಡೆಯುತ್ತಿದೆ. ಆದರೆ, ಅಲ್ಲಿ ಗಲ್ಲಿಗೇರಿಸುತ್ತಿದ್ದರೆ, ಇಲ್ಲಿ ಮತ್ತೊಂದು ನಿರ್ಭಯಾದಂತಹುದೇ ಪ್ರಕರಣ ನಡೆಯುತ್ತಿರುತ್ತದೆ. ಆದ್ದರಿಂದ ಸಮಸ್ಯೆಯ ಮೂಲವನ್ನು ಅರಿಯುವ ಕೆಲಸ ಆಗಬೇಕು.

ಇವತ್ತಿನ ವರೆಗೂ ಯಾಕೆ ಯಾವ ಮಹಿಳೆಯರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿಲ್ಲ ಎಂದು ಕೇಳುತ್ತಾರೆ. ನಾವು ಹೋಗಿ ಬೇಡಿಕೊಳ್ಳಬೇಕೇ?

– ಬಿ.ಟಿ ಲಲಿತಾನಾಯಕ್, ಸಾಮಾಜಿಕ ಹೋರಾಟಗಾರ್ತಿ, 'ಸ್ತ್ರೀ ಲೋಕ: ತಲ್ಲಣಗಳು' ಗೋಷ್ಠಿಯಲ್ಲಿ

ನಿಮಗೆ ಸಾಕ್ಷಿ ಪ್ರಜ್ಞೆ ಇಲ್ಲವೇ?

ಮಕ್ಕಳನ್ನು ಕನ್ನಡ ಶಾಲೆಗಳಿಗೆ ಸೇರಿಸಿ ಎಂದು ದೊಡ್ಡ ದೊಡ್ಡ ಸಭೆ, ಸಮಾರಂಭಗಳಲ್ಲಿ ಭಾಷಣ ಮಾಡುವ ಮಹಾನ್ ಪಂಡಿತರೇ ನಿಮ್ಮ ಮಕ್ಕಳನ್ನು ಯಾವ ಶಾಲೆಗಳಿಗೆ ಕಳುಹಿಸುತ್ತಿದ್ದೀರಿ. ನಿಮಗೆ ಸಾಕ್ಷಿಪ್ರಜ್ಞೆ ಇಲ್ಲವೇ? ಮೊದಲು ನಿಮ್ಮ ಮಕ್ಕಳನ್ನು ಕನ್ನಡ ಶಾಲೆಗಳಿಗೆ ಸೇರಿಸಿ, ಮಾತೃಭಾಷೆಯಲ್ಲಿಯೇ ಶಿಕ್ಷಣ ಕೊಡಿಸಿ.. ..

ಶೃಂಗೇರಿಯಲ್ಲಿ ಈಚೆಗೆ ನಡೆದ ಚಿಕ್ಕಮಗಳೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅನುದಾನ ಬಿಡುಗಡೆ ಮಾಡಲು ನಿರಾಕರಿಸಿದ ಕನ್ನಡ ಸಂಸ್ಕೃತಿ ಇಲಾಖೆ ಸಚಿವ ಸಿ.ಟಿ.ರವಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಮನು ಬಳಿಗಾರ್ ಅವರು, 85ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮುಗಿದ ತಕ್ಷಣ ರಾಜೀನಾಮೆ ನೀಡಬೇಕು.. ..

ನೀವು ಸರ್ವಾಧಿಕಾರಿಯಂತೆ ವರ್ತಿಸಿದ್ದೀರಿ. ನಿಮ್ಮ ಜೇಬಿನಿಂದ ಹಣ ಕೊಡಿ ಎಂದು ಯಾರೂ ನಿಮ್ಮನ್ನು ಕೇಳಿರಲಿಲ್ಲ. ಜನರು ಸರ್ಕಾರಕ್ಕೆ ತುಂಬಿದ ತೆರಿಗೆ ಹಣವನ್ನು ನೀವು ಬಿಡುಗಡೆ ಮಾಡಲಿಲ್ಲ. ಇದು ಕನ್ನಡಿಗರ ಸ್ವಾಭಿಮಾನದ ಪ್ರಾತಿನಿಧಿಕ ಸಂಸ್ಥೆಗೆ ಮಾಡಿದ ಅನ್ಯಾಯ.. ..

ಸಮ್ಮೇಳನ ನಡೆಸಿದರೆ, ಪೆಟ್ರೋಲ್ ಬಾಂಬ್ ಹಾಕ್ತೀವಿ ಎಂದು ಕೆಲವರು ಬೆದರಿಸಿದ್ದರು. ಅದರ ವಿರುದ್ಧವೂ ಪರಿಷತ್ ಅಧ್ಯಕ್ಷರಾಗಿ ಎಲ್ಲಿಯೂ ಮಾತನಾಡಲಿಲ್ಲ. ಹೀಗಾಗಿ ಶ್ರೀ ಶ್ರೀ ಪೂಜ್ಯ ಮನು ಬಳಿಗಾರ್ ಹಾಗೂ ಸಚಿವ ರವಿ ಅವರೇ ಈ ಸಮ್ಮೇಳನ ಮುಗಿದ ತಕ್ಷಣ ನಿಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಮನೆಗೆ ಹೋಗಬೇಕು.. ..

ಪ್ರೊ.ಆರ್.ಕೆ.ಹುಡಗಿ – ಪ್ರಗತಿಪರ ಹೋರಾಟಗಾರ 'ಕಲಬುರಗಿ ಜಿಲ್ಲಾದರ್ಶನ' ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷೀಯ ಭಾಷಣದಲ್ಲಿ

ಶೋಷಣೆ ಬಗ್ಗೆ ಮಾತನಾಡಿದರೆ ದೇಶದ್ರೋಹ ಪಟ್ಟ

ಇಂದು ಶೋಷಣೆ ಬಗ್ಗೆ ಮಾತನಾಡಿದರೆ ದೇಶದ್ರೋಹದ ಪಟ್ಟ ಕಟ್ಟುವ ವಾತಾವರಣ ಬಂದಿದೆ. ದಲಿತರ ವಿರುದ್ಧ ದೌರ್ಜನ್ಯ ನಿಂತಿಲ್ಲ. ಆದಿವಾಸಿಗಳ ಮೇಲೆ ಲೈಂಗಿಕ ದೌರ್ಜನ್ಯ ನಡೆದಾಗ ಮಾಧ್ಯಮಗಳು ದೊಡ್ಡ ಸುದ್ದಿ ಮಾಡಲಿಲ್ಲ. ಇಂತಹ ಸಂದರ್ಭದಲ್ಲಿ ಈ ಹೋರಾಟಕ್ಕೆ ಸಂವಿಧಾನವೇ ದಾರಿ. ಆದರೆ, ಸಂವಿಧಾನವನ್ನೇ ಬದಲಾಯಿಸುತ್ತೇವೆ ಎಂಬ ಮಾತು ಕೇಳಿಬರುತ್ತಿವೆ. ಸ್ವಾತಂತ್ರ್ಯ ಬಂದು 70 ವರ್ಷಗಳ ನಂತರವೂ ನಾವು ಶೋಷಣೆ ಬಗ್ಗೆ ಮಾತನಾಡುತ್ತಿದ್ದೇವೆ. ಇದು ನಾಚಿಕೆಯ ವಿಷಯ.

– ಡಾ.ಸುಬ್ರಾವ ಎಂಟೆತ್ತಿನವರ 'ಶೋಷಣೆ ಮತ್ತು ಬಿಡುಗಡೆ' ಕುರಿತು

ಹೆಚ್ಚಿನ ತೊಗರಿ ಖರೀದಿಗೆ ಮಾನ್ಪಡೆ ಆಗ್ರಹ

ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಹನುಮನಗೌಡ ಬೆಳಗುರ್ಕಿ ಅವರ ಭಾಷಣಕ್ಕೆ ಅಡ್ಡಿಪಡಿಸಿದ ಕಾರಣಕ್ಕೆ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಘಟಕದ ಉಪಾಧ್ಯಕ್ಷ ಮಾರುತಿ ಮಾನ್ಪಡೆ ಅವರನ್ನು ಪೊಲೀಸರು ವಶಕ್ಕೆ ಪಡೆದರು.

ಕೃಷಿ ಮತ್ತು ನೀರಾವರಿ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಹನುಮನಗೌಡ ಬೆಳಗುರ್ಕಿ ಅವರ ಭಾಷಣಕ್ಕೆ ಅಡ್ಡಿಪಡಿಸಿದ ಕಾರಣಕ್ಕೆ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಘಟಕದ ಉಪಾಧ್ಯಕ್ಷ ಮಾರುತಿ ಮಾನ್ಪಡೆ ಅವರನ್ನು ಪೊಲೀಸರು ವಶಕ್ಕೆ ಪಡೆದರು.

'ಈ ಬಾರಿ ಕಲಬುರ್ಗಿ ಜಿಲ್ಲೆಯಲ್ಲಿ ತೊಗರಿ ಬೆಳೆ ಇಳುವರಿ ದಾಖಲೆ ಪ್ರಮಾಣದಲ್ಲಿ ಆಗಿದೆ. ಆದರೆ, ಕೇಂದ್ರ ಸರ್ಕಾರ ಪ್ರತಿಯೊಬ್ಬ ರೈತರಿಂದ ಬೆಂಬಲ ಬೆಲೆಯಡಿ ಕೇವಲ 10 ಕ್ವಿಂಟಲ್ ಖರೀದಿ ಮಾಡುತ್ತಿದೆ. ನಾವು ಉಳಿದವರ ಭಾಷಣಕ್ಕೆ ಅಡ್ಡಿ ಮಾಡಿಲ್ಲ. ಆದರೆ, ಸರ್ಕಾರದ ಪ್ರತಿನಿಧಿಯಾಗಿರುವ ನಿಮ್ಮ ಭಾಷಣ ನಡೆಯಲು ಬಿಡುವುದಿಲ್ಲ' ಎಂದು ಮಾನ್ಪಡೆ ಪಟ್ಟು ಹಿಡಿದರು.

ಇದರಿಂದ ಕೆಲ ಹೊತ್ತು ಸಭಾಂಗಣದಲ್ಲಿ ಗೊಂದಲ ಮೂಡಿತು. ಈ ಮಧ್ಯೆ ಸಂಘಟಕರು ಮಾನ್ಪಡೆ ಅವರಿಗೆ ಗೋಷ್ಠಿಗೆ ಅಡ್ಡಿ ಮಾಡದಂತೆ ಮನವಿ ಮಾಡಿದರು. ಆದರೆ, ಮಾನ್ಪಡೆ ಪಟ್ಟು ಸಡಿಲಿಸಲಿಲ್ಲ. ಅಲ್ಲಿಗೆ ಧಾವಿಸಿದ ಪೊಲೀಸರು ಅವರನ್ನು ಒತ್ತಾಯಪೂರ್ವಕವಾಗಿ ಹೊರಕ್ಕೆ ಎತ್ತಿಕೊಂಡು ಹೋದರು. ಸಭಿಕರ ಒತ್ತಾಯದ ಮೇರೆಗೆ ಭಾಷಣ ಮುಂದುವರಿಸಿದ ಹನುಮನಗೌಡ, 'ಮಾನ್ಪಡೆ ಅವರ ಬೇಡಿಕೆಯನ್ನು ಸಮ್ಮೇಳನದ ನಿರ್ಣಯದಲ್ಲಿ ಸೇರಿಸಬಹುದು' ಎಂದು ಸಲಹೆ ನೀಡಿದರು.

ಧರ್ಮಾಧಾರಿತ ಪೌರತ್ವ ನೀಡುವ ಕಾಯ್ದೆಯನ್ನು ಹಿಂಪಡೆಯಲಿ

ಚಿಕ್ಕಮಗಳೂರಿನ ಶೃಂಗೇರಿಯಲ್ಲಿ ಸಾಹಿತ್ಯ ಸಮ್ಮೇಳನ ನಡೆಸಲು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಎಲ್ಲ ರೀತಿಯ ಸಹಕಾರ ನೀಡಬೇಕಿತ್ತು. ಅಗತ್ಯವಿರುವ ಅನುದಾನ ಬಿಡುಗಡೆ ಮಾಡಬೇಕಿತ್ತು. ಸಮ್ಮೇಳನದ ವೇದಿಕೆ ಮೇಲೆ ದುಷ್ಕರ್ಮಿಗಳು ಪೆಟ್ರೋಲ್ ಬಾಂಬ್ ಹಾಕುತ್ತಾರೆ ಎಂಬ ಕಾರಣಕ್ಕಾಗಿ ಪೊಲೀಸರು ಸಮ್ಮೇಳನ ಮೊಟಕುಗೊಳಿಸಲು ಸೂಚಿಸಿದರು. ಬಾಂಬ್ ಹಾಕಲು ಬೆದರಿಕೆ ಹಾಕಿದವರೇ ಭಯೋತ್ಪಾದಕರು. ಹೀಗಾಗಿ ಅವರನ್ನು ತಕ್ಷಣ ಬಂಧಿಸಬೇಕಿತ್ತು.

ಧರ್ಮಾಧಾರಿತವಾಗಿ ಪೌರತ್ವ ನೀಡುವ ಕಾಯ್ದೆಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ. ಕೂಡಲೇ ಇದನ್ನು ಹಿಂದಕ್ಕೆ ಪಡೆಯಬೇಕು.

– ಬಿ.ಸುರೇಶ್, ಚಿತ್ರ ನಿರ್ದೇಶಕ 'ಕಿರುತೆರೆ: ಸಾಮಾಜಿಕ ಜವಾಬ್ದಾರಿಗಳು' ಗೋಷ್ಠಿಯಲ್ಲಿ

ತತ್ವಪದಗಳು ಪ್ರತಿಭಟನಾ ಕಾವ್ಯದ ಸಿಡಿಮದ್ದಿನ ನುಡಿಗಳಾಗಿದ್ದವು

ಕಡಕೋಳ ಮಡಿವಾಳಪ್ಪನವರು ರಚಿಸಿದ ತತ್ವಪದಗಳು ಜಾತಿ, ಮತ, ಧರ್ಮ ಮತ್ತು ಅವುಗಳ ಆಚರಣೆಗೆ ವಸ್ತುನಿಷ್ಠ ನಿರಾಕರಣೆ ತೋರುವ ಪ್ರತಿಭಟನಾ ಕಾವ್ಯದ ಸಿಡಿಮದ್ದಿನ ನುಡಿಗಳಾಗಿದ್ದವು ಸಮಾಜ ಸುಧಾರಣೆ ಕಾರ್ಯದಲ್ಲಿ ತತ್ವಪದಗಳು ಪ್ರಮುಖ ಪಾತ್ರ ನಿರ್ವಹಿಸಿದವು.

ಯಾವುದನ್ನು ಒಂದೆರಡು ಶತಮಾನಗಳ ಕಾಲ ಕನ್ನಡ ಸಾಹಿತ್ಯ ಚರಿತ್ರೆಕಾರರು ಕತ್ತಲೆ ಯುಗಗಳೆಂದು ಕರೆದರೋ ಅಂತಹ ಕತ್ತಲೆ ಯುಗಗಳ ಬಯಲಲ್ಲೇ ಹುಟ್ಟಿಕೊಂಡ ಮಹಾಬೆಳಕಿನ ವಜ್ರ ಜಲಪಾತ ಧಾರೆಗಳೇ ತತ್ವಪದಗಳು. ಇವತ್ತಿಗೂ ಅಮವಾಸ್ಯೆಯ ಕತ್ತಲು, ಹೆಣದ ಸಾನ್ನಿಧ್ಯ, ಊರಾಚೆಯ ಗವಿ, ಗುಡಿ, ಗುಂಡಾರ, ಗುಡಿಸಲು, ಗುಂಪಾ, ಕೊಂಪೆಗಳಲ್ಲಿ ಅನುರಣಿಸುವ ಹಾಡುಗಬ್ಬಗಳೇ ತತ್ವಪದಗಳು. ಅವು ಏಕಾಂತ ಮತ್ತು ಲೋಕಾಂತ ಎರಡರಲ್ಲೂ ಪ್ರಸ್ತುತಗೊಳ್ಳುವ ಗಾಯನ ಪ್ರಸ್ಥಾನಗಳು.

ತತ್ವಪದಕಾರರು ತಮ್ಮ ದೈನಂದಿನ ಬದುಕಿನಲ್ಲಿ ಕಂಡ ಹತ್ತು ಹಲವು ನೋವು, ನಲಿವು, ಸಾಮಾಜಿಕ ಅನಿಷ್ಟ, ಮನುಷ್ಯ ವಿರೋಧಿ ನಿಲುವುಗಳನ್ನು, ಪ್ರಭುತ್ವದ ಅನಾಚಾರಗಳನ್ನು ಯಾವು ಭಿಡೆ, ಮುಲಾಜು, ಮುರವತ್ತುಗಳಿಗೆ ಎಡೆ ಮಾಡಿಕೊಡದೇ ಪದಗಳ ಮೂಲಕ ಜಾಡಿಸಿ, ಹಾಡಿ ಪ್ರತಿಭಟಿಸಿದರು.

ನಿರಕ್ಷರಿಗಳ ಈ ಸಾಕ್ಷರ ಮಂತ್ರಗಳು ಇತ್ತೀಚೆಗೆ ಗ್ರಂಥಗಳ ರೂಪದಲ್ಲಿ ಪ್ರಕಟಗೊಂಡಿವೆ. ತತ್ವಪದಗಳನ್ನು ಓದಿ ಅರಿಯುವ ಬದಲು ಹಾಡಿ ಇಲ್ಲವೇ ಹಾಡಿದ್ದನ್ನು ಆಲಿಸಿ, ಅರಿಯುವುದೇ ಸೂಕ್ತ. ಆಗ ಆ ಪದಗಳು ಮನಸ್ಸಿಗೆ ಮುಟ್ಟಿ ಹೆಚ್ಚು ಅರ್ಥ ಆಗಬಲ್ಲವು. ನೂರಾರು ವರ್ಷಗಳ ಹಿಂದೆ ಯಾರೂ ಸಹ ಈ ಸಾಹಿತ್ಯವನ್ನು ಲೆಕ್ಕಣಿಕೆ ಹಿಡಿದು ಹಾಳೆಗಳ ಮೇಲೆ ಬರೆಯಲಿಲ್ಲ. ಅದು ಗುರು–ಶಿಷ್ಯಮಕ್ಕಳ ಮುಖಾಮುಖಿಯಲ್ಲಿ ಜರುಗುವ ದೇಹ ಮತ್ತು ಧ್ವನಿಗಳ ಅನುಸಂಧಾನ. ಆಯಾಕಾಲದ ಸಾಮಾಜಿಕ ಘಟನೆಗಳ ಸಂದರ್ಭದಲ್ಲಿ ಹಾಡುಗಳಾಗಿ ಹುಟ್ಟಿಕೊಂಡ ತತ್ವಪದವು ಪ್ರತಿಭಟನೆಯ ಕಾವ್ಯ. ಹಾಗಂತ ಇವುಗಳನ್ನು ಪ್ರತಿಭಟನೆಯ ಪಂಥಕ್ಕಷ್ಟೆ ಸೀಮಿತಗೊಳಿಸಬಾರದು.

– ಮಲ್ಲಿಕಾರ್ಜುನ ಕಡಕೋಳ, ಸಾಹಿತಿ "ತತ್ವಪದ-ಸೂಫಿ-ಬೌದ್ಧ ಸಾಹಿತ್ಯ' ಗೋಷ್ಠಿಯಲ್ಲಿ



ಎನ್‌ಆರ್‌ಸಿ ಕಳ್ಳತನದಿಂದ ಮತ್ತು ಕಪಟೋಪಾಯದಿಂದ



ಎನ್ ಆರ್‌ಸಿ ಬಗ್ಗೆ ಚರ್ಚಿಸಿಲ್ಲ ಎಂಬುದು ಅರೆ ಸತ್ಯ, ಎನ್‌ಪಿಆರ್‌ಗೂ ಎನ್‌ಆರ್‌ಸಿಗೂ ಏನೇನೂ ಸಂಬಂಧವಿಲ್ಲ ಎನ್ನುವುದು ಹಸಿ ಸುಳ್ಳು. ಪೌರತ್ವ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಎನ್‌ಪಿಆರ್ ಸಿದ್ಧಪಡಿಸಿದ ನಂತರವೇ ಎನ್‌ಆರ್‌ಸಿಯನ್ನು ಕಲೆ ಹಾಕಲಾಗುವುದು. ಆದ್ದರಿಂದ ಜುಲೈ 31, 2019ರ ಮೋದಿ ಸರಕಾರದ ಎನ್‌ಪಿಆರ್ ಅಧಿಸೂಚನೆ ಎನ್‌ಆರ್‌ಸಿ ತಯಾರಿಸುವ ಪ್ರಕ್ರಿಯೆಯ ಆರಂಭವನ್ನು ಸೂಚಿಸುತ್ತದೆ. ಈ ಕಾಯ್ದೆಯ ನಿಯಮಗಳ ಅಡಿಯಲ್ಲಿ ಎನ್‌ಪಿಆರ್‌ಗೆ ಅವಕಾಶ ಕಲ್ಪಿಸಿರುವ ಏಕೈಕ ಉದ್ದೇಶವೇ ಎನ್‌ಆರ್‌ಸಿಗೆ ಆಧಾರವನ್ನು ಕಲ್ಪಿಸುವುದು. ಒಮ್ಮೆ ಎನ್‌ಪಿಆರ್ ನಡೆಯಿತೆಂದರೆ ಎನ್‌ಆರ್‌ಸಿ ಆದಂತೆಯೇ. ಮೋದಿ ಸರಕಾರ ಎನ್‌ಆರ್‌ಸಿ ನಡೆಸುವುದಿಲ್ಲ ಎಂಬ ಬಗ್ಗೆ ಪ್ರಾಮಾಣಿಕವಾಗಿದ್ದರೆ, ಎನ್‌ಪಿಆರ್ ಅಧಿಸೂಚನೆಯನ್ನು ಹಿಂತೆಗೆದುಕೊಳ್ಳಬೇಕು ಮತ್ತು ಜನಗಣತಿ ಮಾತ್ರ ನಡೆಯುತ್ತದೆ ಎಂದು ಪ್ರಕಟಿಸಬೇಕು.

— ಪ್ರಕಾಶ ಕಾರಟ್

ಮೋದಿ ಸರಕಾರ 'ರಾಷ್ಟ್ರೀಯ ಭಾರತೀಯ ಪೌರರ ರಿಜಿಸ್ಟರ್'(ಎನ್‌ಆರ್‌ಐಸಿ) ಬಗ್ಗೆ ಯಾವುದೇ ನಿರ್ಧಾರವನ್ನು ಕೈಗೊಂಡಿಲ್ಲ ಎಂದು ಸಂಸತ್ತಿನಲ್ಲಿ ಹೇಳಿರುವುದು ಈಗ ದಾಖಲಾಗಿದೆ. ಇದು ಪ್ರಧಾನ ಮಂತ್ರಿಗಳು ದಿಲ್ಲಿಯಲ್ಲಿ ಡಿಸೆಂಬರ್ 22, 2019ರಂದು ಒಂದು ರ್‍ಯಾಲಿಯನ್ನುದ್ದೇಶಿಸಿ ಹೇಳಿದ ಮಾತುಗಳಿಗೆ ಅನುಗುಣವಾಗಿದೆ. ತಮ್ಮ ಸರಕಾರ 2014ರಲ್ಲಿ ಅಧಿಕಾರಕ್ಕೆ ಬಂದಂದಿನಿಂದ ಎನ್‌ಆರ್‌ಸಿ ಬಗ್ಗೆ ಚರ್ಚೆಯನ್ನೇ ನಡೆಸಿಲ್ಲ ಎಂದು ಅವರು ಹೇಳಿದ್ದರು.

ಇವು ಜನಗಳನ್ನು ವಂಚಿಸುವ ಅರೆ ಸತ್ಯಗಳು. ಅರೆಸತ್ಯಗಳು ಏಕೆಂದರೆ, ಎನ್‌ಆರ್‌ಸಿ ಎಂಬುದನ್ನು ಕಲೆಹಾಕುತ್ತಿಲ್ಲ, ಆದರೆ ಎನ್‌ಆರ್‌ಸಿಯನ್ನು ತಯಾರಿಸುವ ಪ್ರಕ್ರಿಯೆ ಆರಂಭವಾಗಿದೆ.

ರಾಷ್ಟ್ರೀಯ ಜನಸಂಖ್ಯೆ ರಿಜಿಸ್ಟರ್(ಎನ್‌ಪಿಆರ್)ನ್ನು ಸಮಕಾಲಿಕಗೊಳಿಸುವ ಬಗ್ಗೆ ಅಧಿಸೂಚನೆ ಹೊರಡಿಸಲಾಗಿದೆ, ಇದು ಎನ್‌ಆರ್‌ಸಿಯ ತಯಾರಿಯಲ್ಲಿ ಮೊದಲ ಹೆಜ್ಜೆ ಎಂದು ಹೇಳಿದಾಗ, ಎನ್‌ಪಿಆರ್‌ಗೂ ಎನ್‌ಆರ್‌ಸಿಗೂ ಏನೇನೂ ಸಂಬಂಧವಿಲ್ಲ ಎಂದು ಸರಕಾರ ನಿರಾಕರಿಸುತ್ತದೆ. ಇದು ಹಸಿ ಸುಳ್ಳು.

1955ರ ಪೌರತ್ವ ಕಾಯ್ದೆಗೆ ತಿದ್ದುಪಡಿ ತಂದದ್ದು ವಾಜಪೇಯಿ ಸರಕಾರ, ಅದರಲ್ಲಿ ಒಂದು ರಾಷ್ಟ್ರೀಯ ಭಾರತೀಯ ಪೌರರ ರಿಜಿಸ್ಟರ್‌ನ ಪರಿಕಲ್ಪನೆಯನ್ನು ಸೇರಿಸಲಾಗಿತ್ತು ಎಂಬುದು ಪ್ರಧಾನ ಮಂತ್ರಿಗಳಿಗೂ ಗೊತ್ತು, ಅವರ ಸಂಪುಟದ ಇತರ ಮಂತ್ರಿಗಳಿಗೂ ಗೊತ್ತು. ಇಂತಹ ಒಂದು ರಿಜಿಸ್ಟರ್ ರೂಪಿಸಲು ಈ ತಿದ್ದುಪಡಿ ಮಾಡಿದ ಕಾಯ್ದೆಯ ಅಡಿಯಲ್ಲಿ ರೂಪಿಸಿದ ನಿಯಮಗಳು ಒಂದು ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟರ್‌ಗೆ ಅವಕಾಶ ಕಲ್ಪಿಸಿವೆ. ಈ ಎನ್‌ಪಿಆರ್‌ನಲ್ಲಿ ಒಂದು ಸ್ಥಳದ ಎಲ್ಲ ಸಾಮಾನ್ಯ ನಿವಾಸಿಗಳು ಸೇರಿರುತ್ತಾರೆ. ಕುಟುಂಬದ ಮುಖ್ಯಸ್ಥನಿಗೆ ಕೇಳಿದ ಪ್ರಶ್ನೆಗಳಿಗೆ ಕೊಟ್ಟ ಉತ್ತರಗಳ ಆಧಾರದಲ್ಲಿ ಸ್ಥಳೀಯ ರಿಜಿಸ್ಟ್ರಾರ್ ಮಾಹಿತಿಗಳನ್ನು ರಿಜಿಸ್ಟರ್‌ನಲ್ಲಿ ಬರೆಯುತ್ತಾನೆ. ಈ ಮಾಹಿತಿಗಳಿಂದ "ಸಂದೇಹಾಸ್ಪದ ಪೌರ" ರನ್ನು ಗುರುತಿಸುವ, ತಪಾಸಣೆ ಮಾಡುವ ಕೆಲಸ ನಡೆಯುತ್ತದೆ. ಇದಾದ ನಂತರ ರಾಷ್ಟ್ರೀಯ ಪೌರರ ರಿಜಿಸ್ಟರ್ ಅಂತಿಮಗೊಳ್ಳುತ್ತದೆ.

ಪೌರತ್ವ(ಪೌರರ ದಾಖಲಾತಿ ಮತ್ತು ರಾಷ್ಟ್ರೀಯ ಪರಿಚಯ ಕಾರ್ಡ್‌ಗಳ ನೀಡಿಕೆ) ನಿಯಮಗಳು, 2003, ಪರಿಚ್ಛೇಧ 4 ರಲ್ಲಿ ರಾಷ್ಟ್ರೀಯ ಭಾರತೀಯ ಪೌರರ ರಿಜಿಸ್ಟರ್ ಸಿದ್ಧಗೊಳಿಸುವ ಬಗ್ಗೆ ಹೀಗೆ ಹೇಳಲಾಗಿದೆ: "ಒಂದು ಸ್ಥಳೀಯ ರಿಜಿಸ್ಟ್ರಾರ್‌ನ ವ್ಯಾಪ್ತಿಯಲ್ಲಿ ಸಾಮಾನ್ಯವಾಗಿ ವಾಸವಾಗಿರುವ ಎಲ್ಲ ವ್ಯಕ್ತಿಗಳಿಗೆ ಸಂಬಂಧಪಟ್ಟ ಮಾಹಿತಿಗಳನ್ನು ಸ್ಥಳೀಯ ರಿಜಿಸ್ಟರ್‌ನಲ್ಲಿ ದಾಖಲಿಸಿ ಒಂದು ಜನಸಂಖ್ಯಾ ರಿಜಿಸ್ಟರ್‌ನ್ನು ತಯಾರಿಸಲಾಗುವುದು. ಭಾರತೀಯ ಪೌರರ ಸ್ಥಳೀಯ ರಿಜಿಸ್ಟರ್(ರಾಷ್ಟ್ರೀಯ ರಿಜಿಸ್ಟರ್‌ನ ಭಾಗವಾಗಿ)ನಲ್ಲಿ ಜನಸಂಖ್ಯಾ ರಿಜಿಸ್ಟರ್‌ನಿಂದ ಸೂಕ್ತ ತಪಾಸಣೆಯ ನಂತರ ವ್ಯಕ್ತಿಗಳ ವಿವರಗಳು ಇರುತ್ತವೆ." ಜನಸಂಖ್ಯಾ ರಿಜಿಸ್ಟರ್‌ನ ತಪಾಸಣೆಯ ನಂತರ ಎನ್‌ಆರ್‌ಸಿಯನ್ನು ಅಂತಿಮಗೊಳಿಸಲಾಗುವುದು ಎಂಬುದು ಇಲ್ಲಿ ಸಾಕಷ್ಟು ಸ್ಪಷ್ಟವಾಗಿಯೇ ಇದೆ.

ಪೌರತ್ವ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಎನ್‌ಪಿಆರ್ ಸಿದ್ಧಪಡಿಸಿದ ನಂತರವೇ ಎನ್‌ಆರ್‌ಸಿಯನ್ನು ಕಲೆ ಹಾಕಲಾಗುವುದು. ಆದ್ದರಿಂದ ಜುಲೈ 31, 2019ರ ಮೋದಿ ಸರಕಾರದ ಎನ್‌ಪಿಆರ್ ಅಧಿಸೂಚನೆ ಎನ್‌ಆರ್‌ಸಿ ತಯಾರಿಸುವ ಪ್ರಕ್ರಿಯೆಯ ಆರಂಭವನ್ನು ಸೂಚಿಸುತ್ತದೆ. ಈ ಕಾಯ್ದೆಯ ನಿಯಮಗಳ ಅಡಿಯಲ್ಲಿ ಎನ್‌ಪಿಆರ್‌ಗೆ ಅವಕಾಶ ಕಲ್ಪಿಸಿರುವ ಏಕೈಕ ಉದ್ದೇಶವೇ ಎನ್‌ಆರ್‌ಸಿಗೆ ಆಧಾರವನ್ನು ಕಲ್ಪಿಸುವುದು.

ಎನ್‌ಆರ್‌ಸಿಯ ಮಾತೇ ಇದುವರೆಗೆ ಇಲ್ಲ ಎಂಬ ಮೋದಿಯವರ ನಿರಾಕರಣೆಯ ಎರಡು ದಿನಗಳ ನಂತರ ಕೇಂದ್ರ ಸಂಪುಟ ಸಭೆ ಸೇರಿ ಎನ್‌ಪಿಆರ್‌ನ್ನು ಸಮಕಾಲಿಕಗೊಳಿಸಲೆಂದು 3941 ಕೋಟಿ ರೂ.ಗಳನ್ನು ಮಂಜೂರು ಮಾಡಿತು. ಜನಗಣತಿಯ ಮೊದಲ ಘಟ್ಟ (ಮನೆಗಳ ಪಟ್ಟಿ ತಯಾರಿಸುವುದು) ಮತ್ತು ಎನ್‌ಪಿಆರ್‌ನ ಸಮಕಾಲಿಕಗೊಳಿಸುವ ಪ್ರಕ್ರಿಯೆ ಎಪ್ರಿಲ್ 1 ರಿಂದ ಸಪ್ಟಂಬರ್ 30 ರ ಸಮಯ ಚೌಕಟ್ಟಿನಲ್ಲಿ ನಡೆಯುತ್ತದೆ.

ಎನ್‌ಆರ್‌ಸಿ ಗೆ ಯಾವುದೇ ಹೊಸ ಕಾಯ್ದೆ ಬೇಕಿಲ್ಲ, ಸಂಸತ್ತಿನ ಮಂಜೂರಾತಿಯೂ ಬೇಕಿಲ್ಲ ಎಂಬ ಸಂಗತಿಯನ್ನು ಕೇಂದ್ರ ಸರಕಾರದ ಗೋಜಲುಗೊಳಿಸುತ್ತಿದೆ. ಎನ್‌ಆರ್‌ಸಿಯನ್ನು ಅಂತಿಮಗೊಳಿಸುವುದು ಎನ್‌ಪಿಆರ್‌ನ ಮನೆ–ಮನೆ ಗಣತಿಯನ್ನು ಪೂರ್ಣಗೊಳಿಸಿದ ನಂತರ ಕೈಗೊಳ್ಳಬಹುದಾದ ಆಡಳಿತ ನಿರ್ಧಾರವಷ್ಟೇ. ಒಮ್ಮೆ ಎನ್‌ಪಿಆರ್ ನಡೆಯಿತೆಂದರೆ ಎನ್‌ಆರ್‌ಸಿ ಆದಂತೆಯೇ.

ಆದ್ದರಿಂದಲೇ, ಈಗ ಪ್ರಧಾನಿಗಳು ಮತ್ತು ಗೃಹಮಂತ್ರಿಗಳು ಹೇಳುತ್ತಿರುವುದಕ್ಕೆ ವ್ಯತಿರಿಕ್ತವಾಗಿ, ಸರಿಯಾದ ನಿಲುವನ್ನು ಗೃಹ ಮಂತ್ರಾಲಯ ತನ್ನ 2019–20ರ ವಾರ್ಷಿಕ ವರದಿಯಲ್ಲಿ ಪ್ರಸ್ತುತಪಡಿಸಿದೆ.: "ಭಾರತ ಸರಕಾರ ದೇಶದಲ್ಲಿ ಒಂದು ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟರ(ಎನ್‌ಪಿಆರ್)ನ್ನು ಎಲ್ಲ ಸಾಮಾನ್ಯ ನಿವಾಸಿಗಳಿಂದ ನಿರ್ದಿಷ್ಟ ಮಾಹಿತಿಗಳನ್ನು ಕಲೆ ಹಾಕುವ ಮೂಲಕ ನಿರ್ಮಿಸುವ ಒಂದು ಸ್ಕೀಮಿಗೆ ಮಂಜೂರಾತಿ ನೀಡಿದೆ. ಎನ್‌ಪಿಆರ್ ರಾಷ್ಟ್ರೀಯ ಭಾರತೀಯ ಪೌರರ ರಿಜಿಸ್ಟರ್(ಎನ್‌ಆರ್‌ಐಸಿ) ನಿರ್ಮಿಸುವತ್ತ ಮೊದಲ ಹೆಜ್ಜೆಯಾಗಿದೆ. ಎನ್‌ಪಿಆರ್‌ಗೆ 2010ರಲ್ಲಿ ಸಂಗ್ರಹಿಸಿದ ಮಾಹಿತಿಯನ್ನು 2015ರಲ್ಲಿ ಸಮಕಾಲಿಕಗೊಳಿಸಲಾಗಿದೆ. 33.43 ಕೋಟಿ ವ್ಯಕ್ತಿಗಳ ಬಯೊಮೆಟ್ರಿಕ್ ದಾಖಲಾತಿಯನ್ನೂ ಈ ಸ್ಕೀಮಿನ ಅಡಿಯಲ್ಲಿ ಮಾಡಲಾಗಿದೆ."

ಅಸ್ಸಾಂ ನಲ್ಲಿ ಮಾತ್ರವೇ ಎನ್‌ಆರ್‌ಸಿ ಪ್ರಕ್ರಿಯೆ ಎನ್‌ಪಿಆರ್ ದಾರಿಯಲ್ಲಿ ಹೋಗಿಲ್ಲ. ಏಕೆಂದರೆ ಪೌರತ್ವ ಕಾಯ್ದೆಗೆ 1985ರಲ್ಲಿ ತಂದ ಒಂದು ತಿದ್ದುಪಡಿಯ ಪ್ರಕಾರ ಪರಿಚ್ಛೇಧ 6ಎ ನ್ನು ಸೇರಿಸಿ ಒಂದು ವಿಶೇಷ ಪ್ರಕ್ರಿಯೆಗೆ ಅವಕಾಶ ಕಲ್ಪಿಸಲಾಯಿತು. ಅಸ್ಸಾಂ ನಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಒಂದು ಅರ್ಜಿ ಸಲ್ಲಿಸಬೇಕು ಮತ್ತು ಕಾಯ್ದೆಯ ಅಡಿಯಲ್ಲಿ ರೂಪಿಸಿರುವ ನಿಯಮಗಳ ಪ್ರಕಾರ ಪೌರತ್ವವನ್ನು ಸ್ಥಾಪಿಸಲು ದಸ್ತಾವೇಜುಗಳನ್ನು ಒದಗಿಸಬೇಕು. ಅಸ್ಸಾಂನಲ್ಲಿ ಎನ್‌ಆರ್‌ಸಿ ದೇಶದ ಇತರೆಡೆಗಳಲ್ಲಿ ಕಂಡರಿಸಿರುವ ಎನ್‌ಪಿಆರ್ ಮೇಲೆ ಆಧಾರಿತವಾಗಿರಲಿಲ್ಲ.

ಸಿಎಎ ಮತ್ತು ಎನ್‌ಆರ್‌ಸಿಗೆ ಹೆಚ್ಚೆಚ್ಚು ಪ್ರತಿರೋಧ'ವನ್ನು ಎದುರಿಸಬೇಕಾಗಿ ಬಂದಿರುವುದರಿಂದಾಗಿ, ಮೋದಿ ಸರಕಾರ ಎನ್‌ಆರ್‌ಸಿ ಪ್ರಕ್ರಿಯೆಯನ್ನು ಕಳ್ಳತನದಿಂದ, ಕಪಟೋಪಾಯದಿಂದ ನಡೆಸಲು ಪ್ರಯತ್ನಿಸುತ್ತಿದೆ. . ಎನ್‌ಪಿಆರ್‌ಗೂ ಎನ್‌ಆರ್‌ಸಿಗೂ ಏನೇನೂ ಸಂಬಂಧವಿಲ್ಲ ಎಂದು ಹೇಳಿಕೊಳ್ಳುವ ಮೂಲಕ ಇದನ್ನು ಅವರು ಸಾಧಿಸಬಹುದು ಎಂದುಕೊಂಡಿದ್ದಾರೆ.

ಪ್ರಸಕ್ತ ಎನ್‌ಪಿಆರ್ ಪ್ರಕ್ರಿಯೆಗೆ, 2015ರಲ್ಲಿ ಮಾಡಿದ ಸಮಕಾಲಿಕಗೊಳಿಸುವ ಪ್ರಕ್ರಿಯೆಯಲ್ಲಿ ಕೇಳಿದ ಪ್ರಶ್ನೆಗಳಲ್ಲದೆ ಇನ್ನೂ ಕೆಲವು ಪ್ರಶ್ನೆಗಳನ್ನು ಸೇರಿಸಲಾಗಿದೆ. 2015ರಲ್ಲಿ ಆಧಾರ್ ಕಾರ್ಡ್, ಮೊಬೈಲ್ ನಂಬರ್, ಪಾಸ್‌ಪೋರ್ಟ್ ವಿವರಗಳು ಇತ್ಯಾದಿಗಳನ್ನು ಸೇರಿಸಲಾಗಿತ್ತು. ಈಗ ತಂದೆ–ತಾಯಿಯ ಜನ್ಮ ದಿನಾಂಕ ಮತ್ತು ಜನ್ಮಸ್ಥಳದ ಬಗ್ಗೆಯೂ ಪ್ರಶ್ನೆಗಳನ್ನು ಸೇರಿಸಲಾಗಿದೆ. ಬಿಜೆಪಿಯ ಕೆಲವು ಮಿತ್ರರು ಬಿಹಾರದ ಮುಖ್ಯಮಂತ್ರಿ ನಿತಿಶ್ ಕುಮಾರ್ ರಂತವರು, ತಂದೆ ಮತ್ತು ತಾಯಿಯ ಜನ್ಮದಿನಾಂಕ ಮತ್ತು ಜನ್ಮ ಸ್ಥಳದ ಪ್ರಶ್ನೆಗಳು ಇರಬಾರದು ಎಂದಿದ್ದಾರೆ. ಅಂದರೆ ಅವಿಲ್ಲದೆ ಎನ್‌ಪಿಆರ್ ಪ್ರಕ್ರಿಯೆ ಸರಿಯಾಗಿದೆ ಎಂದು ಅವರು ಸೂಚಿಸಿದಂತಾಗಿದೆ. ಇದು ಗಮನ ಬೇರೆಡೆಗೆ ತಿರುಗಿಸುವ ಕೆಲಸವಷ್ಟೇ. ಎನ್‌ಪಿಆರ್‌ನಲ್ಲಿ ಯಾವುದೇ ಪ್ರಶ್ನೆಗಳನ್ನು ಕೇಳಿರಲಿ, ಅವು ಎನ್‌ಆರ್‌ಸಿಗೆ ಆರಿಸುವುದಕ್ಕೆ ಮತ್ತು ತಪಾಸಣೆ ಮಾಡುವುದಕ್ಕೆ ಆಧಾರವಾಗುತ್ತದೆ. ಒಂದು ಮನೆಯಿಂದ ಸಂಗ್ರಹಿಸಿದ ಮಾಹಿತಿ ಅತೃಪ್ತಿಕರ ಎಂದೆನಿಸಿದರೆ, ಆಗ ಅವರಿಗೆ ನೋಟೀಸು ಜಾರಿಮಾಡಲಾಗುವುದು, ತಾವು ಪೌರರು ಎಂದು ಸಾಬೀತು ಪಡಿಸಲು ಕೇಳಲಾಗುವುದು. ಆಗ ಅವರ ತಂದೆ –ತಾಯಿ ಬಗ್ಗೆ ಮಾತ್ರವಲ್ಲ. ಅಜ್ಜ–ಅಜ್ಜಿಯ ಬಗ್ಗೆಯೂ ಪ್ರಶ್ನೆಗಳನ್ನು ಕೇಳಬಹುದು.

ಆದ್ದರಿಂದ ಎನ್‌ಆರ್‌ಸಿ ಬೇಕಾಗಿಲ್ಲ ಎನ್ನುವ ನಿತಿಶ್ ಕುಮಾರ್‌ರಂತವರು ಬಿಹಾರದಲ್ಲಿ ಎನ್‌ಪಿಆರ್ ನಡೆಸಬಾರದು. ಸಿಪಿಐ(ಎಂ) ಕೇಂದ್ರ ಸಮಿತಿ ಎನ್‌ಆರ್‌ಸಿ ಬೇಕಾಗಿಲ್ಲ ಎಂದಿರುವ ಮುಖ್ಯಮಂತ್ರಿಗಳೆಲ್ಲರೂ, ಕೇರಳ ಮಾಡಿರುವಂತೆ, ತಂತಮ್ಮ ರಾಜ್ಯಗಳಲ್ಲಿ ಎನ್‌ಪಿಆರ್ ಗಣತಿಯನ್ನು ನಿಲ್ಲಿಸಬೇಕು ಎಂದು ಮನವಿ ಮಾಡಿರುವುದು ಈ ಹಿನ್ನೆಲೆಯಲ್ಲಿ.

ಇನ್ನು ಮೋದಿ ಸರಕಾರದ ಬಗ್ಗೆ ಹೇಳುವುದಾದರೆ, ಅದು ಎನ್‌ಆರ್‌ಸಿ ನಡೆಸುವುದಿಲ್ಲ ಎಂಬ ಬಗ್ಗೆ ಪ್ರಾಮಾಣಿಕವಾಗಿದ್ದರೆ, ಎನ್‌ಪಿಆರ್ ಅಧಿಸೂಚನೆಯನ್ನು ಹಿಂತೆಗೆದುಕೊಳ್ಳಬೇಕು ಮತ್ತು ಜನಗಣತಿ ಮಾತ್ರ ನಡೆಯುತ್ತದೆ ಎಂದು ಪ್ರಕಟಿಸಬೇಕು.

ಈಗ ಪ್ರಧಾನಿಗಳು ಮತ್ತು ಗೃಹಮಂತ್ರಿಗಳು ಹೇಳುತ್ತಿರುವುದಕ್ಕೆ ವ್ಯತಿರಿಕ್ತವಾಗಿ, ಸರಿಯಾದ ನಿಲುವನ್ನು ಗೃಹ ಮಂತ್ರಾಲಯ ತನ್ನ 2019–20ರ ವಾರ್ಷಿಕ ವರದಿಯಲ್ಲಿ ಪ್ರಸ್ತುತಪಡಿಸಿದೆ.: "ಭಾರತ ಸರಕಾರ ದೇಶದಲ್ಲಿ ಒಂದು ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟರ(ಎನ್‌ಪಿಆರ್)ನ್ನು ಎಲ್ಲ ಸಾಮಾನ್ಯ ನಿವಾಸಿಗಳಿಂದ ನಿರ್ದಿಷ್ಟ ಮಾಹಿತಿಗಳನ್ನು ಕಲೆ ಹಾಕುವ ಮೂಲಕ ನಿರ್ಮಿಸುವ ಒಂದು ಸ್ಕೀಮಿಗೆ ಮಂಜೂರಾತಿ ನೀಡಿದೆ. ಎನ್‌ಪಿಆರ್ ರಾಷ್ಟ್ರೀಯ ಭಾರತೀಯ ಪೌರರ ರಿಜಿಸ್ಟರ್(ಎನ್‌ಆರ್‌ಐಸಿ) ನಿರ್ಮಿಸುವತ್ತ ಮೊದಲ ಹೆಜ್ಜೆಯಾಗಿದೆ. ಎನ್‌ಪಿಆರ್‌ಗೆ 2010ರಲ್ಲಿ ಸಂಗ್ರಹಿಸಿದ ಮಾಹಿತಿಯನ್ನು 2015ರಲ್ಲಿ ಸಮಕಾಲಿಕಗೊಳಿಸಲಾಗಿದೆ. 33.43 ಕೋಟಿ ವ್ಯಕ್ತಿಗಳ ಬಯೊಮೆಟ್ರಿಕ್ ದಾಖಲಾತಿಯನ್ನೂ ಈ ಸ್ಕೀಮಿನ ಅಡಿಯಲ್ಲಿ ಮಾಡಲಾಗಿದೆ."



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್



ಹೋರಾಟಗಳನ್ನು ಚುರುಕುಗೊಳಿಸಲು ಸ್ಫೂರ್ತಿ ನೀಡಿದ ಸಿಐಟಿಯು ಸಮ್ಮೇಳನ

ಸೈಯದ್ ಮುಜೀಭ್, ಸಿಐಟಿಯು ರಾಜ್ಯ ಕಾರ್ಯದರ್ಶಿ

ದುಡಿಯುವ ರೈತ, ಕಾರ್ಮಿಕ, ಕೃಷಿ ಕೂಲಿಕಾರರು, ದಲಿತರು, ಮಹಿಳೆಯರು, ಅಲ್ಪಸಂಖ್ಯಾಥರು, ಆದಿವಾಸಿಗಳು, ಜನಸಾಮಾನ್ಯರು, ಯುವಜನರ ಮೇಲೆ ವಿಭಿನ್ನ ನೆಲೆಗಳಲ್ಲಿ ನಡೆಯುತ್ತಿರುವ ತೀವ್ರ ದಾಳಿಗಳ ವಿರುದ್ಧ ಪ್ರಬಲ ಐಕ್ಯ ಜನಚಳವಳಿಯ ಪ್ರತ್ಯುತ್ತರ ನೀಡಲು ಸನ್ನದ್ದರಾಗಿ ದುಡಿಯುವಂತೆ ತಮಿಳುನಾಡಿನ ಕಡಲತೀರ ಚೆನ್ನೈ ನಗರದಲ್ಲಿ ಜನವರಿ 23 ರಿಂದ 27 ರವರೆಗೆ ನಡೆದ 16ನೇ ಸಿಐಟಿಯು ರಾಷ್ಟ್ರ ಸಮ್ಮೇಳನವು ಕರೆ ನೀಡಿದೆ.

ನೇತಾಜಿ ಸುಭಾಶ್ಚಂದ್ರ ಬೋಸ್ ಅವರ ಜನ್ಮದಿನಾರಣೆಯಾದ ಜನವರಿ 23 ರಂದು ಆರಂಭವಾದ ಸಮ್ಮೇಳನದ ಸ್ಥಳಕ್ಕೆ ಸಿಐಟಿಯುನ ಮಾಜಿ ಪ್ರಧಾನ ಕಾರ್ಯದರ್ಶಿಗಳಾದ ಮೊಹಮದ್ ಅಮೀನ್ ನಗರ ಹಾಗೂ ಹಿರಿಯ ಉಪಾಧ್ಯಕ್ಷ ಸುಕುಮಲ್ ಸೇನ್ ವೇದಿಕೆ ಹಾಗೂ ಬಹಿರಂಗ ಸಭೆಯ ಸ್ಥಳಕ್ಕೆ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಕಮ್ಯೂನಿಸ್ಟ್ ಮುಂದಾಳು, ಕಾರ್ಮಿಕ ನಾಯಕ ಸಿಂಗಾರವೇಲು ಅವರ ಹೆಸರಿಡಲಾಗಿತ್ತು.

ಸಮ್ಮೇಳನದ ಧ್ವಜಾರೋಹಣಕ್ಕೂ ಮೊದಲು ರಾಜ್ಯದ ವಿವಿಧೆಡೆಯಲ್ಲಿ ಸಂಚರಿಸಿದ ಏಳು ಜಾಥಾ ತಂಡಗಳಿಂದ ಜ್ಯೋತಿ ಸ್ವೀಕರಿಸುವ ಮೂಲಕ ಕಲಾಪಗಳು ಆರಂಭಗೊಂಡವು. ತದನಂತರ ಸಿಐಟಿಯುನ ರಾಷ್ಟ್ರೀಯ ಅಧ್ಯಕ್ಷರಾದ ಡಾ. ಹೇಮಲತಾ ಅವರು ಧ್ವಜಾರೋಹಣ ನೆರವೇರಿಸಿದರು. ಸಿಐಟಿಯು 50ನೇ ವರ್ಷಾಚರಣೆ ಭಾಗವಾಗಿ ಸಾಂಕೇತಿಕವಾಗಿ ಪಾರಿವಾಳವನ್ನು ಹಾರಿಬಿಡಲಾಯಿತು.

ಉದ್ಘಾಟನಾ ಗೋಷ್ಠಿಯ ಅಧ್ಯಕ್ಷತೆಯನ್ನು ಹೇಮಲತಾ ಅವರು ವಹಿಸಿದ್ದು ಆರಂಭದಲ್ಲಿ ಸ್ವಾಗತ ಸಮಿತಿ ಅಧ್ಯಕ್ಷರಾದ ಸಂಗಾತಿ ಸೌಂದರ್ ರಾಜನ್ ಅವರು ಎಲ್ಲರನ್ನು ಸ್ವಾಗತಿಸಿದರು. ಈ ಉದ್ಘಾಟನಾ ಗೋಷ್ಠಿಯಲ್ಲಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯ ಸದಸ್ಯ ಸಂಘಟನೆಗಳಾದ ಕೇಂದ್ರ ಕಾರ್ಮಿಕ ಸಂಘಟನೆಗಳ ನಾಯಕರುಗಳಾದ ಎಐಟಿಯುಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಅಮರ್ ಜಿತ್ ಕೌರ್, ಐಎನ್‌ಟಿಯುಸಿನ ಉಪಾಧ್ಯಕ್ಷರಾದ ಮುರುಗೇಶನ್, ಎಚ್‌ಎಂಎಸ್‌ನ ಅಧ್ಯಕ್ಷರಾದ ರಾಜಾ ಶ್ರೀಧರ್, ಎಐಟಿಯುಸಿನ ರಾಧಾಕೃಷ್ಣ, ಎಐಸಿಸಿಟಿಯುನ ವಿ.ಶಂಕರ್, ಸೇವಾ ಸಂಘಟನೆಯ ಸೋನಿಯಾ, ಯುಟಿಯುಸಿಯ ಅಶೋಕ್ ಘೋಷ್, ಎಲ್.ಪಿ.ಎಫ್‌ನ ಷಣ್ಮುಗಂ, ಟಿಯುಸಿಸಿಯ ಕದೀ ರಾವಣ್ ಅವರು ಶುಭ ಕೋರಿ ಮಾತನಾಡಿದರು. ಬಹುತೇಕ ಸಂಗಾತಿಗಳು ಇಂದಿನ ಪರಿಸ್ಥಿತಿಯುಲ್ಲಿ ಕಾರ್ಮಿಕರ ಜಂಟಿ ಚಳವಳಿಯನ್ನು ಮತ್ತಷ್ಟು ಬಲಗೊಳಿಸುವ ಅಗತ್ಯತೆಯನ್ನು ಪ್ರತಿಪಾದಿಸಿದರು. ದೇಶದಲ್ಲಿ ದುಡಿಯುವ ಜನರ ಮೇಲಿನ ದಾಳಿಯನ್ನು ಹಿಮ್ಮೆಟ್ಟಿಸಲು ಬೇಕಾದ ಐಕ್ಯ ಚಳವಳಿ ಕಟ್ಟುವಲ್ಲಿ ಸಿಐಟಿಯು ಪ್ರಮುಖ ಪಾತ್ರ ವಹಿಸುವಂತೆ ಕೋರಿದರು.

ಸಂಚಲನ ಸೃಷ್ಟಿಸಿದ ಡಬ್ಲ್ಯೂಎಫ್‌ಟಿಯು ಅಧ್ಯಕ್ಷರ ಮಾತು:

ಉದ್ಘಾಟನಾ ಗೋಷ್ಠಿಯಲ್ಲಿ ಮಾತನಾಡಿ ಡಬ್ಲ್ಯುಎಫ್‌ಟಿಯುನ ಅಧ್ಯಕ್ಷರಾದ ಮೈಕಲ್ ನಿಕಾವ್ ಮಿಯಾ ಅವರು, 126 ದೇಶಗಳ 97 ಮಿಲಿಯನ್ ಕಾರ್ಮಿಕರ ಪರವಾಗಿ ಸಮ್ಮೇಳನಕ್ಕೆ ಶುಭ ಕೋರುವುದಾಗಿ ತಿಳಿಸಿದರು. ಮುಂದುವರಿದು ಮಾತನಾಡಿದ ಇಂದು ಬಂಡವಾಳಶಾಹಿ ವ್ಯವಸ್ಥೆ ಜಗತ್ತಿನಾದ್ಯಂತ ದುಡಿಯುವ ಜನರ ಸಾಮಾಜಿಕ ಭದ್ರತೆಯ ಮೇಲೆ ದಾಳಿ ಮಾಡುತ್ತಿದೆ. ಹಕ್ಕುಗಳನ್ನು ಕಸಿಯುತ್ತಿದೆ ಎಂದರು. ಬಂಡವಾಳಶಾಹಿ ಸದಾ ತನ್ನೊಳಗೆ ಸಂಕಟಗಳನ್ನು ಇಟ್ಟುಕೊಂಡೇ ಸಾಗುತ್ತಿರುತ್ತದೆ. ತನ್ನ ಸಂಕಟಗಳ ಪರಿಹಾರಕ್ಕೆ ಅದು ಕಾರ್ಮಿಕರ ಗಳಿಕೆಯನ್ನು ಕಸಿಯುತ್ತದೆ ಎಂದು ಆಪಾದಿಸಿದ ಅವರು ಜಗತ್ತಿನಲ್ಲಿ ಕೆಲವೇ ಶ್ರೀಮಂತರು ಮತ್ತಷ್ಟು ಶ್ರೀಮಂತರಾಗುತ್ತಿದ್ದಾರೆ. ಇದನ್ನು ತಡೆಯಲು ಶ್ರೀಮಂತರ ಸಂಪತ್ತನ್ನು ಸಾಮಾಜಿಕರಣಗೊಳಿಸಿ ಎಲ್ಲಾ ಜನರಿಗೆ ಸಮಾನತೆ ತರಲು ಹೋರಾಟ ಮತ್ತಷ್ಟು ತೀವ್ರಗೊಳ್ಳಬೇಕಾಗಿದೆ ಎಂದರು. ಇದೊಂದು ರಾಜಕೀಯ ಪ್ರಕ್ರಿಯೆ. ಈ ಪ್ರಕ್ರಿಯೆಗೆ ದುಡಿಯುವ ಜನರು ಮುಂದಾಗಿ ಬಂಡವಾಳಶಾಹಿ ವ್ಯವಸ್ಥೆಯನ್ನು ಹಿಮ್ಮೆಟ್ಟಿಸಬೇಕಾಗಿದೆ ಎಂದು ಕರೆ ನೀಡಿದರು.

ಉದ್ಯೋಗ ಅವಕಾಶಗಳ ಕಡಿತ, ಹೆಚ್ಚಿನ ದುಡಿಮೆ, ಪಿಂಚಣಿ ಕಸಿದುಕೊಳ್ಳುವುದು, ವೈದ್ಯಕೀಯ ಸೌಲಭ್ಯಗಳ ಕಡಿತ ಮಾಡುತ್ತ ಬಂಡವಾಳಶಾಹಿ ತನ್ನ ಲಾಭವನ್ನು ಹೆಚ್ಚಿಸಿಕೊಳ್ಳುವ ಪ್ರಕ್ರಿಯೆ ಎಲ್ಲೆಡೆ ಕಾಣಬಹುದಾಗಿದೆ. ಇದಕ್ಕೆ ಪ್ರತಿಯಾಗಿ ಪ್ರತಿರೋಧಗಳು ಬೆಳೆದುಬರುತ್ತಿರುವುದು ಗಮನಾರ್ಹ ಎಂದರು.

ಭಾರತ ಕಾರ್ಮಿಕ ವರ್ಗ ಎದುರಿಸುತ್ತಿರುವ ಕೋಮುವಾದಿ ಹಾಗು ಸಾಮಾಜಿಕ ದಾಳಿಗಳ ಬಗ್ಗೆ ಪ್ರಸ್ತಾಪಿಸಿದ ಅವರು, ಬಂಡವಾಳಶಾಹಿ ದುಡಿಯುವ ಜನರ ಐಕ್ಯತೆಯನ್ನು ವಿವಿಧ ರೀತಿಯಲ್ಲಿ ವಿಭಜಿಸಲು ಪ್ರಯತ್ನಿಸುತ್ತದೆ ಎಂದರು. ಕೋಮುವಾಧಾರಿತ, ಪ್ರಾದೇಶಿಕ, ಭಾಷೆ ಮತ್ತಿತರ ರೀತಿಯಲ್ಲಿ ವಿಭಜಿಸಲು ಬಂಡವಾಳಶಾಹಿ ನಡೆಸುವ ಪ್ರಯತ್ನಗಳಿಗೆ ದುಡಿಯುವ ವರ್ಗ ಕಿವಿಗೊಡದೆ, ಸೌಹಾರ್ದತೆ ಮತ್ತು ಐಕ್ಯತೆಯಿಂದ ಮುಂದೆ ಸಾಗುವಂತೆ ಕರೆ ನೀಡಿದರು. ಡಬ್ಲ್ಯೂಎಫ್‌ಟಿಯು ಅಧ್ಯಕ್ಷರ ಮಾತುಗಳು ಸಮ್ಮೇಳನದಲ್ಲಿ ಸ್ಫೂರ್ತಿ ನೀಡಿತು. ಅಧ್ಯಕ್ಷರ ಮಾತಿನ ನಂತರ ಉದ್ಘಾಟನಾ ಸಮಾರಂಭವು ಮುಕ್ತಾಯಗೊಂಡಿತು.

ಸಂಜೆ 4 ಗಂಟೆಗೆ ಆರಂಭವಾದ ಪ್ರತಿನಿಧಿ ಸಮಾವೇಶವು ಅಗಲಿದ ಸಂಗಾತಿಗಳಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿತು. ಪ್ರಧಾನ ಕಾರ್ಯದರ್ಶಿಗಳಾದ ತಪನ್ ಸೇನ್ ಅವರು ಕಾರ್ಯದರ್ಶಿಗಳ ವರದಿಯ ಭಾಗ–1 ಮಂಡನೆ ಮಾಡಿದರಲ್ಲದೆ, ಇದರಲ್ಲಿ ದೇಶದ ಆರ್ಥಿಕ ಪರಿಸ್ಥಿತಿ ದುಡಿಯುವ ಜನರ ಎದುರಿಗಿರುವ ಸವಾಲುಗಳು, ಸರ್ಕಾರದ ನಡೆ, ಜೆಸಿಟಿಯು ಮೂಲಕ ಬೆಳೆದು ಬರುತ್ತಿರುವ ಪ್ರತಿರೋಧ ಈ ಮೂರು ವರ್ಷಗಳ ಮುಷ್ಕರಗಳ ಅನುಭವ ಮತ್ತು ಮುಂದಿನ ನಡೆಗಳ ಬಗ್ಗೆ ವಿಷಯ ಮಂಡಿಸಿದರು.



ಸಂವಿಧಾನ ವಿರೋಧಿ ತಾರತಮ್ಯದಿಂದ ಕೂಡಿರುವ ಸಿಎಎ, ಎನ್‌ಆರ್‌ಸಿ ಮತ್ತು ಎನ್‌ಪಿಎ ವಿರುದ್ಧ ಗಣರಾಜ್ಯೋತ್ಸವ ದಿನದಂದು ಮಾನವ ಸರಪಳಿ:

ಸಮ್ಮೇಳನದ ನಾಲ್ಕನೆ ದಿನ ಬೆಳಗ್ಗೆ 7.30 ಗಂಟೆಗೆ ಸರಿಯಾಗಿ ಸಮ್ಮೇಳನದ ಸಭಾಂಗಣದಲ್ಲಿ ಸಿಐಟಿಯುನ ರಾಷ್ಟ್ರೀಯ ಅಧ್ಯಕ್ಷರು ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು. ನಂತರ ರಾಷ್ಟ್ರಗೀತೆ ಹಾಡಲಾಯಿತು.

ಸಂವಿಧಾನ ವಿರೋಧಿ, ತಾರತಮ್ಯದಿಂದ ಕೂಡಿರುವ ಸಿಎಎ, ಎನ್‌ಆರ್‌ಸಿ ಮತ್ತು ಎನ್‌ಪಿಆರ್ ಗಳ ವಿರುದ್ದ ಬೃಹತ್ ಮಾನವ ಸರಪಳಿಯನ್ನು ರಚಿಸಿ ಪ್ರತಿಭಟನೆ ನಡೆಸಲಾಯಿತು. ಈ ಸಂಬಂಧ ಸಮ್ಮೇಳನದಲ್ಲಿ ನಿರ್ಣಯವೊಂದನ್ನು ಸಹ ಅಂಗೀಕರಿಸಲಾಗಿದೆ. ದೇಶದ ಸ್ವಾತಂತ್ರ್ಯ ಚಳವಳಿಯಲ್ಲಿ ಬ್ರಿಟಿಷರ ವಿರುದ್ದ ಯಾವ ಬೇಧಭಾವವು ಇಲ್ಲದೆ ಹಿಂದೂಗಳು, ಮುಸ್ಲೀಮರು, ಸಿಖ್ಖರು, ಒಟ್ಟಾಗಿ ಬ್ರಿಟೀಷರ ವಿರುದ್ಧ ಹೋರಾಡಿದ್ದಾರೆ. ಈ ಹಿನ್ನೆಲೆಯಲ್ಲಿ ನಮ್ಮ ದೇಶ ಚರ್ಚಿಸಿ ಅಂಗೀಕರಿಸಿರುವ ಸಂವಿಧಾನ ಧರ್ಮ ನಿರಪೇಕ್ಷ, ಪ್ರಜಾಸತ್ತಾತ್ಮಕ ಸ್ವಾವಲಂಬಿ ಭಾರತವಾಗಿ ದೇಶದ ಜನತೆಯನ್ನು ಧರ್ಮ, ಭಾಷೆ, ಲಿಂಗ, ಹಾಗೂ ಪ್ರದೇಶದ ಆಧಾರದಲ್ಲಿ ತಾರತಮ್ಯ ಮಾಡಲು ಅವಕಾಶ ನೀಡುವುದಿಲ್ಲ. ಆ ಮೂಲಕ ಅದು ಸಮಾನತೆಯನ್ನು ಸಾರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಸಂವಿಧಾನ ವಿರೋಧಿಯಾಗಿ ಜಾತ್ಯತೀತ ತತ್ವಗಳನ್ನು ಬದಿಗೆ ಸರಿಸಿ ತಮ್ಮ ಕೋಮುವಾದಿ ಅಜೆಂಡಾವನ್ನು ಜಾರಿ ಮಾಡುವ ಭಾಗವಾಗಿ ದೇಶದಲ್ಲಿ ವಿಭಜನೆ ಸೃಷ್ಟಿಸುವ ಸಿಎಎ, ಎನ್‌ಆರ್‌ಸಿ ಮತ್ತು ಎನ್‌ಪಿಆರ್ ಜಾರಿಗೆ ತಂದಿರುವ ಕ್ರಮವನ್ನು ಸಮ್ಮೇಳನವು ತೀವ್ರವಾಗಿ ಖಂಡಿಸಿದೆ.

ಕಾಗಜ್ ನಹಿ ದಿಖಾಯಿಂಗೇ:

ಎನ್‌ಸಿಆರ್, ಎನ್‌ಪಿಆರ್ ಗಳು ಕೇವಲ ಮುಸ್ಲೀಮರಿಗೆ ಸಂಬಂಧಪಟ್ಟ ವಿಚಾರಗಳೆಂದು ಬಿಂಬಿಸುತ್ತಿರುವ ಕ್ರಮವನ್ನು ತೀವ್ರವಾಗಿ ಅಲ್ಲಗಳೆದ ಸಿಐಟಿಯುನ ರಾಷ್ಟ್ರೀಯ ಕಾರ್ಯದರ್ಶಿ ತಪನ್ ಸೇನ್ ಅವರು ದೇಶದ ವಿಶಾಲ ತಳಹದಿಯಲ್ಲಿ ಆರ್ಥಿಕ, ಸಾಮಾಜಿಕವಾಗಿ ಹಿಂದುಳಿದ ವಿಭಾಗಗಳು, ಭೂರಹಿತ ಗ್ರಾಮೀಣ ಜನರು, ವಲಸೆ ಕಾರ್ಮಿಕರು, ಆದಿವಾಸಿಗಳು ದಲಿತರು ಮತ್ತು ಮಹಿಳೆಯರು ತಮ್ಮ ದಾಖಲಾತಿಗಳನ್ನು ಸಾಬೀತುಪಡಿಸಲು ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಲಿದೆ. ಇದರಲ್ಲಿ ವಿಫಲರಾದರೆ ಅಂಥವರನ್ನು ಬಂಧನ ಕೇಂದ್ರಗಳಿಗೆ ಕಳಿಸಲಾಗುತ್ತದೆ. ಇದು ದೇಶದ ನಾಗರಿಕರಿಗೆ ಮಾಡುವ ಅನ್ಯಾಯ. ಹಾಗಾಗಿ 2020 ಏಪ್ರಿಲ್ ನಲ್ಲಿ ಆರಂಭವಾಗುವ ಜನಗಣತಿಯ ಸಂದರ್ಭದಲ್ಲಿ ಕೇವಲ ಜನಗಣತಿಯ ಪ್ರಶ್ನೆಗಳಿಗಷ್ಟೇ ಉತ್ತರಿಸುವ ಸಿಎಎ ಮತ್ತು ಎನ್‌ಆರ್‌ಸಿ ಪ್ರಶ್ನೆಗಳಿಗೆ ಉತ್ತರಿಸದೆ ಕಾಗಜ್ ನಹಿ ದಿಖಾಯಂಗೇ ಚಳವಳಿಯನ್ನು ತೀವ್ರಗೊಳಿಸಲು ಅವರು ಕರೆ ನೀಡಿದರು.



ನೂತನ ಪದಾಧಿಕಾರಿಗಳು

ಅಧ್ಯಕ್ಷರು : ಡಾ. ಕೆ. ಹೇಮಲತ

ಪ್ರಧಾನ ಕಾರ್ಯದರ್ಶಿ : ತಪನ್ ಸೇನ್

ಖಜಾಂಚಿ : ಎಂ.ಎನ್. ಮಾಲ್ ಕೋಟಿಯ

ಉಪಾಧ್ಯಕ್ಷರು : ಎ.ಕೆ. ಪದ್ಮನಾಭನ್, ಜೆ.ಎಸ್. ಮುಜುಂದಾರ್, ಎ. ಸೌಂದರ ರಾಜನ್, ಕೆ.ಓ. ಹಬೀಬ್, ಕೆ.ಕೆ. ದಿವಾಕರನ್, ಅನಂತಲತ್ತಂ ಆನಂದನ್, ಮರ್ಸಿ ಕುಟ್ಟಿಯಮ್ಮ, ಮಾಣಿಕ್ ದೇವೆ, ಮಾಲತಿ ಚಿಕ್ಕಿಬಾಬು, ರಘುನಾಥ್ ಸಿಂಗ್, ವಿಷ್ಣು ಮಹಂತಿ, ಎಸ್. ವರಲಕ್ಷ್ಮಿ, ಕೆ.ಎಲ್. ಕರಾಡ್, ಬೇಬಿ ರಾಣಿ, ಎಂ. ಸಾಯಿಬಾಬು, ಸುಭಾಷ್ ಮುಖರ್ಜಿ

ಕಾರ್ಯದರ್ಶಿಗಳು : ಎಸ್. ದೇವರಾಯ್, ಎಲಮರ ಕರೀಂ, ಕಾಶ್ಮೀರ್ ಸಿಂಗ್ ಠಾಕೂರ್, ಪ್ರಶಾಂತ ನಂದಚೌದರಿ, ಜಿ. ಸುಕುಮಾರನ್, ಪಿ. ನಂದಕುಮಾರ್, ಎನ್.ಕೆ. ಗಫೂರ್, ಡಿ.ಡಿ. ರಮಾನಂದನ್, ಎ.ಆರ್. ಸಿಂಧೂ, ಎ. ಚಂದ್ರನ್ ಪಿಳ್ಳೈ, ಮೀನಾಕ್ಷಿ ಸುಂದರಂ, ಉಷಾರಾಣಿ, ಆನಾದಿ ಸಾಹೂ, ಚುಕ್ಕರಾಮುಲು, ಮಧುಮಿತ ಬಂಡೋಪಾಧ್ಯಾಯ, ಅಮಿತ್ ಘೋಹ, ಆರ್. ಕಡುಮಲಯಾಳ್, ತಪನ್ ಶರ್ಮಾ, ಪ್ರಮೋದ ಪ್ರಧಾನ್.

ಕಾಯಂ ಆಹ್ವಾನಿತರು : ಬಾಸುದೇವ್ ಆಚಾರ್ಯ



➘ ಈ ವಿಚಾರವಾಗಿ 26 ರಾಜ್ಯಗಳ 47 ಸಂಗಾತಿಗಳು ಚರ್ಚೆಯಲ್ಲಿ ಪಾಲ್ಗೊಂಡು ತಮ್ಮ ಅಭಿಪ್ರಾಯ, ಅನಿಸಿಕೆಗಳು ಮತ್ತು ಸಲಹೆಗಳನ್ನ ನೀಡಿದರು. ಕರ್ನಾಟಕದಿಂದ ಸಂಗಾತಿ ಎನ್.ಪಿ. \ಪ್ರತಾಪ ಸಿಂಹ ಹಾಗೂ ಎಚ್. ಎಸ್.ಸುನಂದ ಅವರು ಚರ್ಚೆಯಲ್ಲಿ ಪಾಲ್ಗೊಂಡರು. ಕಾರ್ಯದರ್ಶಿಗಳ ವರದಿಯ ಮೇಲಿನ ಚರ್ಚೆ ಎರಡನೇ ದಿನದ ಕಲಾಪಗಳ ಪ್ರಮುಖ ಭಾಗವಾಗಿತ್ತು. ಮೂರನೇ ದಿನ ಕಾರ್ಯದರ್ಶಿಗಳು ಮಂಡಿಸಿದ್ದ ಸಂಘಟನಾ ವರದಿಯ ಕುರಿತು ಚರ್ಚೆ ನಡೆಯಿತು. ಈ ಚರ್ಚೆಯಲ್ಲಿ 26 ರಾಜ್ಯಗಳ ಹಾಗೂ ವಿವಿಧ ಫೆಡರೇಷನ್‌ಗಳ 47 ಸಂಗಾತಿಗಳು ಪಾಲ್ಗೊಂಡು ಚರ್ಚೆ, ವಿಮರ್ಶೆ, ಸ್ವವಿಮರ್ಶೆ ಮಾಡಿಕೊಂಡು ವರದಿಯನ್ನು ಬೆಂಬಲಿಸಿ ಮಾತನಾಡಿದರು.

ಕರ್ನಾಟಕದ ಪರವಾಗಿ ಈ ಚರ್ಚೆಯಲ್ಲಿ ಸಂಗಾತಿ ಕೆ.ಎನ್.ಉಮೇಶ್ ಪಾಲ್ಗೊಂಡಿದ್ದರು. ನಾಲ್ಕನೇ ದಿನದ ಕಲಾಪಗಳು ಪ್ರತಿನಿಧಿಗಳು ನಾಲ್ಕು ಆಯೋಗಗಳಲ್ಲಿ ವಿಭಜನೆಗೊಂಡು ಚರ್ಚೆಯಲ್ಲಿ ಪಾಲ್ಗೊಂಡರು. 1. ಪರ್ಯಾಯ ನೀತಿಗಳಿಗಾಗಿ ಆಗ್ರಹಿಸಿ ಗೋಷ್ಠಿ, 2. ನಿರುದ್ಯೋಗ, 3. ಕಾರ್ಮಿಕ ಕಾನೂನುಗಳನ್ನ ಸಂಹಿತೆಗಳನ್ನಾಗಿ ಪರಿವರ್ತಿಸುವ ಕುರಿತು, 4. ಸಾಮಾಜಿಕ ದಮನದ ವಿರುದ್ಧ ನಮ್ಮ ಮಧ್ಯಪ್ರವೇಶಗಳು ಗೋಷ್ಠಿಗಳು ನಡೆದವು. ಪ್ರತಿ ಆಯೋಗದಲ್ಲೂ ಆರಂಭದ 15–20 ನಿಮಿಷಗಳ ಕಾಲ ಸಂಗಾತಿಗಳು ವಿಷಯ ಮಂಡಿಸಿ ತದನಂತರದಲ್ಲಿ ವಿವಿಧ ರಾಜ್ಯಗಳ ಹಾಗೂ ವಲಯಗಳ ಪ್ರತಿನಿಧಿ ಸಂಗಾತಿಗಳು ತಮ್ಮ ಅನುಭವಗಳನ್ನು ಈ ವಿಷಯಕ್ಕೆ ಸಂಬಂಧಿಸಿದಂತೆ ಹಂಚಿಕೊಂಡರು. ಈ ನಾಲ್ಕು ಆಯೋಗಗಳ ಚರ್ಚೆಯಲ್ಲಿ ನಾಲ್ಕನೆ ದಿನದ ಕಲಾಪ ಮುಕ್ತಾಯಗೊಂಡಿತು. ಸಮ್ಮೇಳನದ ಐದನೆ ದಿನ ಜನವರಿ 27ರಂದು ಆರಂಭದಲ್ಲಿ ಪರಿಚಯ ಪತ್ರ ವರದಿಯನ್ನು ಮಂಡಿಸಲಾಯಿತು. ಮುಂದಿನ ಗುರಿಗಳ ಬಗ್ಗೆ ಹಾಗೂ ಚರ್ಚೆಯನ್ನು ಕುರಿತು ಪ್ರಧಾನ ಕಾರ್ಯದರ್ಶಿಗಳಾದ ತಪನ್ ಸೇನ್ ಅವರು ಉತ್ತರಿಸಿದರು. ಇದಾದ ನಂತರದಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ, ತದನಂತನ ಜನರಲ್ ಕೌನ್ಸಿಲ್, ನಂತರ ವರ್ಕಿಂಗ್ ಕಮಿಟಿ ಸದಸ್ಯರ ಆಯ್ಕೆ ನಡೆಯಿತು. ಕರ್ನಾಟಕದ ಪರವಾಗಿ ಆಯ್ಕೆಯಾಧ ವರ್ಕಿಂಗ್ ಕಮಿಟಿ ಹಾಗೂ ಜನರಲ್ ಕೌನ್ಸಿಲ್ ಸದಸ್ಯರ ವಿವರ ಕೆಳಗಿನಂತಿದೆ.

ಕರ್ನಾಟಕದ ವರ್ಕಿಂಗ್ – ಜನರಲ್ ಕೌನ್ಸಿಲ್ ಕಮಿಟಿ ಸದಸ್ಯರು

1. ಕೆ.ಎನ್. ಉಮೇಶ್, 2. ಸೈಯದ್ ಮುಜೀಬ್, 3. ವಸಂತಚಾರಿ, 4. ಕೆ.ಮಹಾಂತೇಶ್, 5. ಎಚ್.ಎಸ್. ಸುನಂದ ಇವರು ವರ್ಕಿಂಗ್ ಕಮಿಟಿ ಸದಸ್ಯರು. 6. ಯಮುನಾ ಗಾವಂಕರ್, 7. ಜೆ. ಬಾಲಕೃಷ್ಣಶೆಟ್ಟಿ, 8. ಕೆ.ಶಂಕರ್, 9. ಮಾಲಿನಿ ಮೆಸ್ತ, 10. ವೀರಾಸ್ವಾಮಿ, 11. ಮಂಟನಗೌಡ, 12. ಆರ್.ಎಸ್.ಬಸವರಾಜು, 13. ಶಾಂತಾ ಘಂಟೆ, 14. ಮಹೇಶ್ ಪತ್ತಾರ್, 15. ಪಿ.ಕೆ.ಪರಮೇಶ್ವರ್, 16. ಸುನಿಲ್ ಕುಮಾರ್ ಬಜಾಲ್, 17. ಎನ್. ಪ್ರತಾಪಸಿಂಹ.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ: ಮಾರ್ಚ್ 06, 2020
ದೇಶವ್ಯಾಪಿ ಜೈಲ್ ಭರೋಗೆ ಕರೆ :

ಮಕ್ಕಳು ಮತ್ತು ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ದಬ್ಬಾಳಿಕೆ ಮತ್ತು ಹಿಂಸೆಗಳ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ಸಿಐಟಿಯು 16ನೇ ಅಖಿಲ ಭಾರತ ಸಮ್ಮೇಳನ ಇವುಗಳ ವಿರುದ್ಧ ಮಾರ್ಚ್ 06, 2020 ರಂದು ದೇಶವ್ಯಾಪಿ ಜೈಲ್‌ಭರೋ ಕಾರ್ಯಕ್ರಮವನ್ನು ನಡೆಸುವಂತೆ ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ. ಈ ಸಂಬಂಧ ರಾಷ್ಟ್ರೀಯ ಕಾರ್ಯದರ್ಶಿ ಎ.ಆರ್. ಸಿಂಧು ಅವರು ಮಂಡಿಸಿದ ನಿರ್ಣಯವನ್ನು ಸಮ್ಮೇಳನವು ಒಕ್ಕೊರಲಿನಿಂದ ಅಂಗೀಕರಿಸಿತು. ಬಿಜೆಪಿ ಪಕ್ಷದ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಮಕ್ಕಳು ಮತ್ತು ಮಹಿಳೆಯರ ಮೇಲಿನ ಹಿಂಸೆ ಮತ್ತು ದೌರ್ಜನ್ಯಗಳ ಸಂಖ್ಯೆ ಹೆಚ್ಚಾಗಿರುವುದನ್ನು ನಾವು ಸೂಕ್ಷ್ಮವಾಗಿ ಗಮನಿಸಬಹುದಾಗಿದೆ. ಮತ್ತೊಂದೆಡೆ ಮಹಿಳೆಯರ ಮೇಲೆ ಎಲ್ಲಾ ಕ್ಷೇತ್ರಗಳಲ್ಲಿ ತಾರತಮ್ಯದ ನಡವಳಿಕೆಗಳ ಮುಂದುವರಿದಿವೆ. ಮಹಿಳೆಯರ ಆರ್ಥಿಕ ಸಾಮಾಜಿಕ ಶೋಷಣೆಯ ಜೊತೆಗೆ ಸಮಾಜದಲ್ಲಿ ರೂಢಿಯಲ್ಲಿರುವ ಮನೋಭಾವನೆಯಂತೆ ಮಹಿಳೆಯರನ್ನು ಎರಡನೇ ದರ್ಜೆಯ ಪ್ರಜೆಗಳಂತೆ ಕಾಣಲಾಗುತ್ತಿದೆ. ಈ ಪ್ರವೃತ್ತಿಯು ನವ ಉದಾರೀಕರಣ ನೀತಿಗಳ ಈ ಕಾಲಘಟ್ಟದಲ್ಲಿಯೂ ಮುಗಿಲುಮುಟ್ಟಿದೆ.

ನಿಗದಿತ ಕಾರ್ಮಿಕರ ಸರ್ವೆಯೊಂದರ ಪ್ರಕಾರ ಕೆಲಸಗಳಲ್ಲಿ ಮಹಿಳೆಯರ ಸಂಖ್ಯೆ 2014ರಲ್ಲಿ ಶೇ. 41ರಷ್ಟು ಇದ್ದುದು, 2017–18ರ ಸಾಲಿಗೆ ಶೇ. 22ಕ್ಕೆ ಕುಸಿದಿದೆ. ಬಹುತೇಕ ಮಹಿಳೆಯರ ಕೆಲಸಗಳನ್ನು ಈ ಸಮಾಜ ಕೆಲಸವೆಂದು ಪರಿಗಣಿಸುವುದಿಲ್ಲ ಮತ್ತು ಅಂಕಿಅಂಶಗಳಲ್ಲಿ ಈ ಕೆಲಸಗಳು ಪ್ರತಿಫಲನಗೊಳ್ಳುವುದೂ ಇಲ್ಲ. ವಿಶ್ವಸಂಸ್ಥೆಯ ತಂಡವೊಂದರ ಅಧ್ಯಯನದ ಪ್ರಕಾರ ಭಾರತೀಯ ಮಹಿಳೆಯರು ನಿರ್ವಹಿಸುವ ಕೆಲಸಗಳಲ್ಲಿ ಶೇ. 51ರಷ್ಟು ಕೆಲಸಗಳು ಸಂಬಳರಹಿತವಾಗಿವೆ. ಹಾಗೂ ಅವುಗಳು ರಾಷ್ಟ್ರದ ಅಂಕಿಅಂಶಗಳಲ್ಲಿ ಉಲ್ಲೇಖಗೊಳ್ಳದ ಕೆಲಸಗಳಾಗಿವೆ. ಐಎಲ್‌ಓ ಪ್ರಕಾರ ಮಹಿಳೆಯರ ಸಂಬಳರಹಿತ ದುಡಿಮೆಯು ಒಂದು ಕಾಳಜಿಯ ವಿಷಯವಾಗಿದೆ. ಇದು ಒಟ್ಟಾರೆ ಆರ್ಥಿಕತೆ ಪೂರಕವಾದ ಕೆಲಸವಾಗಿರುತ್ತದೆ.

ಪುಟ 10 ಕ್ಕೆ

ರಾಷ್ಟ್ರೀಯ ಕ್ರೀಡಾಪಟುವಿಗೆ ಸನ್ಮಾನ

ಪಶ್ಚಿಮ ಬಂಗಾಳದ ನಾದಿಯ ಜಿಲ್ಲೆಯ ಬೀಡಿ ಕಾರ್ಮಿಕರ ಸಂಘಟಕಿ, ಸ್ವತಃ ಬೀಡಿ ಕಾರ್ಮಿಕರ ಕುಟುಂಬದಿಂದ ಬಂದಿರುವ ರಾಷ್ಟ್ರೀಯ ಕ್ರೀಡಾಪಟು ಸಮ್ಮೇಳನಕ್ಕೆ ಪ್ರತಿನಿಧಿಯಾಗಿ ಭಾಗವಹಿಸಿದ್ದ ಕಾಂ. ರಚನಾ ಸರ್ಕಾರ್ ಅವರನ್ನು ರಾಷ್ಟ್ರೀಯ ಅಧ್ಯಕ್ಷರಾದ ಡಾ.ಹೇಮಲತ ಅವರು ಸನ್ಮಾನಿಸಿದರು. ಸಂಗಾತಿ ರಚನಾ ಅವರು 2019ರಲ್ಲಿ ನಡೆದ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾಗವಹಿಸಿ ಜಾವೆಲಿನ್ ಎಸೆತ ಹಾಗೂ ಲಾಂಗ್ ಜಂಪ್‌ನಲ್ಲಿ ಸುವರ್ಣ ಪದಕವನ್ನು ಹಾಗೂ 100 ಮೀಟರ್ ಓಟದಲ್ಲಿ ಬೆಳ್ಳಿ ಪದಕವನ್ನು ಗಳಿಸಿರುತ್ತಾರೆ. ಈ ಸಂಗಾತಿ ತೃಣಮೂಲ ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳ ನಿರಂತರ ದಾಳಿಯ ನಡುವೆಯೂ 2013 ಮತ್ತು 2018ರಲ್ಲಿ ಸ್ಥಳೀಯ ಗ್ರಾಮ ಪಂಚಾಯಿತಿಯಲ್ಲಿ ಚುನಾವಣೆಯಲ್ಲಿ ಗೆಲುವು ಸಾಧಿಸಿರುತ್ತಾರೆ.





ಹೋರಾಟಗಳನ್ನು ಚುರುಕುಗೊಳಿಸಲು ಸ್ಫೂರ್ತಿ ನೀಡಿದ ಸಿಐಟಿಯು............ ಪುಟ 9 ರಿಂದ

ಮಹಿಳೆಯರು ಮಾಡುವ ಕೆಲಸಗಳು ಒಟ್ಟಾರೆ ಆರ್ಥಿಕತೆಯಲ್ಲಿ \ಉತ್ಪಾದನಾ, ವಾಣಿಜ್ಯ ಮತ್ತು ಸಾರಿಗೆ ಕ್ಷೇತ್ರಗಳಿಗಿಂತಲೂ ಹೆಚ್ಚಿನ ಕಾಣಿಕೆಯನ್ನು ನೀಡುತ್ತದೆ. ಇದನ್ನು ಪರಿಗಣಿಸಿ ಮಹಿಳೆಯರ ದುಡಿಮೆಯನ್ನು ಮತ್ತು ಆರ್ಥಿಕತೆ ಅದರ ಕೊಡುಗೆಯನ್ನು ಸರಿಯಾಗಿ ಅಂದಾಜಿಸಬೇಕಾದ ಅಗತ್ಯವಿದೆ. ಎಲ್ಲಾ ಕ್ಷೇತ್ರಗಳಲ್ಲಿಯೂ ಮಹಿಳೆಯರ ಮೇಲಿನ ಶೋಷಣೆಯನ್ನು ಗುರುತಿಸಬೇಕಿದೆ. ಒಂದು ಅಂದಾಜಿನ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ದುಡಿಯುವ ಮಹಿಳೆಗೆ ಸಿಗುವ ವೇತನ, ಪುರುಷನ ವೇತನಕ್ಕಿಂತ ಶೇಕಡ 34 ರಷ್ಟು ಕಡಿಮೆ ಇದೆ. ನಗರ ಪ್ರದೇಶಗಳಲ್ಲಿ ಈ ತಾರತಮ್ಯ ಶೇ. 19ರಷ್ಟು ಇದೆ. ಭಾರತದಲ್ಲಿ ಲಿಂಗಾಧಾರಿತ ವೇತನ ತಾರತಮ್ಯವು ದೊಡ್ಡ ಪ್ರಮಾಣದಲ್ಲಿದೆ. ಬಹಳಷ್ಟು ಜನರು ನಂಬಿರುವಂತೆ ಉನ್ನತ ಶಿಕ್ಷಣ ಮತ್ತು ಸೇವಾ ಹಿರಿತನಕ್ಕೆ ಹೆಚ್ಚಿನ ವೇತನ ದೊರೆಯುತ್ತದೆ ಎಂಬ ನಂಬಿಕೆಯು ಮಹಿಳೆಯರ ವಿಚಾರದಲ್ಲಿ ಸುಳ್ಳಾಗಿದೆ.

ಅತಿದೊಡ್ಡ ಸಂಖ್ಯೆಯಲ್ಲಿರುವ ಅಸಂಘಟಿತ ಕ್ಷೇತ್ರ ಮಹಿಳಾ ಕಾರ್ಮಿಕರಿಗೆ ಹೆರಿಗೆ ರಜಾ ಸೌಲಭ್ಯ, ಶಿಶುಪಾಲನ ಕೇಂದ್ರಗಳ ಸೌಲಭ್ಯ ಸಿಗುತ್ತಿಲ್ಲ. ರಾತ್ರಿಪಾಳಿಯ ಕೆಲಸಗಳನ್ನು ಒತ್ತಾಯಪೂರ್ವಕವಾಗಿ ಹೇರಲಾಗುತ್ತಿದೆ. ಕೇಂದ್ರದ ಬಿಜೆಪಿ ಸರ್ಕಾರವು ಸಮಾನತೆಯ ಹೆಸರಿನಲ್ಲಿ ಮಹಿಳೆಯರನ್ನು ಭೂಮಿಯ ಆಳಗಣಿಗಳಲ್ಲಿ ದುಡಿಸಿಕೊಳ್ಳಲು ಪೂರಕವಾಗಿ ಗಣಿ ಕಾಯ್ದೆಗೆ ತಿದ್ದುಪಡಿ ತಂದಿದೆ. ಮತ್ತೊಂದು ಕಡೆ ವೇತನ ಸಂಹಿತೆಯನ್ನು ಜಾರಿಗೆ ತರುವ ಮೂಲಕ ಸಮಾನ ಕೆಲಸಕ್ಕೆ ಸಮಾನ ವೇತನ ಕಾಯ್ದೆಯನ್ನು ಕಿತ್ತೆಸೆಯಲಾಗಿದೆ. ನೇಮಕಾತಿಯಲ್ಲಿ ಸಮಾನತೆಯನ್ನು ಕಾಯ್ದುಕೊಳ್ಳುವ, ಮಹಿಳೆಯರ ಪದೋನ್ನತಿಗೆ ಇದ್ದಂತಹ ವ್ಯವಸ್ಥೆಯನ್ನು ನಿರ್ನಾಮ ಮಾಡಲಾಗಿದೆ. ಕಬ್ಬು ಕುಯ್ಯುವ ಮಹಿಳೆಯರ ಗರ್ಭಕೋಶಗಳನ್ನು ಒತ್ತಾಯಪೂರ್ವಕವಾಗಿ ತೆಗೆದುಹಾಕುತ್ತಾರೆಂಬ ಸುದ್ದಿಗಳಿವೆ. ಮಹಿಳಾ ಗಾರ್ಮೆಂಟ್ ಕೆಲಸಗಾರರಿಗೆ ಅವರಿಗೆ ಅರಿವು ಇಲ್ಲದಂತೆಯೇ ಋತುಚಕ್ರವನ್ನು ಮುಂದೂಡುವ ಮಾತ್ರೆಗಳನ್ನು ನೀಡಲಾಗುತ್ತಿದೆ. ಇದೆಲ್ಲವನ್ನು ಗಮನಿಸಿದಾಗ ಮಾಲಿಕರು ತಮ್ಮ ಲಾಭದಾಹಕ್ಕಾಗಿ ಮಹಿಳೆಯರ ಆರೋಗ್ಯದ ಬಗ್ಗೆ ಕಿಂಚಿತ್ತೂ ಕಾಳಜಿ ತೋರದೆ ಇರುವುದು ಸಾಬೀತಾಗುತ್ತದೆ. ಇದೇ ಬಂಡವಾಳಶಾಹಿ ವ್ಯವಸ್ಥೆ.

ಕೆಲಸದ ಸ್ಥಳಗಳಲ್ಲಿ ಲೈಂಗಿಕ ದೌರ್ಜನ್ಯ ಹೆಚ್ಚುತ್ತಿದೆ. ಕೆಲಸದ ಸ್ಥಳಗಳಲ್ಲಿ ಲೈಂಗಿಕ ದೌರ್ಜನ್ಯವನ್ನು ತಡೆಗಟ್ಟಲು ಇರುವ ಕಾನೂನನ್ನು ಪರಿಣಾಮಕಾರಿಯಾಗಿ ಜಾರಿಮಾಡಲಾಗುತ್ತಿಲ್ಲ. ಸರ್ಕಾರವು ಎಲ್ಲಾ ಕಂಪನಿಗಳಲ್ಲಿ ಕಾಯ್ದೆಯಂತೆ ರಚಿಸಬೇಕಾಗಿರುವ ಸಮಿತಿಗಳನ್ನುರಚಿಸಲಾಗಿದೆಯೇ? ಎಂಬ ಕುರಿತು ಗಂಭೀರ ಮೇಲುಸ್ತುವಾರಿಯ ಕೊರತೆಯೂ ಇದೆ. ಸಣ್ಣ ಮಕ್ಕಳ ಹಾಗೂ ಮಹಿಳೆಯರ ಗ್ಯಾಂಗ್ ರೇಪ್ ಮತ್ತು ಕೊಲೆಯಂತಹ ಅಮಾನುಷ, ಘೋರ ಘಟನೆಗಳು ಹೆಚ್ಚುತ್ತಿವೆ. ನವ ಉದಾರೀಕರಣ ನೀತಿಗಳ ಪರಿಣಾಮ ಮಹಿಳೆಯ ದೇಹವನ್ನು ಅಶ್ಲೀಲಕರವಾದ ರೀತಿಯಲ್ಲಿ ತಮ್ಮ ವಾಣಿಜ್ಯೀಕರದ ಲಾಭಕ್ಕಾಗಿ ಬಿಂಬಿಸಲಾಗುತ್ತಿದೆ. ಇದಕ್ಕೆ ಪೂರಕವಾಗಿರು ಬಿಜೆಪಿ ಸರ್ಕಾರ ಈ ಅನಾಗರೀಕ, ಅಮಾನುಷ, ಘೋರ ಘಟನೆಗಳ ಹೆಚ್ಚಳಕ್ಕೆ ಕಾರಣವಾಗಿದೆ. ಬಿಜೆಪಿಯನ್ನು ಒಳಗೊಂಡಂತೆ ಆರ್.ಎಸ್.ಎಸ್., ಮತ್ತು ಸಂಘಪರಿವಾದದ ಸದಸ್ಯರು ಸಮಾಜವನ್ನು ಹಿಂದಕ್ಕೆ ಕೊಂಡೊಯ್ಯುವ ಮೂಲಕ ಮನುಸ್ಮೃತಿಯ ಕಟ್ಟಲೆಗಳನ್ನು ಮಹಿಳೆಯರ ಮೇಲೆ ಹೇರಲು ಹೊರಟಿದೆ. ಇದು ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಲು ಕಾರಣವಾಗುತ್ತಿದೆ. ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ ಕಾರ್ಮಿಕ ವಿರೋಧಿ, ಸಂವಿಧಾನ ವಿರೋಧಿಯಾಗಿರುವ ಕಾಯ್ದೆಗಳನ್ನು ಪಾರ್ಲಿಮೆಂಟ್‌ನಲ್ಲಿ ತನಗಿರುವ ಬಹುಮತದ ಹೆಸರಲ್ಲಿ ಅಂಗೀಕರಿಸುತ್ತಿದೆಯಾದರೂ ಮಹಿಳಾ ಮೀಸಲಾತಿ ಕಾಯ್ದೆಯನ್ನ ಅಂಗೀಕರಿಸುತ್ತಿಲ್ಲ.

ಮಹಿಳೆ ಮತ್ತು ಮಕ್ಕಳ ಮೇಲಿನ ಹಿಂಸೆ, ದೌರ್ಜನ್ಯಗಳಲ್ಲಿ ತೊಡಗುವವರ ಮತ್ತು ಅದನ್ನು ಉತ್ತೇಜಿಸುವವರ ವಿರುದ್ದ ಕಠಿಣ ಕಾನೂನು ಕ್ರಮಗಳನ್ನು ಕೈಗೊಳ್ಳುವಂತೆ ಸಿಐಟಿಯು ಅಗ್ರಹಿಸುತ್ತದೆ. ಸಮ್ಮೇಳನವು ನವ ಉದಾರವಾದಿ ದಾಳಿಗಳು ಹಾಗೂ ಧರ್ಮದ ಹೆಸರಲ್ಲಿ ಮಹಿಳೆಯರಿಗೆ ನೀಡಿರುವ ಸಂವಿಧಾನದ ಹಕ್ಕುಗಳ ಮೇಲೆ ನಡೆಯುತ್ತಿರುವ ದಮನದ ವಿರುದ್ದ ಬೆಳೆಯುತ್ತಿರುವ ಪ್ರತಿರೋಧವನ್ನು ಪ್ರಶಂಸಿಸುತ್ತದೆ. ಹೆಚ್ಚು ಹೆಚ್ಚು ಮಹಿಳೆಯರು ಇಂದು ತಮ್ಮ ಹಕ್ಕುಗಳನ್ನು ಪ್ರತಿಪಾದಿಸುತ್ತಿದ್ದಾರೆ ಅಲ್ಲದೆ, ಅವುಗಳನ್ನು ಪಡೆಯಲು ಹೋರಾಡುತ್ತಿದ್ದಾರೆ. ದುಡಿಯುವ ವರ್ಗ ಈ ಹೋರಾಟವನ್ನು ಬೆಂಬಲಿಸುವುದು ಮಾತ್ರವಲ್ಲದೆ ಮುತುವರ್ಜಿ ವಹಿಸಿ ಎಲ್ಲಾ ವಿಭಾಗದ ಮಹಿಳೆಯರನ್ನು ಶೋಷಣೆ ಮತ್ತು ದಬ್ಬಾಳಿಕೆಗಳ ವಿರುದ್ಧ ಹೋರಾಟಕ್ಕೆ ಸಜ್ಜುಗೊಳಿಸಬೇಕಾಗಿದೆ. ಇದನ್ನು ಕೆಲಸದ ಸ್ಥಳದಲ್ಲಿ ಮತ್ತು ಸಮಾಜದಲ್ಲಿ ಒಟ್ಟಾರೆಯಾಗಿಯೂ ಮಾಡಬೇಕಾಗಿದೆ. ಸಮಾನತೆಯ ಈ ಹೋರಾಟ ಕೇವಲ ಮಹಿಳೆಯರ ಹೋರಾಟ ಮಾತ್ರವಲ್ಲ. ವರ್ಗಾಧಾರಿತ ಸಂಘಟನೆಯಾದ ಸಿಐಟಿಯುಗೆ ಮುಂಚೂಣಿ ವಹಿಸಬೇಕಾದ ಜವಾಬ್ದಾರಿಯೂ ಇದೆ. ಮಹಿಳೆಯರ ನಿರ್ದಿಷ್ಟ ವಿಚಾರಗಳನ್ನು ಕಾರ್ಮಿಕ ಸಂಘಟನೆಗಳು ಮಹಿಳೆಯರು ಮತ್ತು ಪುರುಷರು ಒಟ್ಟಾರೆಯಾಗಿ ಎತ್ತಬೇಕಾಗಿದೆ. ಮಹಿಳೆಯರ ಮೇಲಿನ ದಬ್ಬಾಳಿಕೆ ವಿರುದ್ಧ ಸಮಾನತೆಗಾಗಿ ನಡೆಯುವ ಚಳವಳಿಯನ್ನು ಮುಂದೆ ಕೊಂಡುಹೋಗಬೇಕಾಗಿದೆ. ಈ ಹಿನ್ನೆಲೆಯಲ್ಲಿ 16ನೇ ಸಿಐಟಿಯುನ ಅಖಿಲ ಭಾರತ ಸಮ್ಮೇಳನವು ಮಾರ್ಚ್ 06, 2020ರಂದು ಮಹಿಳೆಯರ ಜೈಲ್‌ಭರೋ ಚಳವಳಿಗೆ ಅಂತಾರಾಷ್ಟ್ರೀಯ ಮಹಿಳಾ ದಿನಾವಣೆ ಹಿನ್ನೆಲೆಯಲ್ಲಿ ಕರೆ ನೀಡಿದೆ. ಶೋಷಕ ಬಂಡವಾಳಶಾಹಿಯ ವಿರುದ್ಧ ಸಮಾನತೆಗಾಗಿ ಮಹಿಳೆಯರು ನಡೆಸಿದ ಸಮರಧೀರ ಹೋರಾಟದ ಸ್ಮರಣಾರ್ಥವಾಗಿ ನಡೆಯುವ ಈ ಚಳವಳಿಯನ್ನು ಎಲ್ಲಾ ಹಂತದಲ್ಲಿ ಯಶಸ್ವಿಗೊಳಿಸಲು ಸಿಐಟಿಯು ತನ್ನ ಎಲ್ಲಾ ಸಂಘಟನೆಗಳನ್ನು ಅಣಿನೆರೆಸಲು ಸಮ್ಮೇಳನ ಕರೆನೀಡಿದೆ.

ಹಕ್ಕೊತ್ತಾಯಗಳು:

1. ಎಲ್ಲರಿಗೂ ಉದ್ಯೋಗ ನೀಡಬೇಕು, ಮಹಿಳೆಯರ ಸಂಬಳ ಇಲ್ಲದ ದುಡಿಮೆಯನ್ನು ಪರಿಗಣಿಸಬೇಕು.
2. ಕನಿಷ್ಠಕೂಲಿ ಮತ್ತು ಎಲ್ಲಾ ಮಹಿಳಾ ಕಾರ್ಮಿಕರಿಗೆ ಸಮಾನ ಕೆಲಸಕ್ಕೆ ಸಮಾನ ಕೂಲಿ ನೀಡಬೇಕು.
3. ಸ್ಕೀಂ ನೌಕರರನ್ನು ಕಾರ್ಮಿಕರಾಗಿ ಪರಿಗಣಿಸಬೇಕು.
4. ಮಕ್ಕಳ ಮತ್ತು ಮಹಿಳೆಯರ ಮೇಲಿನ ಹಿಂಸೆ, ದೌರ್ಜನ್ಯಗಳನ್ನು ನಿಲ್ಲಿಸಬೇಕು.
5. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು
6. ಎಲ್ಲಾ ಚುನಾಯಿತ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಜಾರಿಗೊಳಿಸಬೇಕು.

ಪರಿಚಯ ಪತ್ರ ವರದಿ:

ಸಮ್ಮೇಳನದಲ್ಲಿ ಒಟ್ಟು 26 ರಾಜ್ಯಗಳಿಂದ 1991 ಸಂಗಾತಿಗಳು ಪರಿಚಯ ಪತ್ರವನ್ನು ನೀಡಿದರು.

ಪುರುಷರು	– 1493
ಮಹಿಳೆಯರು	– 442 (ಶೇ. 23ರಷ್ಟು)
ಸೌಹಾರ್ದ ಪ್ರತಿನಿಧಿಗಳು	– 10 ಜನ

ವಯೋಮಿತಿ – ಅತಿ ಹಿರಿಯ ಕಾಂ. ಶಿವಶಂಕರ್ ಸಿಂಗ್ 90 ವರ್ಷ ಬಿಹಾರ

ಮಹಿಳೆಯರಲ್ಲಿ ಅತಿ ಹಿರಿಯ ಸಂಗಾಥಿ – ರಂಜನಾ ನಿರೋಳ 74 ವರ್ಷ ದೆಹಲಿ

ಅತಿ ಕಿರಿಯ ಸಂಗಾತಿಗಳು – ಬಿ.ಎಂ. ಶಿಲ್ಪಾ ಕರ್ನಾಟಕ, ಹುರ್ಬಾನ್ ಷಪ್ತಿ ಮಧ್ಯಪ್ರದೇಶ 26 ವರ್ಷ

30 ವರ್ಷದ ಒಳಗಿನವರು	16 ಜನ
30 ರಿಂದ 40	176 ಜನ
41 ರಿಂದ 50	535 ಜನ
51 ರಿಂದ 60	643 ಜನ
61 ರಿಂದ 70	453 ಜನ
71 ಕ್ಕಿಂತ ಹೆಚ್ಚು	95 ಜನ

ಶಿಕ್ಷಣ

ಅನೌಪಚಾರಿಕ ಶಿಕ್ಷಣ	7
ಪ್ರಾಥಮಿಕ ಶಿಕ್ಷಣ	208
ಎಸ್.ಎಸ್.ಎಲ್.ಸಿ.	698
ಪದವಿ	592
ಸ್ನಾತಕೋತ್ತರ ಪದವಿ	209
ವೃತ್ತಿಪರ ಶಿಕ್ಷಣ	189
ಡಿಪ್ಲೊಮ/ಐಟಿಐ	22

ವೃತ್ತಿ

ಫ್ಯಾಕ್ಟರಿ/ ಗಣಿ ಕೆಲಸಗಾರರು	155
ಕಚೇರಿ ನೌಕರರು	97
ಸೇವಾ ವಲಯ	171
ಸ್ಕೀಂ ನೌಕರರು	232
ಇತರೆ ಅಸಂಘಟಿತ ಕಾರ್ಮಿಕರು	193
ಪೂರ್ಣಾವಧಿ ಕಾರ್ಯಕರ್ತರು	737
ಇತರೆ	311

ಹಾಲಿ ಕೆಲಸ ಮಾಡುತ್ತಿರುವ ವೃತ್ತಿ

ಸಾರ್ವಜನಿಕ ವಲಯ	350
ಖಾಸಗಿ ಕ್ಷೇತ್ರ	265
ಸಹಕಾರಿ ಕ್ಷೇತ್ರ	74
ಇತರೆ	859

ಕಾರ್ಮಿಕ ಚಳವಳಿಯಿಂದಾಗಿ ಬಲಿಪಶುವಾದವರು

ಕೆಲಸದಿಂದ ಉಚ್ಚಾಟಿತಗೊಂಡವರು	91
ಕೆಲಸದಿಂದ ಅಮಾನತುಗೊಂಡವರು	75
ಇತರೆ ಶಿಕ್ಷೆ	178

ಚುನಾಯಿತ ಸ್ಥಾನಮಾನಗಳು

ಪಂಚಾಯತ್/ ಸ್ಥಳೀಯ ಸಮಿತಿ ಸದಸ್ಯರು	85
ಜಿಲ್ಲಾ ಮಟ್ಟದ ಸಂಸ್ಥೆಗಳಲ್ಲಿ	136
ಅಸೆಂಬ್ಲಿ ಸದಸ್ಯರು	06
ಪಾರ್ಲಿಮೆಂಟ್ ಸದಸ್ಯರು	01



ಗ್ರಾ.ಪಂ. ನೌಕರರ ಧರಣಿ ಸತ್ಯಾಗ್ರಹ ಮುಕ್ತಾಯ

ಕಳೆದ ಎಂಟು ದಿನಗಳಿಂದ ಸಿಂದಗಿ ತಾಲೂಕಾ ಪಂಚಾಯತ ಮುಂದೆ ನಡೆಯುತ್ತಿದ್ದ ಗ್ರಾ.ಪಂ ಧರಣಿ ಸತ್ಯಾಗ್ರಹವು ಇಂದು ಮುಕ್ತಾಯವಾಯಿತು. ತಾಲೂಕಾ ಪಂಚಾಯತ ಇ.ಓ ಆದ ಸುನೀಲ ಮದ್ದಿನವರು ಮಾತನಾಡಿ ಇಗಾಗಲೇ ಸುಮಾರು 23 ಗ್ರಾಮ ಪಂಚಾಯತಿಗಳಲ್ಲಿ ಸಿಬ್ಬಂದಿ ವೇತನ ಬಟವಡೆ ಮಾಡಿದ್ದು ಉಳಿದ 20 ಗ್ರಾಮ ಪಂಚಾಯತಿಗಳಲ್ಲಿ ಒಂದರೆಡು ದಿನಗಳಲ್ಲಿ ಮಾಡಿಸಲಾಗುವುದು ಎಂದರು ಅಲ್ಲದೆ ಕರ ವಸೂಲಿ ಸಪ್ತಾಹ ಹಮ್ಮಿಕೊಳ್ಳಲಾಗಿದೆ. ಈ ಸಂದರ್ಭದಲ್ಲಿ ವಸೂಲಿಯಾದ ಹಣವನ್ನು ಪೂರ್ತಿಯಾಗಿ ಬಾಕಿ ನಿಂತಿರುವ ಸಿಬ್ಬಂದಿಗಳ ವೇತನಕ್ಕೆ ವಿತರಣೆ ಮಾಡುವಂತೆ ಕ್ರಮಕೈಕೊಳ್ಳಲಾಗುವುದು ಎಂದು ಹೇಳಿದರು.

ಪ್ರತಿ ಗುರುವಾರದಂದು ಸಮಸ್ಯೆಗಳಿರುವ ಐದು ಗ್ರಾ.ಪಂ ಅಭಿವೃದ್ದಿ ಅಧಿಕಾರಿಗಳ ಸಭೆಯನ್ನು ಕರೆದು ಚರ್ಚಿಸಿ ➚

‘ನೀವು ಹೆದರಿಸಿದಷ್ಟು ಕವಿತೆ, ನಾಟಕಗಳು ಹುಟ್ಟುತ್ತಲೇ ಇರುತ್ತವೆ’

ಕೊಪ್ಪಳದಲ್ಲಿ ಒಂದು ಕವಿತೆ, ಬೀದರದಲ್ಲಿ ಒಂದು ನಾಟಕ – ಎನ್.ಆರ್.ಸಿ ಯ ವಿರುದ್ಧ ಪ್ರತಿರೋಧದ ಕಲಾ ಅಭಿವ್ಯಕ್ತಿಗಳ ಮೇಲೆ ಪೋಲಿಸು ಕೇಸು ದಾಖಲಿಸಿದ್ದನ್ನು ಖಂಡಿಸಿ ಅದನ್ನು ಹಿಂತೆಗೆಯಬೇಕೆಂದು ‘ಸಮುದಾಯ’ದ ಅಧ್ಯಕ್ಷ ಅಚ್ಯುತ ಮತ್ತು ಪ್ರಧಾನ ಕಾರ್ಯದರ್ಶಿ ದೇವೇಂದ್ರಗೌಡ ಫೆಬ್ರವರಿ 6ರಂದು ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ. ಈ ಕ್ರಮಗಳನ್ನು ವಿರೋಧಿಸಬೇಕು ಹಾಗೂ ಸಾಂಸ್ಕೃತಿಕವಾಗಿ ಪ್ರತಿರೋಧಿಸಬೇಕೆಂದು ಕರೆ ನೀಡಿದ್ದಾರೆ. ಹೇಳಿಕೆಯ ಆಯ್ದ ಭಾಗಗಳು ಇಲ್ಲಿವೆ.

ಆನೆಗೊಂದಿ ಉತ್ಸವದಲ್ಲಿ ‘ನಿನ್ನ ದಾಖಲೆ ಯಾವಾಗ ನೀಡುತ್ತಿ’ ಎಂಬ ಎನ್.ಆರ್.ಸಿ ಯ ವಿರುದ್ಧ ಪ್ರತಿರೋಧದ ಕವನ ಓದಿದ ಕೊಪ್ಪಳದ ಪತ್ರಕರ್ತ ಸಿರಾಜ್ ಬಿಸರಳ್ಳಿ ಅವರ ಮೇಲೆ ಪೋಲಿಸರು ಕೇಸು ದಾಖಲೆ ಮಾಡಿದ್ದಾರೆ ಎಂದು ವರದಿಯಾಗಿದೆ. ಪ್ರಧಾನಿಗೆ ಅವಮಾನಕರವಾದ ಸಾಲುಗಳು ಕವಿತೆಯಲ್ಲಿವೆ ಎಂದು ಪೋಲಿಸರ ಆಪಾದನೆ. ಬೀದರ್ ನಲ್ಲಿ ಸಿಎಎ–ಎನ್.ಪಿ.ಆರ್–ಎನ್.ಆರ್.ಸಿ ಗಳನ್ನು ವಿಮರ್ಶೆ ಮಾಡಿದ ನಾಟಕ ಆಡಿಸಿದ ಶಾಹೀನ್ ಖಾಸಗಿ ಶಾಲೆಯ ಮೇಲೆ ಕರಾಳ ದೇಶದ್ರೋಹದ ಕಲಮಿನಡಿಯಲ್ಲಿ ಕೇಸು ದಾಖಲು ಮಾಡಲಾಗಿದೆ. ನಾಟಕದಲ್ಲಿ ಪ್ರಧಾನಿಯ ವಿರುದ್ಧ ಪ್ರಚೋದಕ ಹೇಳಿಕೆಗಳನ್ನು ಮಾಡಲಾಗಿದೆ ಎಂಬುದು ಪೋಲಿಸರ ಆಪಾದನೆ. ಈ ವರೆಗೆ ಶಾಲೆಯ ಮುಖ್ಯ ಅಧ್ಯಾಪಕಿ ಮತ್ತು ಪ್ರಚೋದಕ ಹೇಳಿಕೆಗೆ ಜವಾಬ್ದಾರಿ ಎನ್ನಲಾದ ವಿದ್ಯಾರ್ಥಿನಿಯ ತಾಯಿಯನ್ನು ಬಂಧಿಸಲಾಗಿದೆ. ಅವರಿಗೆ ಜಾಮೀನು ಕೊಡಲಾಗಿಲ್ಲ ಮತ್ತು ಫೆ.10ರ ವರೆಗೆ ಬಂಧನದ ಅವಧಿಯನ್ನು ವಿಸ್ತರಿಸಲಾಗಿದೆ. ಶಾಹಿನ್ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರ ನಿರೀಕ್ಷಣಾ ಜಾಮೀನಿನ ಪರಿಶೀಲನೆಯನ್ನು ಫೆ.11ರ ವರೆಗೆ ಮುಂದೂಡಲಾಗಿದೆ, ಎಂದು ಫೆ.5ರ ತಡರಾತ್ರಿಯ ವರದಿಯಿಂದ ತಿಳಿದು ಬಂದಿದೆ. ಈ ಕರಾಳ ಕಾನೂನಿನ ನಗ್ನ ದುರ್ಬಳಕೆ ಸಾಲದೆಂಬಂತೆ ಸತತವಾಗಿ 4–5 ದಿನಗಳಿಂದ 9–12 ವರ್ಷಗಳ ಮಕ್ಕಳನ್ನು ಪೋಲಿಸ್ ಅಧಿಕಾರಿಗಳು ಈ ಕುರಿತ ನಿಯಮಗಳನ್ನು ಉಲ್ಲಂಘಿಸಿ ತೀವ್ರ ವಿಚಾರಣೆಗಳಿಗೆ ಒಳಪಡಿಸಿದ್ದಾರೆ ಎಂದೂ ವರದಿಯಾಗಿದೆ.

ಕವಿತೆ, ನಾಟಕ ಮತ್ತಿತರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಬಿಜೆಪಿ ಸರಕಾರದ ಇಂತಹ ದಮನ ಮತ್ತು ಕಾನೂನುಬಾಹಿರ ಕ್ರಮಗಳನ್ನು ಸಮುದಾಯ ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸುತ್ತದೆ. ಇದು ಬಹುಶಃ ದೇಶದಲ್ಲೇ ‘ದೇಶದ್ರೋಹ’ದ ಕರಾಳ ಕಾನೂನಿನ ಅತ್ಯಂತ ಬರ್ಬರ ಮತ್ತು ಕೆಟ್ಟ ದುರ್ಬಳಕೆ. ತಿಲಕ್, ಗಾಂಧಿ ಮುಂತಾದ ಸ್ವಾತಂತ್ರ್ಯ ಚಳುವಳಿಯ ಮಹಾನ್ ದೇಶಪ್ರೇಮಿಗಳ ವಿರುದ್ಧ ವಸಾಹತುಶಾಹಿ ಆಡಳಿತ ಬಳಸಿದ ಕರಾಳ ಕಲಮನ್ನು, ರಾಜಕೀಯ ಭಿನ್ನಮತವನ್ನು ದಮನ ಮಾಡಲು ದುರ್ಬಳಕೆ ಮಾಡುವುದು ಅತ್ಯಂತ ನಾಚಿಕೆಗೇಡು. ವಾಸ್ತವವಾದ ಹಿಂಸೆ ಮತ್ತು ಅಂತಹ ಹಿಂಸೆಗೆ ನಿರ್ದಿಷ್ಟವಾಗಿ ಕರೆ ಕೊಡುವ ಅಥವಾ ಹಿಂಸಾಕೃತ್ಯ ಸಂಘಟಿಸುವ ಪಿತೂರಿಯ ಸಂದರ್ಭಗಳಲ್ಲಿ ಮಾತ್ರ ಈ ಕಾನೂನು ಬಳಸಬಹುದು. ಸರಕಾರವನ್ನು ಮತ್ತು ಅದರ ನಾಯಕರನ್ನು ಹಾಗೂ ನೀತಿಗಳನ್ನು ಟೀಕಿಸುವುದು ಅಥವಾ ಅದನ್ನು ಬದಲಿಸಲು ಒತ್ತಾಯಿಸುವುದು ಹಾಗೂ ಯಾವುದೇ ರೀತಿಯ ಶಾಬ್ದಿಕ ಬೆದರಿಕೆಗಳು ‘ದೇಶದ್ರೋಹ’ ಅಲ್ಲ, ಅಪರಾಧವೂ ಅಲ್ಲ ಎಂದು ಸುಪ್ರೀಂ ಕೋರ್ಟು ಸ್ಪಷ್ಟವಾಗಿ ಹೇಳಿದ ಮೇಲೂ ಇಂತಹ ಪ್ರಕರಣಗಳು ಮರುಕಳಿಸುತ್ತಿರುವುದು ಖಂಡನೀಯ.

ಶಾಹೀನ್ ಶಾಲೆಯ ಮಕ್ಕಳ ವಿಚಾರಣೆಯನ್ನು ತಕ್ಷಣ ನಿಲ್ಲಿಸಬೇಕು. ದೇಶದ್ರೋಹದ ಪ್ರಕರಣವನ್ನು ಹಿಂತೆಗೆದುಕೊಳ್ಳಬೇಕು. ಬಂಧಿತ ಇಬ್ಬರು – ಮುಖ್ಯ ಅಧ್ಯಾಪಕಿ ಮತ್ತು ವಿದ್ಯಾರ್ಥಿನಿಯ ಪಾಲಕಿ – ಮಹಿಳೆಯರನ್ನು ತಕ್ಷಣ ಬಿಡುಗಡೆ ಮಾಡಬೇಕು. ಕವಿ ಸಿರಾಜ್ ಬಿಸರಳ್ಳಿ ಅವರ ಮೇಲಿನ ಪ್ರಕರಣವನ್ನೂ ತಕ್ಷಣ ವಾಪಸು ಪಡೆಯಬೇಕು ಎಂದು ‘ಸಮುದಾಯ’ ಒತ್ತಾಯಿಸುತ್ತದೆ. ಮಾತ್ರವಲ್ಲದೆ ಮಕ್ಕಳ ರಕ್ಷಣೆ ಕುರಿತ ಕಾನೂನುಗಳನ್ನು ಉಲ್ಲಂಘಿಸಿದ ಪೋಲಿಸ್ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸಬೇಕು. ಇಡೀ ಪ್ರಕರಣದ ಕುರಿತು ವಿಚಾರಣೆ ನಡೆಸಬೇಕು. ಅಪರಾಧ ಸಂಹಿತೆಯಿಂದಲೇ ಕಿತ್ತು ಹಾಕಬೇಕಾದ ದೇಶದ್ರೋಹದ ಕರಾಳ ಕಲಮಿನ ದುರ್ಬಳಕೆಯನ್ನು ನಿಲ್ಲಿಸಬೇಕು ಎಂದು ರಾಜ್ಯ ಸರಕಾರವನ್ನು ‘ಸಮುದಾಯ’ ಆಗ್ರಹಿಸುತ್ತದೆ.

ಬದಲಾಗಿ ರಾಷ್ಟ್ರಪಿತನ ಅವಮಾನ ಮಾಡಿದ ಸಂಸದ ಅನಂತ ಕುಮಾರ್ ಹೆಗಡೆ ಮತ್ತು ಬಾಬರಿ ಮಸೀದಿ ಒಡೆಯುವ ಕ್ರಿಮಿನಲ್ ಕೃತ್ಯಗಳ ಮರುಸೃಷ್ಟಿ ಮಾಡಿದ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ವಿರುದ್ಧ ಪ್ರಕರಣ ದಾಖಲಿಸಿ ಬಂಧಿಸಬೇಕೆಂದು ಆಗ್ರಹಿಸುತ್ತದೆ.

ದೇಶದ ಸಂವಿಧಾನದ ಮೂಲ ಆಶಯಗಳಿಗೆ ಕೊಡಲಿಯೇಟು ಕೊಡುವ ಸಿಎಎ–ಎನ್.ಪಿ.ಆರ್–ಎನ್.ಆರ್.ಸಿ ಯ ವಿರುದ್ಧ ಕವಿತೆ, ನಾಟಕ ಬರೆಯುವುದು ‘ದೇಶದ್ರೋಹ’. ಮಹಾತ್ಮ ಗಾಂಧಿ ಮತ್ತು ಸ್ವಾತಂತ್ರ್ಯ ಹೋರಾಟವನ್ನೇ ಹಂಗಿಸುವುದು, ಬಾಬರಿ ಮಸೀದಿ ಒಡೆಯುವುದರ ನಾಟಕ ಆಡುವುದು, ಗಾಂಧಿ ಕೊಲೆಗಡುಕರನ್ನು ‘ದೇಶಭಕ್ತ’ ಎಂದು ಹೊಗಳುವುದು ‘ದೇಶಪ್ರೇಮ’. ಇದು ಬಿಜೆಪಿ ಕೇಂದ್ರ ಮತ್ತು ರಾಜ್ಯ ಸರಕಾರಗಳ ದೇಶಪ್ರೇಮ–ದೇಶದ್ರೋಹ ಗಳ ಕುರಿತ ಹೊಸ ಫಾರ್ಮುಲಾ ಆದಂತಿದೆ.

ಕೇಂದ್ರ–ರಾಜ್ಯ ಸರಕಾರಗಳ ಜನ–ವಿರೋಧಿ ನೀತಿಯನ್ನು ವಿರೋಧಿಸುವುದು ಬದಲಾಯಿಸಲು ಆಗ್ರಹಿಸುವುದು ಅಪರಾಧವಲ್ಲ, ದೇಶದ್ರೋಹ ಖಂಡಿತ ಅಲ್ಲ. ಬದಲಾಗಿ ಮಾಡಲೇಬೇಕಾದ ನಾಗರಿಕ ಕರ್ತವ್ಯ. ಈ ಕುರಿತ ಕವಿತೆ, ನಾಟಕ ಮತ್ತಿತರ ಸಾಂಸ್ಕೃತಿಕ ಅಭಿವ್ಯಕ್ತಿಯನ್ನು ಹತ್ತಿಕ್ಕುವ ಯಾವುದೇ ಕ್ರಮವನ್ನು ಸಮುದಾಯ ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ವಿರೋಧಿಸುತ್ತದೆ. ಇಂತಹ ಸರಕಾರದ ಕ್ರಮಗಳನ್ನು ವಿರೋಧಿಸಲು, ಸಾಂಸ್ಕೃತಿಕವಾಗಿ ಪ್ರತಿರೋಧಿಸಲು ತನ್ನ ಎಲ್ಲ ಘಟಕಗಳಿಗೆ ಕರೆ ನೀಡುತ್ತದೆ.

‘ನೀವು ಕವಿಗಳನ್ನು, ಲೇಖಕರನ್ನು, ಕಲಾವಿದರನ್ನು ಹೆದರಿಸಬಹುದು. ಕವಿತೆ, ನಾಟಕ, ಕಲಾಕೃತಿಗಳನ್ನಲ್ಲ. ನೀವು ಬೆದರಿಸಿದಷ್ಟು ಹೆಚ್ಚು ಹೆಚ್ಚು ಕವಿತೆ, ನಾಟಕ, ಕಲಾಕೃತಿಗಳು ಹುಟ್ಟುತ್ತವೆ’ ಎಂದು ರಾಜ್ಯ ಸರಕಾರ ಮತ್ತು ಬಲಪಂಥೀಯ ಶಕ್ತಿಗಳಿಗೆ ಸಮುದಾಯ ಕರ್ನಾಟಕ ರಾಜ್ಯ ಸಮಿತಿ ಎಚ್ಚರಿಸಬಯಸುತ್ತದೆ.

➘ ಸಿಬ್ಬಂದಿಗಳ ಸಮಸ್ಯೆಗಳನ್ನು ಇತ್ಯರ್ಥಪಡಿಸುವುದಾಗಿ ಆಶ್ವಾಸನೆ ನೀಡಿದರು. ನಂತರ ಮಾತನಾಡಿದ ತಾಲೂಕಾ ಗೌರವಾಧ್ಯಕ್ಷರಾದ ಅಣ್ಣಾರಾಯ ಇಳಗೇರ ಅವರು ಒಂದು ತಿಂಗಳಲ್ಲಿ ಸಿಬ್ಬಂದಿಗಳ ಸಮಸ್ಯೆ ಬಗೆಹರಿಸದಿದ್ದರೆ ಪುನಃ ಹೋರಾಟ ಮಾಡುವುದಾಗಿ ಹೇಳಿದರು. ನಂತರ ಸತ್ಯಾಗ್ರಹವನ್ನು ಹಿಂದಕ್ಕೆ ಪಡೆಯಲಾಯಿತು. ಈ ಸಂದರ್ಭದಲ್ಲಿ ಗ್ರಾ.ಪಂ ತಾಲೂಕಾ ಅಧ್ಯಕ್ಷ ಎಮ್.ಕೆ.ಚಳ್ಳಗಿ ಕಾರ್ಯದರ್ಶಿ ಎಮ್.ಎಸ್. ಕೊಂಡಗುಳಿ ಖಜಾಂಚಿ ಎಮ್.ಎಮ್.ಹುಣಶ್ಯಾಳ ಎಮ್.ಜಿ.ಪರಗೊಂಡ ದಸ್ತಗೀರಸಾಬ ಕಣಮೇಶ್ವರ ರೈತ ಸಂಘದ ಮುಖಂಡ ಬಶೀರಅಹ್ಮದ ತಾಂಬೆ ಸಾಹೇಬ ಪಟೇಲ ಕುರಿಕಾಯಿ ತಾಲೂಕಾ ಪಂಚಾಯತಿಯ ಅಧ್ಯಕ್ಷ, ತಾ.ಪಂ ಸದಸ್ಯ ಲಕ್ಕಪ್ಪ ಬಡಿಗೇರ, ಮತ್ತು ತಾಲೂಕಿನ ಎಲ್ಲಾ ಗ್ರಾ.ಪಂ ಸಿಬ್ಬಂದಿಗಳು ಉಪಸ್ಥಿತರಿದ್ದರು.

–ಎಮ್.ಎಸ್. ಕೊಂಡಗುಳಿ



ಕೃಪೆ: ಸತೀಶ್ ಆಚಾರ್ಯ

ನೀವು ಹೆದರಿಸಿದಷ್ಟು ಅವು ಹುಟ್ಟುತ್ತಲೇ ಇರುತ್ತವೆ

ಕೈ ಹಿಡಿದು ನಡೆಯುವ ಕವಿತೆಯ
ಸಹವಾಸವೇಕೆ ನಿಮಗೆ
ಅದರ ಮೈ ತುಂಬಾ ಬಾಂಬುಗಳನ್ನು ಕಟ್ಟಿಲ್ಲ
ಅದು ಸುಡುವ ಕೆಂಡವೂ ಅಲ್ಲ
ಅದರ ಮಟ್ಟಿಗೆ ಅದು ನಡೆಯುತ್ತದೆ
ಕೇಳಿಸಿಕೊಂಡವನ
ಓದಿಕೊಂಡವನ ಮನವ ಕಲಕಿ
ಬೀಗುವ ಜಾಣ್ಮೆ ಅದರದು
ನಿಮಗೆ ಇರಸು ಮುರಸಾದರೆ
ಕವಿಗಳಿಗೆ ಹತ್ತಿ ತುರುಕಿಕೊಳ್ಳಿ
ಅದು ಬಿಟ್ಟು ಕವಿಯ ಹಕ್ಕನ್ನು ಕಸಿಯಬೇಡಿ

ಯಾವ ಕವಿತೆಯೂ ದೇಶದ್ರೋಹ ಕೆಲಸವಂತು ಮಾಡುವುದಿಲ್ಲ
ಅದೇನಿದ್ದರು ಬೆಳಕಿನ ಕನ್ನಡಿ
ನಿಟ್ಟುಸಿರ ಸಾಂತ್ವನ
ತಾನಿರುವಿಕೆಯ ಸದ್ದಿನ ಗದ್ದಲ

ಕವಿತೆಯ ಹುಟ್ಟಿಗೂ ಕಲ್ಲಾಕಿ
ಕರ್ಮಕ್ಕೆ ಯಾಕೆ ಬೀಳುತ್ತಿರಿ?
ನೆಲ ನಡೆಯುವ ಶಬ್ದವ ಹಿಡಿದು ಮಾತಾಡಿಸುವ ಅದರ
ಕಣ್ಣುಗಳಿಗೆ
ಸಮಾನತೆಯ ದೀಪ ಹಚ್ಚುವ ಆಸೆ
ಮೌನದ ಅಂಗಡಿಯಲಿ ಸರಕು ಖರೀದಿಸಿ
ಭಾವದ ಹಸಿವನು ಬಡಿಸುವ ಕವಿತೆಯ ಕರ್ತನನು
ನೀವೆ ಮುಟ್ಟಿ ಕೆಂಡವೆಂದು ದೂರು ದಾಖಲಿಸಿದರೆ
ಕವಿತೆ ಎಂದಿಗೂ ಸಾಯುವುದಿಲ್ಲ
ಕವಿಗೆ ಕಡಿವಾಣ ಹಾಕಿದರು
ಕವಿತೆ ತನ್ನಪಾಡಿಗದು ಬೆಳಕಿನ ಪಂಜನು ಹಿಡಿದು
ನಡೆಯುತ್ತಿರುತ್ತದೆ
ಜಾತಿ ಧರ್ಮವನೂ ಮೀರಿ
ಸೃಜನಶೀಲ ಮನಸಿನಂಗಳದ ಮೇಲೆ
ಬಣ್ಣವಿಲ್ಲದ ಭಾವಗಳನ್ನು ಉಸುರುತ್ತಾ
ನೀವೆ ಕಟ್ಟಿಕೊಂಡ ಮೌಢ್ಯದ ಗೋಡೆದಾಟಿ

ಇರುವೆ ಕಾಲಿನಲ್ಲಿರುವ ಭಾವನು
ಒಮ್ಮೆ ಮುಟ್ಟಿ ನೋಡಿ
ಬದಲಾಗಬಹುದು ನಿಮ್ಮ ಸಣ್ಣ ಮನಸು

ಕವಿತೆಯನ್ನು ಜನ್ಮಕೊಟ್ಟವನಂತೆ ಮೈದಡವಿ
ಅದಕ್ಕೆ ಕೊಡ ಕೊಳ ಲೆಕ್ಕವೇ ಅಲ್ಲ
ನೀವು ದೂರನ್ನು ದಾಖಲಿಸುತ್ತಲೇ ಇರಿ
ತಾನಿರುವ ಇರುವಿಕೆಯ ಸದ್ದು ಮಾಡುತ್ತಲೇ ಇರುತ್ತದೆ
ನೀವು ಕವಿಗಳನ್ನು ಹೆದರಿಸಬಹುದು
ಕವಿತೆಗಳನ್ನಲ್ಲ.!


ಕವಿತೆಗಳು ಗಾಯವಾದ ಸಮಾಜಕ್ಕೆ ಮುಲಾಮೇ ಹೊರತು
ಅವೆಂದೂ ಮನೆ ಧರ್ಮಗಳ ಐಕ್ಯತೆಯನ್ನು ಮುರಿಯುವುದಿಲ್ಲ
ಬಿಟ್ಟು ಬಿಡಿ ಬರೆಯುತ್ತಿರಲಿ
ಮನಸಿನಂಗಳವ ಗುಡಿಸಿ ಶುದ್ಧಿ ಮಾಡಲು
ದೊಣ್ಣೆನಾಯ್ಕರ ಅಪ್ಪಣೆ ಯಾಕೆ ?
ಕವಿ ನಡೆಯುವ ಹಾದಿಯ ಮೇಲೆ
ಮುಳ್ಳುಗಳು ಎಂದಿಗೂ ಕಾಣಿಸವು.

ನೀವು ಹೆದರಿಸಿದಷ್ಟೂ
ಕವಿತೆಗಳು ಹುಟ್ಟುತ್ತಲೇ ಇರುತ್ತವೆ
ಮತ್ತೆ ಮತ್ತೆ..
ಫಿನಿಕ್ಸ್ ಹಕ್ಕಿಯ ಹಾಗೆ.!

– ಬಿದಲೋಟಿ ರಂಗನಾಥ್

ಆರ್ಥಿಕ ಯಾತನೆಗಳನ್ನು ಆಳಗೊಳಿಸುವ ಕೇಂದ್ರ ಬಜೆಟ್

ಹಣಕಾಸು ಮಂತ್ರಿಗಳ ಬಜೆಟ್ ಭಾಷಣ ದೇಶವನ್ನು ಈಗ ಆವರಿಸಿರುವ ಬಿಕ್ಕಟ್ಟನ್ನು ಹೇಗೆ ಎದುರಿಸುವುದು ಎಂಬ ಬಗ್ಗೆ ಯಾವ ಹೊಳಹೂ ಈ ಸರಕಾರದ ಬಳಿ ಇಲ್ಲ ಎಂಬುದನ್ನು ಪ್ರಕಟಪಡಿಸಿದೆ ಎಂದು ಕೇಂದ್ರ ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ಫೆಬ್ರುವರಿ 1ರಂದು ಮಂಡಿಸಿರುವ ಬಜೆಟ್ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಸಮಸ್ಯೆಗಳನ್ನು ನೇರವಾಗಿ ಎದುರಿಸುವ ಒಂದು ಸುಸಂಗತ ಧೋರಣೆಯ ಬದಲು, ಸಂಕಟಗ್ರಸ್ತ ಅರ್ಥವ್ಯವಸ್ಥೆಯ ವಾಸ್ತವತೆಗಳನ್ನು ಮರೆಮಾಚುವ ಎರಡೂವರೆ ಗಂಟೆಗಳ ಏಕಪಾತ್ರಾಭಿನಯವಷ್ಟೇ ಕಂಡು ಬಂತು ಎಂದು ಅದು ಈ ಬಾರಿಯ ಬಜೆಟ್ ಭಾಷಣವನ್ನು ವರ್ಣಿಸಿದೆ.



(ಇವರೇ ಗೋಲೀ ಮಾರೋ ಸಾಲೋಂಕೊ ಖ್ಯಾತಿಯ ಮಂತ್ರಿ)

ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಜನಗಳ ಕಲ್ಯಾಣಕ್ಕೆ ಮಾಡುವ ವೆಚ್ಚಗಳಲ್ಲಿ ಮತ್ತಷ್ಟು ಕಡಿತ ಮತ್ತು ಕಾರ್ಪೊರೇಟ್‌ಗಳಿಗೆ ಮತ್ತು ಶ್ರೀಮಂತರಿಗೆ ಮತ್ತಷ್ಟು ರಿಯಾಯ್ತಿಗಳು ಹಾಗೂ ಇದಕ್ಕಾಗಿ ದೇಶದ ಆಸ್ತಿಗಳ ಮಾರಾಟದ ಚಾಳಿಯೂ ಮುಂದುವರೆದಿದೆ. ಸರಕಾರ ಎಷ್ಟೊಂದು ಹತಾಶಗೊಂಡಿದೆಯೆಂದರೆ ಅದು ತನ್ನ ಸ್ಕೀಮುಗಳಿಗೆ ಎಲ್ಲರಿಗಿಂತ ಹೆಚ್ಚು ಹಣ ಒದಗಿಸುತ್ತಿರುವ, ಒಂದು ಪ್ರತೀಕವೇ ಆಗಿಬಿಟ್ಟಿರುವ ಎಲ್‌ಐಸಿ ಯಲ್ಲಿನ ತನ್ನ ಶೇರುಗಳನ್ನೂ ಮಾರಾಟ ಮಾಡಲು ನಿರ್ಧರಿಸಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖೇದ ವ್ಯಕ್ತಪಡಿಸಿದೆ.

2020–21 ರಲ್ಲಿ ಜಿಡಿಪಿಯಲ್ಲಿ ಪ್ರಸಕ್ತ ಬೆಲೆಗಳಲ್ಲಿ 10% ಹೆಚ್ಚಳವಾಗುತ್ತದೆ ಎಂದು ಅಂದಾಜು ಮಾಡಿಯೂ ವೆಚ್ಚಗಳಲ್ಲಿ ಖರ್ಚುಗಳ ಬಾಬ್ತುಗಳಲ್ಲಿ ಕಳೆದ ವರ್ಷದ ಬಜೆಟಿಗಿಂತ 9.2% ಹೆಚ್ಚಳವನ್ನಷ್ಟೇ ಮಾಡಲಾಗಿದೆ. ಹಿಂದಿನ ವರ್ಷಗಳ ಅನುಭವಗಳಿಂದ ಹೇಳುವುದಾದರೆ, ವಿತ್ತೀಯ ಕೊರತೆಯ ಪ್ರಮಾಣವನ್ನು ಕಾಯ್ದುಕೊಳ್ಳಲೆಂದು ಇಷ್ಟನ್ನೂ ಕೂಡ ಖರ್ಚು ಮಾಡುವ ಸಂಭವವಿಲ್ಲ. ಆದ್ದರಿಂದ ಈ ಕೇಂದ್ರ ಬಜೆಟ್ ಆರ್ಥಿಕ ಮಂದಗತಿಯನ್ನು ಎದುರಿಸುವ ಬದಲು ಬೇಡಿಕೆಯ ಕೊರತೆಯ ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸುತ್ತದೆ, ಮತ್ತು ವ್ಯಾಪಕಗೊಂಡಿರುವ ಆರ್ಥಿಕ ಯಾತನೆಗಳನ್ನು ಇನ್ನಷ್ಟು ಆಳಗೊಳಿಸುತ್ತದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ನಮ್ಮ ದೇಶದ ಆಸ್ತಿಗಳನ್ನು ದೊಡ್ಡ ಪ್ರಮಾಣದಲ್ಲಿ ಮಾರಾಟ ಮಾಡುವುದರ ವಿರುದ್ಧ, ಎಲ್‌ಐಸಿ ಮತ್ತು ವಿಮಾವಲಯದಲ್ಲಿ ಶೇರು ಮಾರಾಟದ ವಿರುದ್ಧ, ನಮ್ಮ ಬಹುಪಾಲು ಜನಗಳ ಮೇಲೆ ಮತ್ತಷ್ಟು ಕಷ್ಟಕೋಟಲೆಗಳನ್ನು, ಸಂಕಟಗಳನ್ನು ಹೇರುತ್ತಿರುವುದರ ವಿರುದ್ಧ ಪ್ರತಿಭಟನೆಗಳನ್ನು ತೀವ್ರಗೊಳಿಸಬೇಕು ಎಂದು ಜನತೆಗೆ ಕರೆ ನೀಡಿದೆ.

ಮಾಹಿತಿಗಳನ್ನು ತಿರುಚುವ ವಂಚಕ ಪ್ರಯತ್ನಗಳೇನೇ ಮಾಡಿದರೂ, ಆರ್ಥಿಕ ಬಿಕ್ಕಟ್ಟು ಬಜೆಟಿನ ಅಂಕೆ–ಸಂಖ್ಯೆಗಳಲ್ಲಿ ಪ್ರಕಟಗೊಂಡಿದೆ. ಇದು, ಮೋದಿ ಸರಕಾರಕ್ಕೆ ಕಾರ್ಪೊರೇಟ್ ವಲಯಕ್ಕೆ ಮತ್ತು ಶ್ರೀಮಂತರಿಗೆ ಪರಿಹಾರ ಕೊಡುವುದರಲ್ಲಿಯೇ ಆಸಕ್ತಿಯೇ ಹೊರತು, ಆರ್ಥಿಕ ಮಂದಗತಿಗೆ ಮೂಲ ಕಾರಣವಾದ, ದುಡಿಯುವ ಜನಗಳು–ಕಾರ್ಮಿಕರು, ರೈತರು ಮತ್ತು ಸ್ವ ಉದ್ಯೋಗಕ್ಕೆ ತಳ್ಳಲ್ಪಟ್ಟವರ ಹೆಚ್ಚೆಚ್ಚು ಗಂಭೀರಗೊಳ್ಳುತ್ತಿರುವ ಉದ್ಯೋಗ ಮತ್ತು ಜೀವನಾಧಾರದದ ಪರಿಸ್ಥಿತಿಗಳನ್ನು ಎದುರಿಸುವ ಬಗ್ಗೆ ಏನೇನೂ ಆಸಕ್ತಿಯಿಲ್ಲ ಎಂಬುದನ್ನು ಇವೆಲ್ಲ ಪ್ರಕಟಗೊಳಿಸುತ್ತಿವೆ. ಆದಾಯಗಳ ಬಿಕ್ಕಟ್ಟನ್ನು ಎದುರಿಸಬೇಕಾದರೆ ಬೇಢಿಕೆ ಮತ್ತು ಸಂಪನ್ಮೂಲಗಳ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು. ಅದಕ್ಕಾಗಿ ವೆಚ್ಚಗಳನ್ನು ಹೆಚ್ಚಿಸುವ ಒಂದು ಕಾರ್ಯಕ್ರಮವನ್ನು ಮುಂದಿಡುವ ಬದಲು, ಈ ಬಜೆಟ್ ಕಸರತ್ತುಗಳು ವಿತ್ತೀಯ ಕೊರತೆಯನ್ನು ಕಡಿಮೆ ಮಾಡುವುದಕ್ಕೇ ಈ ಸರಕಾರ ಬದ್ಧವಾಗಿದೆ ಎಮಬುದನ್ನು ತೋರಿಸುತ್ತಿವೆ, ಅದಕ್ಕಾಗಿ ಇವರ ಬಳಿ ಇರುವುದು ಸರ್ಕಾರದ ಖರ್ಚುಗಳನ್ನು ಕಡಿತ ಮಾಡುವ ಮತ್ತು ದೇಶದ ಆಸ್ತಿಗಳನ್ನು ದೊಡ್ಡ ಕಾರ್ಪೊರೇಟ್‌ಗಳಿಗೆ ಮಾರುವ ಯೋಚನೆಯಷ್ಟೇ. ಇವೆಲ್ಲವುಗಳ ಹೊರೆಯನ್ನು ಅನುಭವಿಸಬೇಕಾದವರು ದೇಶದ ದುಡಿಯುವ ಜನಗಳು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೋ ಈ ಎರಡನೇ ಮೋದಿ ಸರಕಾರದ ಎರಡನೇ ಬಜೆಟನ್ನು ವಿಶ್ಲೇಷಿಸುತ್ತ ಅಭಿಪ್ರಾಯ ಪಟ್ಟಿದೆ.

ವಾಸ್ತವತೆಗಳನ್ನು ಮರೆಮಾಚಲು ಅಂಕಿ–ಅಂಶಗಳಲ್ಲಿ ಕೈಚಳಕ

ಈ ಬಜೆಟಿನಲ್ಲಿನ ಮೊದಲ ಕೈಚಳಕ ರೆವಿನ್ಯೂ ಅಂಕೆ–ಸಂಖ್ಯೆಗಳ ಪರಿಷ್ಕೃತ ಅಂದಾಜುಗಳಲ್ಲಿ ಕಾಣುತ್ತದೆ ಎಂದು ಪೊಲಿಟ್‌ಬ್ಯುರೊ ವಿಶ್ಲೇಷಿಸಿದೆ. ಪರಿಷ್ಕೃತ ಅಂದಾಜುಗಳು 2018–19ರಲ್ಲಿ ರೆವಿನ್ಯೂ ಸಂಗ್ರಹ ಬಜೆಟಿನಲ್ಲಿ ಅಂದಾಜು ಮಾಡಿದ್ದಕಿಂತ ಬಹಳ ಕಡಿಮೆ ಇದೆ ಎಂದು ತೋರಿಸುತ್ತವೆ. ಆದರೆ ಅವು ಇದರಲ್ಲಿನ ಕೊರತೆಯ ಪ್ರಮಾಣವನ್ನು ನಿಜವಾಗಿ ಇರುವುದಕ್ಕಿಂತ ಕಡಿಮೆ ಮಾಡಿ ತೋರಿಸುತ್ತಿವೆ. ಕೇಂದ್ರೀಯ ತೆರಿಗೆ ಆದಾಯಗಳ ಪರಿಷ್ಕೃತ ಅಂದಾಜುಗಳು ಸಿಜಿಎ ವರದಿ ಮಾಡಿರುವ ಎಪ್ರಿಲ್–ಡಿಸೆಂಬರ್ 2019ರ ಅವಧಿಯ ನಿಜವಾದ ತೆರಿಗೆ ಸಂಗ್ರಹದೊಂದಿಗೆ ತಾಳೆಯಾಗುವುದಿಲ್ಲ. ಒಂದು ವಾಸ್ತವವಾದ ಪರಿಷ್ಕೃತ ಅಂದಾಜು ಕೇಂದ್ರೀಯ ತೆರಿಗೆಗಳ ಸಂಗ್ರಹದಲ್ಲಿ ಸುಮಾರು 1.5ಲಕ್ಷ ಕೊಟಿ ರೂ.ಗಳ ಕೊರತೆ ಆಗಿರುವುದನ್ನು ತೋರಿಸುತ್ತಿತ್ತು. ನಿಜವಾದ ರೆವಿನ್ಯೂ ಪರಿಸ್ಥಿತಿಯನ್ನು ಮುಚ್ಚಿಡುವ ಈ ಕೃತ್ಯದೊಂದಿಗೆ, ಕೊನೆಗೂ ರೆವಿನ್ಯೂ ಸಂಗ್ರಹ ಕಡಿಮೆಯಾದಾಗ ವಿತ್ತೀಯ ಕೊರತೆಯನ್ನು ಎದುರಿಸಲು ಅಂತಿಮವಾಗಿ ವೆಚ್ಚಗಳಲ್ಲಿ ಎಷ್ಟರ ಮಟ್ಟಿಗೆ ಕಡಿತವಾಗಬಹುದು ಎಂಬುದನ್ನು ಪರಿಷ್ಕೃತ ಅಂದಾಜುಗಳಲ್ಲಿ ಪ್ರಕಟ ಪಡಿಸದಿರುವ ಕೃತ್ಯವೂ ಸೇರಿಕೊಂಡಿದೆ. ಇದನ್ನು ಕಳೆದ ವರ್ಷವೂ ಮಾಡಲಾಗಿತ್ತು. ಈ ವರ್ಷ ಅದರ ಪುನರಾವರ್ತನೆಯಾಗಿದೆ. ಈ ಬಜೆಟ್ ಕೂಡ 2020–21ರ ಅಂಕಿ–ಅಂಶಗಳನ್ನು ಅಂದಾಜು ಮಾಡುವಾಗ ಅದೇ ಪಕ್ಷಪಾತವನ್ನು ಬಿಂಬಿಸುತ್ತಿದೆ– ಅಂದರೆ ರೆವಿನ್ಯೂ ಆದಾಯಗಳನ್ನು ಹಿಗ್ಗಿಸಿ ತೋರಿಸುವುದು, ಅದೇ ವೇಳೆಗೆ ವೆಚ್ಚದ ಬಾಬ್ತುಗಳನ್ನೂ ಹೆಚ್ಚಿಸಲಾಗಿದೆ ಎಂದು ತೋರಿಸುವುದು, ಆದರೆ ಅಷ್ಟು ಖರ್ಚು ಮಾಡದಿರುವುದು.

ಬಹಳಷ್ಟು ಕೈಚಳಕಗಳ ನಂತರವೂ 2018–19ರ ರೆವಿನ್ಯೂ ಅಂಕಿಯ ಪರಿಷ್ಕೃತ ಅಂದಾಜು ಬಜೆಟ್ ಅಂದಾಜಿಕ್ಕಿಂತ 2.98 ಲಕ್ಷ ಕೋಟಿ ರೂ.ಗಳಷ್ಟು ಕಡಿಮೆಯಿದೆ. ಇದರಲ್ಲಿ 1.53ಲಕ್ಷ ಕೊಟಿ ರೂ.ಗಳಷ್ಟು ಹೊಡೆತವನ್ನು ರಾಜ್ಯಗಳು ಅನುಭವಿಸಬೇಕಾಗಿದೆ, ಕೇಂದ್ರೀಯ ತೆರಿಗೆಗಳಲ್ಲಿ ಅವುಗಳ ಪಾಲಿನಲ್ಲಿ ಇಷ್ಟು ಮೊತ್ತದ ಕಡಿತವಾಗುತ್ತದೆ. ಜಿಎಸ್‌ಟಿ ರೆವನ್ಯೂ ಕೊರತೆಗೆ ಸಂಬಂಧಪಟ್ಟಂತೆ ರಾಜ್ಯಗಳಿಗೆ ವರ್ಗಾಯಿಸುವ ಮೊತ್ತ ಪರಿಹಾರ ಸೆಸ್ ಸಂಗ್ರಹಗಳಿಗೆ ಸೀಮಿತವಾಗಿರುತ್ತದೆ ಎಂದೂ ರಾಜ್ಯಗಳನ್ನು ಬೆದರಿಸಲಾಗಿದೆ. ಕೇಂದ್ರೀಯ ಸರಕಾರದ ವೆಚ್ಚಗಳ ಪರಿಷ್ಕೃತ ಅಂದಾಜು ಕೂಡ ಹಲವು ಬಾಬ್ತುಗಳಲ್ಲಿ ಬಜೆಟ್ ಅಂದಾಜುಗಳಿಗಿಂತ ಬೃಹತ್ ಪ್ರಮಾಣದ ಕಡಿತಗಳಾಗಿರುವುದನ್ನು ತೋರಿಸುತ್ತವೆ. ಇಷ್ಟೆಲ್ಲ ಮಾಡಿದರೂ ವಿತ್ತೀಯ ಕೊರತೆ ಬಜೆಟ್‌ನಲ್ಲಿ ಮಾಡಿದ್ದ ಅಂದಾಜಿಗಿಂತ ಹೆಚ್ಚಾಗಿದೆ.

ಸಾರ್ವಜನಿಕ ವೆಚ್ಚಗಳಲ್ಲಿ ಕಡಿತ

ವಿತ್ತೀಯ ಕೊರತೆ ಈ ರೀತಿ ಹೆಚ್ಚಿರುವುದು ಅರ್ಥವ್ಯವಸ್ಥೆಯಲ್ಲಿ ಬೇಡಿಕೆಯ ಮಟ್ಟವನ್ನು ಹೆಚ್ಚಿಸಲಿಕ್ಕಾಗಿ ವೆಚ್ಚಗಳನ್ನು ಹೆಚ್ಚಿಸಿದ್ದರಿಂದಾಗಿ ಅಲ್ಲ ಎಂಬುದು ಇಲ್ಲಿರುವ ದುರಂತ. ಇದರ ಬದಲು ಬೇಡಿಕೆಗಳನ್ನು ವಿಸ್ತರಿಸಬಹುದಾದ ಬಾಬ್ತುಗಳಲ್ಲಿ ವೆಚ್ಚಗಳಲ್ಲಿ ಕಡಿತ ಉಂಟು ಮಾಡಲಾಗಿದೆ; 2019–20ರಲ್ಲಿ ಕೇಂದ್ರೀಯ ವಲಯದ ಸ್ಕೀಮುಗಳಲ್ಲಿ ವೆಚ್ಚಗಳನ್ನು ಬಜೆಟಿನಲ್ಲಿ ತೋರಿಸಿದಕ್ಕೆ ಹೋಲಿಸಿದರೆ 11% ದಷ್ಟು ಕಡಿತ ಮಾಡಲಾಗಿದೆ ಮತ್ತು ಕೇಂದ್ರೀಯ ಪ್ರಾಯೋಜಿತ ಸ್ಕೀಮುಂಗಳಲ್ಲಿ 4.5% ದಷ್ಟು ಕಡಿತ ಮಾಡಲಾಗಿದೆ. ಇದರಲ್ಲಿ ಆಹಾರ ಸಬ್ಸಿಡಿ, ಕೃಷಿ ಮತ್ತು ಇತರ ಸಂಬಂಧಪಟ್ಟ ಚಟುವಟಿಕೆಗಳು, ಈಶಾನ್ಯ ಭಾರತದ ಅಭಿವೃದ್ಧಿ, ಸಾಮಾಜಿಕ ಕಲ್ಯಾಣ, ವಿದ್ಯುತ್ ಇತ್ಯಾದಿಗಳ ಮೇಲಿನ ವೆಚ್ಚಗಳೂ ಸೇರಿವೆ.

2020–21 ರಲ್ಲಿ ಮಾಡುವ ವೆಚ್ಚಗಳ ಕಡಿತಗಳಲ್ಲಿ ಮನರೇಗಕ್ಕೆ ಮಾಡುವ ವೆಚ್ಚವನ್ನು ಕಳೆದ ವರ್ಷದ 71,000 ಕೋಟಿ ರೂ.ಗಳಿಂದ, ಈಗ 61,500 ಕೋಟಿ ರೂ.ಗಳಿಗೆ ಕಡಿತ ಮಾಡುವ ಪ್ರಸ್ತಾವ ಮಾಡಲಾಗಿದೆ, ರಸಗೊಬ್ಬರ ಸಬ್ಸಿಡಿ ಕೂಡ ಈ ಕಡಿತದ ಪಟ್ಟಿ ಸೇರಲಿದೆ. ಈ ಸರಕಾರದ ಬಾವುಟ ಮೆರೆಸುವ ಯೋಜನೆಗಳಾದ ಪಿಎಂಜೆಎವೈ–ಆಯುಷ್ಮಾನ್ ಭಾರತ, ಸ್ವಚ್ಛ ಭಾರತ ಮತ್ತು ಪಿಎಂ–ಕಿಸಾನ್ ಕೂಡ ದೊಡ್ಡ ಕಡಿತಗಳನ್ನು ಅನುಭವಿಸಿವೆ. ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳ ಕಲ್ಯಾಣಕ್ಕೆ ಮಾಡುವ ವೆಚ್ಚಗಳು ಈಗಾಗಲೇ ಕಾನೂನು ವಿಧಿಸಿರುವುದಕ್ಕಿಂತ ಬಹಳ ಕೆಳಗಿನ ಮಟ್ಟದಲ್ಲಿ ಇವೆ. 2019–20ರಲ್ಲಿ ಅದರಲ್ಲೂ ಕಡಿತ ಮಾಡಲಾಗಿತ್ತು. 2020–21ರ ಲಿಂಗ ಬಜೆಟಿನಲ್ಲೂ ಸ್ಥಗಿತತೆ ಮುಂದುವರೆದಿದೆ.

ಶ್ರೀಮಂತರಿಗೆ ಮತ್ತಷ್ಟು ರಿಯಾಯ್ತಿಗಳಿಗೆ ಮತ್ತಷ್ಟು ಶೇರು ಹಿಂಪಡಿಕೆ

ತೆರಿಗೆ ಪ್ರಸ್ತಾವಗಳಲ್ಲಿ, ಹಣಕಾಸು ಮಂತ್ರಿಗಳು ಕಾರ್ಪೊರೇಟ್‌ಗಳಿಗೆ ಮತ್ತು ಶ್ರೀಮಂತರಿಗೆ ಮತ್ತಷ್ಟು ತೆರಿಗೆ ರಿಯಾಯ್ತಿಗಳನ್ನು ಪ್ರಕಟಿಸಿದ್ದಾರೆ (ಅತ್ಯಂತ ಶ್ರೀಮಂತ 1% ಮಂದಿಯ ಬಳಿ, ಅತ್ಯಂತ ಕೆಳಗಿರುವ 70% ಜನಗಳು, ಅಂದರೆ ಸುಮಾರು 100 ಕೋಟಿ ಜನಗಳ ಬಳಿಯಿರುವ ಸಂಪತ್ತಿನ ನಾಲ್ಕು ಪಟ್ಟು ಸಂಪತ್ತು ಹೊಂದಿರುವ ನಂತರವೂ ಈ ರಿಯಾಯ್ತಿಗಳು ಬರುತ್ತಿವೆ). ಕಾರ್ಪೊರೇಟ್ ತೆರಿಗೆಗಳಲ್ಲಿ ಈ ಮೊದಲು ಕೊಟ್ಟಿರುವ ರಿಯಾಯ್ತಿಗಳಿಂದ ಈಗಾಗಲೇ 2019–20ರ ಬಜೆಟ್ ಅಂದಾಜುಗಳಿಗಿಂತ ಪರಿಷ್ಕೃತ ಅಂದಾಜುಗಳಲ್ಲಿ 1.55 ಲಕ್ಷ ಕೋಟಿ ರೂ. ಕೊರತೆ ಕಂಡಿದೆ. ಆದರೂ 2019–20ರ ಈ ಹಿಗ್ಗಿಸಿದ ತೋರಿಸಿದ ತೆರಿಗೆ ಆದಾಯಕ್ಕಿಂತಲೂ 12 % ಹೆಚ್ಚು ತೆರಿಗೆ ಆದಾಯ 2020–21ರಲ್ಲಿ ಬರುತ್ತದೆ ಎಂದು ತೋರಿಸಲಾಗಿದೆ. ಇದರ ಅರ್ಥ, ಖಾಸಗೀಕರಣ ಮತ್ತು ಸಾರ್ವಜನಿಕ ವಲಯದ ಉದ್ದಿಮೆಗಳ ಶೇರು ಮಾರಾಟದಿಂದ ಇದನ್ನು ಎತ್ತಲಾಗುತ್ತದೆ ಎಂಬುದು ಸ್ಪಷ್ಟ. ಈ ಬಾಬ್ತು 2019–20 ರ ಪರಿಷ್ಕೃತ ಅಂದಾಜಿನಲ್ಲಿ 65,000 ಕೋಟಿ ರೂ. ಇದ್ದದ್ದು, 2020–21ರಲ್ಲಿ 2ಲಕ್ಷ ಕೋಟಿ ರೂ. ಗೆ ಹೆಚ್ಚಲಿದೆ. ಇದು ನಿಜವಾದ ಬಂಡವಾಳ ಖರ್ಚಿನಲ್ಲಿ 62,000 ಕೋಟಿ ರೂ.ಗಳ ಹೆಚ್ಚಳವನ್ನು ಸರಿದೂಗಿಸಲು ಹೆಚ್ಚೇ ಆಗುತ್ತದೆ. ಸರಕಾರ ಎಷ್ಟೊಂದು ಹತಾಶಗೊಂಡಿದೆಯೆಂದರೆ ಅದು ಒಂದು ಪ್ರತೀಕದಂತಿರುವ, ಸರಕಾರದ ಸ್ಕೀಮುಗಳಿಗೆ ಎಲ್ಲರಿಗಿಂತ ಹೆಚ್ಚು ಹಣ ಒದಗಿಸುತ್ತಿರುವ ಎಲ್‌ಐಸಿಯಲ್ಲಿರುವ ತನ್ನ ಶೇರುಗಳನ್ನೂ ಮಾರಾಟ ಮಾಡಲು ನಿರ್ಧರಿಸಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖೇದ ವ್ಯಕ್ತಪಡಿಸಿದೆ.

ಈ ಮೇಲೆ ಹೇಳಿದಂತೆ, ಕೇಂದ್ರ ಬಜೆಟ್ ಆರ್ಥಿಕ ಮಂದಗತಿಯನ್ನು ಎದುರಿಸುವ ಬದಲು ಬೇಡಿಕೆಯ ಕೊರತೆಯ ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸುತ್ತದೆ, ಮತ್ತು ವ್ಯಾಪಕಗೊಂಡಿರುವ ಆರ್ಥಿಕ ಯಾತನೆಗಳನ್ನು ಇನ್ನಷ್ಟು ಆಳಗೊಳಿಸುತ್ತದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ನಮ್ಮ ದೇಶದ ಆಸ್ತಿಗಳನ್ನು ದೊಡ್ಡ ಪ್ರಮಾಣದಲ್ಲಿ ಮಾರಾಟ ಮಾಡುವುದರ ವಿರುದ್ಧ, ಎಲ್‌ಐಸಿ ಮತ್ತು ವಿಮಾವಲಯದಲ್ಲಿ ಶೇರು ಮಾರಾಟದ ವಿರುದ್ಧ, ನಮ್ಮ ಬಹುಪಾಲು ಜನಗಳ ಮೇಲೆ ಮತ್ತಷ್ಟು ಕಷ್ಟಕೋಟಲೆಗಳನ್ನು, ಸಂಕಟಗಳನ್ನು ಹೇರುತ್ತಿರುವುದರ ವಿರುದ್ಧ ಪ್ರತಿಭಟನೆಗಳನ್ನು ತೀವ್ರಗೊಳಿಸಬೇಕು ಎಂದು ಜನತೆಗೆ ಕರೆ ನೀಡಿದೆ.

ಸಂಪತ್ತಿನ ನಿಜವಾದ ಸೃಷ್ಟಿಕರ್ತರಾದ ಕಾರ್ಮಿಕ ವರ್ಗದ ಸೂಚನೆಗಳನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ–ಸಿಐಟಿಯು

ಕೇಂದ್ರ ಬಜೆಟ್ ಬಹಳಷ್ಟು ಸದ್ದು–ಗದ್ದಲಗಳಿಂದ ತುಂಬಿದೆ, ಆದರೆ ಸಾರ ಸತ್ವ ಮಾತ್ರ ಸೊನ್ನೆಯೇ. 27.1 ಕೋಟಿ ಜನಗಳನ್ನು ಬಡತನದ ರೇಖೆಯಿಂದ ಮೇಲಕ್ಕೆತ್ತುವುದು ಇಂತಹ ಒಂದು ಸದ್ದು. ಜನಗಳ ಕಲ್ಯಾಣ ಮತ್ತು ಉದ್ಯೋಗ ನಿರ್ಮಾಣದ ಬಗ್ಗೆ ಇನ್ನೂ ಇಂತಹ ಹಲವಾರು ಉದಾಹರಣೆಗಳಿವೆ. ದೇಶಾದ್ಯಂತ ಮೂಲರಚನೆಯಲ್ಲಿ ಹೂಡಿಕೆಯನ್ನು ಹೆಚ್ಚಿಸುವ ಬಗ್ಗೆ ಏರುದಿನಯಲ್ಲಿ ಮಾತಾಡಿದೆ. ಆದರೆ ಆದರೆ ಇವೆಲ್ಲ ಖಾಸಗಿ ವಲಯದ ಸ್ಪಂದನೆಯನ್ನು ಅವಲಂಬಿಸಿದೆ. ಕಳೆದ ಐದು ವರ್ಷಗಳಲ್ಲಿ ತೈಲ/ಅನಿಲ ಕ್ಷೇತ್ರಗಳ ಶೋಧನೆಗೆಂದು ಕೊಟ್ಟ 1,37,000 ಎಕ್ರೆಯಲ್ಲಿ ಇದುವರೆಗೂ ಯಾವ ಆದಾಯವೂ ಬಂದಿಲ್ಲ.

ಬಜೆಟ್ ಭಾಷಣ 'ಸುಗಮ ಜೀವನ'ದ ಬಗ್ಗೆ ಸದ್ದು ಮಾಡಿದೆ. ಆದರೆ ದೇಶದ ಸಂಪತ್ತನ್ನು ಉತ್ಪಾದಿಸುವ ಜನಗಳ ಕನಿಷ್ಟ ವೇತನ, ಹೆಚ್ಚಳ, ಸಾಮಾಜಿಕ ಕಲ್ಯಾಣ ಸೌಲಭ್ಯಗಳ ಸಾರ್ವತ್ರೀಕರಣ, ಸಮಾನ ಕೆಲಸಕ್ಕೆ ಸಮಾನ ವೇತನ ಇತ್ಯಾದಿ ಜೀವನವನ್ನು ಸುಗಮಗೊಳಿಸುವ ಕ್ರಮಗಳ ಬಗ್ಗೆ ಚಕಾರವಿಲ್ಲ. ಇಡೀ ಸಮಾಜಕ್ಕೆ ಸೇವೆ ಸಲ್ಲಿಸುತ್ತಿರುವ ಒಂದು ಕೋಟಿ ಸ್ಕೀಮ್ ಕಾರ್ಮಿಕರ ಬಗ್ಗೆಯೂ ಸೊಲ್ಲೆತ್ತಿಲ್ಲ.

ಬಜೆಟ್ ವೈಯಕ್ತಿಕ ಆದಾಯ ತೆರಿಗೆ ದರಗಳನ್ನು ಕಡಿಮೆ ಮಾಡುವುದಾಗಿ ಹೇಳಿದೆ, ಆದರೆ ಹಲವು ರಿಯಾಯ್ತಿಗಳನ್ನು ಹಿಂತೆಗೆದುಕೊಂಡು ಇದನ್ನು ನಿರರ್ಥಕಗೊಳಿಸಿದೆ. ಇನ್ನೊಂದೆಡೆಯಲ್ಲಿ, ಕಾರ್ಪೊರೇಟ್ ಕುಳಗಳ ಬಗ್ಗೆ ಪ್ರಧಾನಿಗಳ 'ಸಂಪತ್ತಿನ ಸೃಷ್ಟಕರ್ತರು' ಎಂಬ ಪದವನ್ನು, ಅವರು, ಬಜೆಟಿನಲ್ಲಿರುವ ಅಂಕಿ–ಅಂಶಗಳ ಪ್ರಕಾರವೇ 7.63ಲಕ್ಷ ಕೋಟಿ ರೂ.ಗಳಷ್ಟು ನೇರ ತೆರಿಗೆಯನ್ನು ಬಾಕಿ ಇಟ್ಟುಕೊಂಡರೂ, ಮತ್ತೆ–ಮತ್ತೆ ಪುನರಾವರ್ತಿಸುತ್ತ, ತೆರಿಗೆ ವ್ಯವಸ್ಥೆಯನ್ನು ಸರಳಗೊಳಿಸುವ ಹೆಸರಲ್ಲಿ ಮತ್ತಷ್ಟು ರಿಯಾಯ್ತಿಗಳನ್ನು ಕೊಟ್ಟಿದೆ.

ಆರ್ಥಿಕ ಮಂದಗತಿಯ ನಡುವೆ ಮೂಲರಚನೆ ಮತ್ತು ಕೃಷಿಯಲ್ಲಿ ಸಾರ್ವಜನಿಕ ಹೂಡಿಕೆಗಳನ್ನು ಹೆಚ್ಚಿಸುವ, ಸಾಮಾಜಿಕ ಕಲ್ಯಣ ಸೇವೆಗಳನ್ನು ಗಮನಾರ್ಹವಾಗಿ ಹೆಚ್ಚಿಸುವ ಕನಿಷ್ಟ ಕೂಲಿಗಳನ್ನು ಮತ್ತು ಸಾಮಜಿಕ ಭದ್ರತೆಯನ್ನು ಹೆಚ್ಚಿಸಲು ನೇರ ಮಧ್ಯಪ್ರವೇಶದ ಅಗತ್ಯವಿತ್ತು. ಇದರಿಂದ ಅರ್ಥವ್ಯವಸ್ಥೆಯಲ್ಲಿ ಬೇಡಿಕೆಯ ಮಟ್ಟ ಏರುತಿತ್ತು. ಕಾರ್ಮಿಕ ಸಂಘಗಳು ಬಜೆಟ್–ಪೂರ್ವ ಸಮಾಲೋಚನೆಯಲ್ಲಿ ಈ ಅಂಶಗಳನ್ನೇ ಮುಂದಿಟ್ಟಿದ್ದವು. ಆದರೆ ದೊಡ್ಡ ವ್ಯಾಪಾರಸ್ಥರು, ಕಾರ್ಪೊರೇಟ್‌ಗಳು ಮತ್ತು ಭೂಮಾಲಕರಿಗೆ ಕಟಿಬದ್ಧವಾಗಿರುವ ಈ ಸರಕಾರ ರಾಷ್ಟ್ರೀಯ ಅರ್ಥವ್ಯವಸ್ಥೆಯಲ್ಲಿ ಸಂಪತ್ತಿನ ನಿಜವಾದ ಸೃಷ್ಟಿಕರ್ತರಾದ ಕಾರ್ಮಿಕ ವರ್ಗದ ಸೂಚನೆಗಳನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ.

ಎಲ್‌ಐಸಿ ಯನ್ನು ನಿರ್ನಾಮದ ಪಟ್ಟಿಗೆ ಸೇರಿಸುತ್ತಿರುವ ಸರಕಾರ

ಸಾರ್ವಜನಿಕ ವಲಯದ ಬ್ಯಾಂಕುಗಳ ಖಾಸಗೀಕರಣದ ಕೂಗು ಕರ್ಕಶಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಒಂದು ಸಾರ್ವಜನಿಕ ವಲಯದ ಸಂಸ್ಥೆಯಾಗಿ ಎಲ್‌ಐಸಿಯ ಅಸ್ತಿತ್ವಕ್ಕೇ ನಿಜವಾದ ಅಪಾಯ ಬಂದಿದೆ ಎಂದರೆ ತಪ್ಪಾಗದು. ಶೇರುದಾರಿಗೆ ಲಾಭ ಹೆಚ್ಚಿಸುವುದು ಪ್ರಮುಖ ಉದ್ದೇಶವಾಗಿರುವ ಶೇರು ಮಾರುಕಟ್ಟೆಯಲ್ಲಿ ಸಣ್ಣ ಪಾಲಿಸಿದಾರರು, ಅಂದರೆ ಕೆಳಮಧ್ಯಮ, ಮತ್ತು ಬಡಕುಟುಂಬಗಳಿಗೆ, ಗ್ರಾಮೀಣ ಪ್ರದೇಶಗಳಿಗೆ ವಿಮಾ ಆಸರೆಯನ್ನು ವಿಸ್ತರಿಸುವ ಎಲ್‌ಐಸಿಯ ಕೆಲಸ ಹಿನ್ನೆಲೆಗೆ ಸರಿಯುತ್ತದೆ, ಇದು ದೇಶಕ್ಕೆ ಸಾಮಾಜಿಕವಾಗಿಯೂ, ಆರ್ಥಿಕವಾಗಿಯೂ ಒಳ್ಳೆಯ ಬೆಳವಣಿಗೆಯಲ್ಲ.

ಎಸ್.ಕೆ. ಗೀತಾ

ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ತನ್ನ ಎರಡನೇ ಬಜೆಟ್ ಭಾಷಣದಲ್ಲಿ ಸರಕಾರ ಎಲ್‌ಐಸಿ ಯನ್ನು ಶೇರು ವಿನಿಮಯದಲ್ಲಿ 'ಲಿಸ್ಟ್' ಮಾಡುತ್ತದೆ, ಅಂದರೆ ಶೇರು ವಿನಿಮಯದಲ್ಲಿರುವ ಕಂಪನಿಗಳ ಪಟ್ಟಿಯಲ್ಲಿ ಸೇರಿಸುತ್ತದೆ, ಮತ್ತು ತನ್ನ ಪಾಲಿನ ಒಂದು ಭಾಗವನ್ನು ಐಪಿಒ(ಆರಂಭಿಕ ಸಾರ್ವಜನಿಕ ನೀಡಿಕೆ) ಅಡಿಯಲ್ಲಿ ಮಾರಾಟ ಮಾಡುತ್ತದೆ ಎಂದು ಹೇಳಿದರು. ಅದನ್ನು ಸಮರ್ಥಿಸಿಕೊಳ್ಳುತ್ತ "ಕಂಪನಿಯನ್ನು ಶೇರು ವಿನಿಮಯದಲ್ಲಿ ಪಟ್ಟಿ ಮಾಡುವುದರಿಂದ ಅದಕ್ಕೆ ಶಿಸ್ತು ಬರುತ್ತದೆ, ಹಣಕಾಸು ಮಾರುಕಟ್ಟೆಗಳು ಲಭ್ಯವಾಗುತ್ತವೆ ಹಾಗು ಅದರ ಮೌಲ್ಯದ ಬೀಗ ತೆರೆಯುತ್ತದೆ. ಅದು ಚಿಲ್ಲರೆ ಹೂಡಿಕೆದಾರರಿಗೂ ಸಂಪತ್ತಿನ ಸೃಷ್ಟಿಯಲ್ಲಿ ಪಾಲ್ಗೊಳ್ಳುವ ಅವಕಾಶ ಮಾಡಿಕೊಡುತ್ತದೆ."

ಇದರಿಂದ ಈ ಸರಕಾರದ ಮಿತ್ರರುಗಳಿಗೆ, ಬಂಟರುಗಳಿಗೆ ಸಂತೋಷವಾಗಿದೆ. ಅವರು ಈ ಕ್ರಮದ ಗುಣಗಾನ ಮಾಡುತ್ತಿದ್ದಾರೆ. ಆದರೆ ಪಾಲಿಸಿದಾರರು ಮತ್ತು ಸಾರ್ವಜನಿಕರ ನಡುವೆ ಆತಂಕ ಮೂಡಿದೆ. ಸರಕಾರಕ್ಕೆ ಈ ಕ್ರಮವನ್ನು ಕೈಗೊಳ್ಳಬೇಕಾದ ಅವಶ್ಯಕತೆಯಾದರೂ ಏನಿತ್ತು ಎಂದು ಅವರಿಗೆ ಅರ್ಥವಾಗುತ್ತಿಲ್ಲ.

ಈ ಪ್ರಸ್ತಾಪದ ವಿರುದ್ಧ ದೇಶದಾದ್ಯಂತ ಜೀವ ವಿಮಾ ನಿಗಮದ ಉದ್ಯೋಗಿಗಳು, ಅಧಿಕಾರಿಗಳು ಮತ್ತು ಅಭಿವೃದ್ಧಿ ಅಧಿಕಾರಿಗಳು ತಮ್ಮ ಒಂದು ಘಂಟೆಯ ಮುಷ್ಕರದ ಮೂಲಕ ಪ್ರತಿರೋಧ ವ್ಯಕ್ತಪಡಿಸಿದರು. ದಿನಾಂಕ 4.2.2020 ರಂದು ನಡೆದ ಈ ಮುಷ್ಕರಕ್ಕೆ ಬಹುದೊಡ್ಡ ಸಂಖ್ಯೆಯಲ್ಲಿ ವಿಮಾ ಪ್ರತಿನಿಧಿಗಳು ತಮ್ಮ ಬೆಂಬಲ ಸೂಚಿಸಿದರು.

ಸರಕಾರ ತನ್ನ ಈಕ್ರಮಕ್ಕೆ ಒಡ್ಡಿರುವ ತರ್ಕಗಳು ಟೊಳ್ಳಾಗಿವೆ. ಎಲ್‌ಐಸಿ ಪಾರದರ್ಶಕ ಮತ್ತು ದಕ್ಷ ಮಂಡಳಿಯೊಂದು ನಿರ್ವಹಿಸುವ ಸಂಸ್ಥೆ. ಅದು ಪ್ರತಿ ಮೂರು ತಿಂಗಳಿಗೊಮ್ಮೆ ತನ್ನ ಹಣಕಾಸು ಪರಿಸ್ಥಿತಿಗಳ ಬಗ್ಗೆ ಸಾರ್ವಜನಿಕ ಪ್ರಕಟಣೆ ನೀಡುತ್ತದೆ. ಪ್ರತಿತಿಂಗಳು ವಿಮಾ ನಿಯಂತ್ರಣ ಮಂಡಳಿಗೆ ವರದಿ ಸಲ್ಲಿಸುತ್ತದೆ, ಮತ್ತು ಸಂಸತ್ತಿಗೂ ತನ್ನ ಲೆಕ್ಕಪತ್ರವನ್ನು ತಪಾಸಣೆಗೆ ಸಲ್ಲಿಸುತ್ತದೆ. ಇದಕ್ಕಿಂತ ಹೆಚ್ಚಿನ ಪಾರದರ್ಶಕತೆ ಏನು ಬೇಕು?

ಇನ್ನು ಹಣಕಾಸು ಮಾರುಕಟ್ಟೆಗಳು ಲಭ್ಯವಾಗುತ್ತವೆ ಎಂಬುದಂತೂ ಹಾಸ್ಯಾಸ್ಪದ ಮಾತು. ಏಕೆಂದರೆ ಎಲ್‌ಐಸಿಯೇ ಪ್ರತಿವರ್ಷ 3.5 ರಿಂದ 4ಲಕ್ಷ ಕೋಟಿ ರೂ.ಗಳಷ್ಟು ಹೂಡಿಕೆಗೆ ಲಭ್ಯವಾಗುವ ನಿಧಿಗಳನ್ನು ಉತ್ಪಾದಿಸುತ್ತದೆ. ಆದ್ದರಿಂದ ಅದಕ್ಕೆ ಹಣಕಾಸು ಮಾರುಕಟ್ಟೆಗಳ ಆವಶ್ಯಕತೆಯೇ ಇಲ್ಲ.

ಚಿಲ್ಲರೆ ಹೂಡಿಕೆದಾರರು ಸಂಪತ್ತಿನ ಸೃಷ್ಟಿಯಲ್ಲಿ ಪಾಲುಗೊಳ್ಳಲು ಸಾಧ್ಯವಾಗುತ್ತದೆ ಎಂಬುದೂ ಅರ್ಥಹೀನ. ಏಕೆಂದರೆ ಶೇರು ಮಾರುಕಟ್ಟೆಯಲ್ಲಿ ಭಾಗವಹಿಸುವ ಚಿಲ್ಲರೆ ಹೂಡಿಕೆದಾರರ ಪ್ರಮಾಣ ಕೇವಲ 3%. ವಾಸ್ತವವಾಗಿ ಈ ಕ್ರಮದಿಂದ ಯಾರದ್ದಾದರೂ ಮೌಲ್ಯ ವೃದ್ಧಿಯಾಗುವುದಾದರೆ, ಅದು ಶ್ರೀಮಂತರದ್ದು, ವಿದೇಶಿ ಬಂಡವಾಳಿಗರದ್ದು ಮತ್ತು ದೇಶೀ ಸಾಂಸ್ಥಿಕ ಹೂಡಿಕೆದಾರರದ್ದು ಮಾತ್ರ.

ಈ ಕ್ರಮ ಪಾಲಿಸಿದಾರರ ಹಿತಗಳನ್ನು ಪೂರ್ಣವಾಗಿ ರಕ್ಷಿಸುತ್ತದೆ ಎಂಬುದೂ ನಿಜವಲ್ಲ. ಈಗಾಗಲೇ ಎಲ್‌ಐಸಿ ಪಾಲಿಸಿದಾರರ ಹಿತಗಳ ಸುರಕ್ಷತೆಯನ್ನು ಅತ್ಯುತ್ತಮ ರೀತಿಯಲ್ಲಿ ಮಾಡಿಕೊಂಡು ಬಂದಿದೆ, ದಕ್ಷ ಸೇವೆಗೆ, ದಕ್ಷ ನಿರ್ವಹಣೆಗೆ ಹೆಸರಾಗಿದೆ.

ಹಾಗಿದ್ದರೆ ಎಲ್‌ಐಸಿಯನ್ನು ಶೇರು ವಿನಿಮಯದಲ್ಲಿ 'ಲಿಸ್ಟ್' ಮಾಡುವ ಪ್ರಸ್ತಾಪ ಏಕೆ ಬಂದಿದೆ. ಒಂದು ಆರ್ಥಿಕ ಕಾರಣಕ್ಕಾಗಿ, ಮತ್ತೊಂದು ಸೈದ್ಧಾಂತಿಕ ಕಾರಣಕ್ಕಾಗಿ.

ಆರ್ಥಿಕ ಕಾರಣವೆಂದರೆ, ಈ ಸರಕಾಂದ ಆರ್ಥಿಕ ನಿರ್ವಹಣೆಯಲ್ಲಿನ ಪ್ರಮಾದಗಳಿಂದಾಗಿ ಸಂಪನ್ಮೂಲಗಳ ಕೊರತೆ ತೀವ್ರವಾಗಿದೆ.

ಇನ್ನು ಸೈದ್ಧಾಂತಿಕ ಕಾರಣವೆಂದರೆ, ಈಗಿನ ಆಳುವ ಪಕ್ಷ, ಬಿಜೆಪಿ ಸದಾ ಸಾರ್ವಜನಿಕ ವಲಯಕ್ಕೆ ವಿರುದ್ಧವಾಗಿದೆ.

ಸರಕಾರ ಇನ್ನೂ ಎಷ್ಟು ಭಾಗವನ್ನು ಐಪಿಒ ಆಗಿ ಮಾರಬೇಕು ಎಂದು ನಿರ್ಧರಿಸಿಲ್ಲ. ಈಗಿರುವ ನಿಯಮಗಳ ಪ್ರಕಾರ ಶೃಉ ನಿನಿಮಯದ ಪಟ್ಟಿಯಲ್ಲಿರುವ ಯಾವುದೇ ಕಂಪನಿಯ 35% ಶೇರುಗಳು ಮಾರುಕಟ್ಟೆಯಲ್ಲಿ ಹರಿದಾಡುತ್ತಿರಬೇಕು. ಅಂದರೆ ಮುಮದಿನ ಕೆಲವು ವರ್ಷಗಳಲ್ಲಿ ಸರಕಾರ 35% ಶೇರುಗಳನ್ನು ಮಾರಾಟ ಮಾಡಬೇಕು. ಸಾರ್ವಜನಿಕ ವಲಯದ ಬ್ಯಾಂಕುಗಳ ಖಾಸಗೀಕರಣದ ಕೂಗು ಕರ್ಕಶಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಒಂದು ಸಾರ್ವಜನಿಕ ವಲಯದ ಸಂಸ್ಥೆಯಾಗಿ ಎಲ್‌ಐಸಿಯ ಅಸ್ತಿತ್ವಕ್ಕೇ ನಿಜವಾದ ಅಪಾಯ ಬಂದಿದೆ ಎಂದರೆ ತಪ್ಪಾಗದು. ಶೇರುದಾರಿಗೆ ಲಾಭ ಹೆಚ್ಚಿಸುವುದು ಪ್ರಮುಖ ಉದ್ದೇಶವಾಗಿರುವ ಶೇರು ಮಾರುಕಟ್ಟೆಯಲ್ಲಿ ಸಣ್ಣ ಪಾಲಿಸಿದಾರರು, ಅಂದರೆ ಕೆಳಮಧ್ಯಮ, ಮತ್ತು ಬಡಕುಟುಂಬಗಳಿಗೆ, ಗ್ರಾಮೀಣ ಪ್ರದೇಶಗಳಿಗೆ ವಿಮಾ ಆಸರೆಯನ್ನು ವಿಸ್ತರಿಸುವ ಎಲ್‌ಐಸಿಯ ಕೆಲಸ ಹಿನ್ನೆಲೆಗೆ ಸರಿಯುತ್ತದೆ, ಇದು ದೇಶಕ್ಕೆ ಸಾಮಾಜಿಕವಾಗಿಯೂ, ಆರ್ಥಿಕವಾಗಿಯೂ ಒಳ್ಳೆಯ ಬೆಳವಣಿಗೆಯಲ್ಲ.

ಈ ಕಾರಣದಿಂದಲೇ ವಿಮಾ ನೌಕರರು ಖಾಸಗೀಕರಣದ ವಿರುದ್ಧದ ಎರಡು ದಶಕಗಳಿಂದ ಹೋರಾಟ ನಡೆಸಿಕೊಂಡು ಬಂದಿದ್ದಾರೆ. 90 ರ ದಶಕದಲ್ಲಿ ನವ ಉದಾರೀಕರಣದ ಅಲೆಯೆದ್ದಾಗ ಅಂದಿನ ಕೇಂದ್ರ ಸರ್ಕಾರವು ನಾಗರಿಕ ವಿಮಾನ ಯಾನ, ದೂರ ಸಂಪರ್ಕ ಮತ್ತು ವಿಮಾ ಉದ್ಯಮಿಗಳನ್ನು ಖಾಸಗಿಯವರಿಗೆ ತೆರೆದಿಟ್ಟಿತು. ಈ ಪ್ರಸ್ತಾಪದ ಭಾಗವಾಗಿ ಸರಕಾರ ರಚಿಸಿದ ಮಲ್ಹೋತ್ರ ಸಮಿತಿಯ ತನ್ನ ವರದಿಯನ್ನು ಸಲ್ಲಿಸಿ ಎಲ್.ಐ.ಸಿಯ ಕಾರ್ಯವೈಖರಿಯ ಬಗ್ಗೆ ಮೆಚ್ಚುಗೆ ಸೂಚಿಸಿತ್ತಾದರೂ ಎಲ್.ಐ.ಸಿ.ಯು ಅತ್ಯಂತ ಬೃಹತ್ತಾಗಿ ಬೆಳೆದಿದ್ದು. ಆಡಳಿತಾತ್ಮಕವಾಗಿ ಅದನ್ನು ಸರಿದೂಗಿಸಬೇಕೆಂದರೆ ಖಾಸಗೀಕರಣ ಅನಿವಾರ್ಯವೆಂದು ಅಭಿಪ್ರಾಯಪಟ್ಟಿತು. ವಿಮಾ ವಲಯದಲ್ಲಿ ಶೇ. 49 ರಷ್ಟು ವಿದೇಶಿ ನೇರ ಬಂಡವಾಳಕ್ಕೆ ಅವಕಾಶವಿರಬೇಕು. ಮತ್ತು ವಿದೇಶಿ ಸಂಸ್ಥೆಗಳೊಂದಿಗೆ ಶೇಕಡಾ 51 ರಷ್ಟು ಬಂಡವಾಳದೊಂದಿಗೆ ದೇಶಿಯ ಖಾಸಗಿಯವರಿಗೂ ಅನುವು ಮಾಡಿಕೊಡಬೇಕೆಂದು ಶಿಫಾರಸ್ಸು ಮಾಡಿತ್ತು. ಸಾರ್ವಜನಿಕ ವಲಯದಲ್ಲಿರುವ ಎಲ್.ಐ.ಸಿಯ ಶೇರು ಬಂಡವಾಳವನ್ನು 5 ಕೋಟಿಯಿಂದ ನೂರು ಕೋಟಿ ರೂಗಳಿಗೇರಿಸಿ ಅದರರ್ಥ ಅಂದರೆ 50 ಕೋಟಿ ಶೇರು ಬಂಡವಾಳವನ್ನು ಖಾಸಗಿಯವರಿಗೆ ಮಾರಾಟ ಮಾಡಬೇಕೆಂದೂ ಶಿಫಾರಸ್ಸು ಮಾಡಿತ್ತು. ಸಮಿತಿಯ ರಚನೆಯಾದೊಡನೆಯೇ ವಿಮಾ ನೌಕರರು ದೇಶಾದ್ಯಂತ ಬೃಹತ್ ಹೋರಾಟ ನಡೆಸಿದ ಕಾರಣ 2006 ರಲ್ಲಿ ವಿಮಾ ನಿಯಂತ್ರಣ ಮತ್ತು ಪ್ರಾಧಿಕಾರ ಮಸೂದೆ ಜಾರಿಯಾಗಿ ಶೇ. 26ರಷ್ಟು ವಿದೇಶಿ ನೇರ ಬಂಡವಾಳದೊಂದಿಗೆ ಖಾಸಗಿ ವಿಮಾ ಸಂಸ್ಥೆಗಳು ಆರಂಭವಾದರೂ ಸಾರ್ವಜನಿಕ ವಲಯದಲ್ಲಿಯೇ ಮುಂದುವರೆಯುವಂತಾಯ್ತು. ದೇಶದ ಜನತೆಯ ಹಣಕ್ಕೆ ಭದ್ರತೆಯೊದಗಿಸುವುದು ಮತ್ತು ಜನಕಲ್ಯಾಣ ಯೋಜನೆಗಳಿಗೆ ಜನರ ಉಳಿತಾಯದ ಹಣದ ಮೂಲಕ ಬಂಡವಾಳ ಸಂಗ್ರಹದ ಬೃಹತ್ ಉದ್ದೇಶದೊಂದಿಗೆ 278 ಖಾಸಗಿ ಸಂಸ್ಥೆಗಳನ್ನು ಒಗ್ಗೂಡಿಸಿ 1956 ರಲ್ಲಿ ರಚನೆಯಾದ ಭಾರತೀಯ ಜೀವ ವಿಮಾ ನಿಗಮವು ಅಂದಿನಿಂದ ಇಂದಿನವರೆಗೂ ಈ ದೇಶದ ಜನತೆಯ ವಿಶ್ವಾಸದ ಪ್ರತೀಕವಾಗಿ ಮುಂದುವರೆದಿದೆ. ವಿಮಾ ಮಾರುಕಟ್ಟೆಯಲ್ಲಿ ಖಾಸಗಿಯವರ ಪ್ರವೇಶವಾದ ನಂತರವೂ ಮಾರುಕಟ್ಟೆಯ ನಾಯಕನಾಗಿ ಮುಂದುವರಿದಿದೆ. ಈ ಯಶಸ್ವಿನ ದಾಖಲೆಯಿದ್ದರೂ ಕಾಲದಿಂದ ಕಾಲಕ್ಕೆ ಆಡಳಿತರೂಢ ಸರ್ಕಾರಗಳು ಈ ಸಾರ್ವಜನಿಕ ಸಂಸ್ಥೆಯನ್ನು ಬಲಹೀನಗೊಳಿಸುವ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಲೇ ಬಂದಿವೆ. 2019ರಲ್ಲಿ ವಿಮಾ ಮಸೂದೆಗೆ ತಿದ್ದುಪಡಿ ತರುವ ಮೂಲಕ ವಿದೇಶಿ ನೇರ ಬಂಡವಾಳವನ್ನು ಶೇಕಡ 26 ರಿಂದ ಶೇಕಡ. 49 ಕ್ಕೆ ಏರಿಸಲಾಗಿದೆ.

ಶ್ರೀಮಂತರ ಪರವಾದ ಕ್ರಮಗಳನ್ನು ಕೈಗೊಳ್ಳುತ್ತಾ ಬಡವರು ಮತ್ತು ಸಾಮಾನ್ಯ ಜನತೆಯ ವಿರುದ್ಧವಾದ ಕ್ರಮಗಳನ್ನು ಕೈಗೊಂಡು ದೇಶದ ಆರ್ಥಿಕತೆಯನ್ನು ಪ್ರಪಾತದತ್ತ ಕೊಂಡೊಯ್ಯಲಾಗಿದೆ. ಶ್ರೀಮಂತರು ಕಾರ್ಪೊರೇಟ್ ಸಂಸ್ಥೆಗಳಿಗೆ ನೀಡುತ್ತಿರುವ ವಿನಾಯ್ತಿಗಳು ದೇಶದ ಅಯವ್ಯಯದಲ್ಲಿ ಪರಮ ಅಸಮತೋಲನ ಸೃಷ್ಟಿಸಿದೆ. ಹಣಕಾಸು ಕೊರತೆ ನೀಗಿಸಲು ಸರ್ಕಾರ ಒಂದೊಂದೇ ಸಾರ್ವಜನಿಕ ಸಂಸ್ಥೆಗಳನ್ನು ಮಾರಾಟ ಮಾಡುತ್ತಿದ್ದು ಇದರಿಂದ ರೂ. 2.08 ಲಕ್ಷ ಕೋಟಿ ರೂಗಳ ಹಣ ಸಂಗ್ರಹಿಸುವ ಮಹತ್ವಾಕಾಂಕ್ಷೆ ಯೋಜನೆಯ ಮುಂದಿಟ್ಟು ಕೊಂಡಿದ್ದು ಎಲ್.ಐ.ಸಿ ಶೇರು ಮಾರಾಟದಿಂದ ರೂ. 9,000 ಕೋಟಿ ಸಂಗ್ರಹಿಸುವ ಗುರಿ ಹೊಂದಿದೆ.

ಎಲ್.ಐ.ಸಿ. ಕೇವಲ ಪಾಲಿಸಿದಾರರ ಮಿತ್ರ ಮಾತ್ರವಲ್ಲ ಈ ದೇಶದ ಜನತೆಯ ಆಪದ್ಬಂದುವಾಗಿದೆ. ಜನರಿಂದ ಸಂಗ್ರಹಿಸಿದ ಹಣವನ್ನು ಸರಕಾರವು ಜನಕಲ್ಯಾಣ ಯೋಜನೆಗಳಾದ ನೀರಾವರಿ, ವಿದ್ಯುತ್ ಉತ್ಪಾದನೆ, ರಸ್ತೆ ಮತ್ತು ಗೃಹ ನಿರ್ಮಾಣಗಳಂತಹ ಯೋಜನೆಗೆ ಬಳಸುತ್ತದೆ. ಸರ್ಕಾರದ ಇಂತಹ ವಿನಿಯೋಗದ ಮೊತ್ತದಲ್ಲಿ LIC ಯ ಕೊಡುಗೆ ಶೇಕಡ 25 ರಷ್ಟು ನಿರಂತರವಾಗಿವೆ ವ್ಯವಹಾರ ಕುಶಲತೆಯಿಂದ ಈ ಸಂಸ್ಥೆಯನ್ನು ಮುನ್ನಡೆಸಿದ ಕಾರಣದಿಂದಾಗಿ ವರ್ಷದಿಂದ ವರ್ಷಕ್ಕೆ LIC ಯು ಸರ್ಕಾರವು ಅತ್ಯಧಿಕ ಲಾಂಭಾಂಶವನ್ನು ನೀಡುತ್ತಲೇ ಬಂದಿದೆ. ಕಳೆದೊಂದು ವರ್ಷದಲ್ಲೇ ಸರ್ಕಾರಕ್ಕೆ ನೀಡಿರುವ ಲಾಂಭಾಂಶವೇ ರೂ. 2660 ಕೋಟಿ ಅಂದರೆ ಸರ್ಕಾರ ಹೂಡಿರುವ 100 ಕೋಟಿ ರೂ ಬಂಡವಾಳದ ಮೇಲೆ ಶೇ 2600 ರಷ್ಟು ಸ್ವಾತಂತ್ರ್ಯಾನಂತರ ಇಲ್ಲಿಯವರೆಗೆ ನಿರಂತರವಾಗಿ ನೀಡಿರುವ ಲಾಭಾಂಶದ ಮೊತ್ತವೇ ರೂ. 26,00,538 ಕೋಟಿ ರೂಗಳು ಕೇವಲ 5 ಕೋಟಿ ರೂ ಬಂಡವಾಳದೊಂದಿಗೆ ಆರಂಭವಾದ ಎಲ್.ಐ.ಸಿ. ಯ ಒಟ್ಟು ಆಸ್ತಿ 31 ಲಕ್ಷ ಕೋಟಿ ಯಾವುದೇ ಆರ್ಥಿಕ ಸಂಸ್ಥೆ ಸಾಮಾಜಿಕ ಬದ್ಧತೆಯೊಂದಿಗೇ ಲಾಭದಾಯಕವಾಗಿ ನಡೆಯಬಲ್ಲದು ಎಂಬುದಕ್ಕೆ LIC ಒಂದು ಅಪ್ರತಿಮ ಉದಾಹರಣೆ. ಅಂತಹ ಸಂಸ್ಥೆಯನ್ನು ಖಾಸಗೀಕರಣಕ್ಕೆ ಒಳಪಡಿಸುವುದೆಂದರೆ ದೇಶದ ಆರ್ಥಿಕ ಸ್ವಾಯತ್ತತೆಗೇ ಕೊಡಲಿಯೇಟು ಜನರ ಉಳಿತಾಯಕ್ಕೆ ತಂದೊಡ್ಡುವ ಅಪಾಯ ವಷ್ಟೇ ಅಲ್ಲ ದೇಶದ ಸ್ವಾವಲಂಬನೆಗೂ ಬಹುದೊಡ್ಡ ಅಪಾಯ ಹಾಗೆಂದೇ ವಿಮಾ ನೌಕರರ ಹೋರಾಟ ಒಂದು ದೇಶ ಪ್ರೇಮಿ ಹೋರಾಟ ಸರ್ಕಾರ ಒಂದೊಮ್ಮೆ ಈ ನಿರ್ಧಾರವನ್ನು ಕೈಬಿಡದಿದ್ದರೆ ತಮ್ಮ ಪ್ರಚಾರಾಂದೋಲನದ ಮೂಲಕ ಅದನ್ನೊಂದು ಜನಾಂದೋಲನವಾಗಿ ಪರಿವರ್ತಿಸುವ ದೃಢ ನಿರ್ಧಾರ ಹೊಂದಿದ್ದಾರೆ. ಈ ಹೋರಾಟಕ್ಕೆ ಬೆಂಬಲ ಸೂಚಿಸುವ ಮೂಲಕ ಈ ದೇಶದ ಜನತೆ ತಮ್ಮ ಹೋರಾಟವನ್ನು ಗಟ್ಟಿಗೊಳಿಸುವಂತಾಗಲಿ.



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ



ಯೋಗಕ್ಷೇಮಂ ಸ್ವಾಹಾಮ್ಯಹಂ
ನಿಮ್ಮ ಕಲ್ಯಾಣ –ನಿಮ್ಮ ಹೊಣೆ
ವ್ಯಂಗ್ಯಚಿತ್ರ: ಅರವಿಂದ ತೆಗ್ಗಿನಮಠ

ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಾರ್ತಾಭಾರತಿ



ಕೋಲಾರ ಜಿಲ್ಲಾ ಎಸ್‌ಎಫ್‌ಐ 24ನೇ ಸಮ್ಮೇಳನ



ಕೋಲಾರ: ಶಿಕ್ಷಣ ವ್ಯವಸ್ಥೆಯಲ್ಲಿ ವಿದೇಶಿ ನೇರ ಬಂಡವಾಳ (ಎಫ್‌ಡಿಐ) ಪದ್ಧತಿಯನ್ನು ಜಾರಿಗೊಳಿಸುವ ಮೂಲಕ ಕೇಂದ್ರ ಸರ್ಕಾರದ ಶಿಕ್ಷಣದ ಮೇಲಿನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಿದೆ' ಎಂದು ಎಸ್‌ಎಫ್‌ಐ ರಾಜ್ಯ ಘಟಕದ ಕಾರ್ಯದರ್ಶಿ ಗುರುರಾಜ ದೇಸಾಯಿ ಆರೋಪಿಸಿದರು.

ಎಸ್‌ಎಫ್‌ಐ ಜಿಲ್ಲಾ ಘಟಕದಿಂದ ಇಲ್ಲಿನ ಪತ್ರಕರ್ತರ ಭವನದಲ್ಲಿ ಬುಧವಾರ ನಡೆದ 24ನೇ ಜಿಲ್ಲಾ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, 'ಕೇಂದ್ರ ಸರ್ಕಾರ ಎಲ್ಲ ಕ್ಷೇತ್ರಗಳನ್ನು ಖಾಸಗಿಕರಣಗೊಳಿಸುತ್ತಿದ್ದು, ದೇಶದ ಶಿಕ್ಷಣ ವ್ಯವಸ್ಥೆಯನ್ನು ವಿದೇಶಿಯರ ಜವಾಬ್ದಾರಿಗೆ ಒಪ್ಪಿಸುತ್ತಿದೆ' ಎಂದು ಅತಂಕ ವ್ಯಕ್ತಪಡಿಸಿದರು.

'ಸಂಕಷ್ಟದಲ್ಲಿರುವ ಬಡವರನ್ನು ಶಿಕ್ಷಣದಿಂದ ಸಂಪೂರ್ಣವಾಗಿ ವಂಚಿಸಲು ಕೇಂದ್ರ ಸರ್ಕಾರ ತೀರ್ಮಾನ ಕೈಗೊಂಡಿದೆ. ಶಿಕ್ಷಣಕ್ಕಾಗಿ ಬೇರೆ ದೇಶಗಳಿಂದ ಸಾಲ ತರುವ ಭಾರತ ಸರ್ಕಾರದ ಕ್ರಮ ಶಿಕ್ಷಣ ವಿರೋಧಿಯಾಗಿದೆ, ಇದರ ವಿರುದ್ಧ ಧ್ವನಿ ಎತ್ತಲು ವಿದ್ಯಾರ್ಥಿಗಳು ಮುಂದಾಗಬೇಕು' ಎಂದು ಸಲಹೆ ನೀಡಿದರು.

'ಶಿಕ್ಷಣ, ಉದ್ಯೋಗ ಸಿಗದೆ ಬಡವರು ಸಂಕಷ್ಟದಲ್ಲಿದ್ದಾರೆ. ತನ್ನ ನ್ಯೂನತೆಗಳನ್ನು ಮರೆ ಮಾಚಲು ಪೌರತ್ವಕಾಯ್ದೆಯ ಹೆಸರಲ್ಲಿ ದೇಶದ ಜನರನ್ನು ಒಡೆಯುತ್ತಿದೆ. ಕವಿತೆ ಬರೆದರೆ, ನಾಟಕ ಮಾಡಿದರೆ ದೂರು ದಾಖಲಿಸುವ ಮೂಲಕ ಭಯೋತ್ಪಾದನೆ ಆರೋಪದ ಪಟ್ಟಿ ಕಟ್ಟಿ ಬಂಧಿಸುತ್ತಿದೆ' ಎಂದು ದೂರಿದರು.

'ಹಿಂದಿನ ಸರ್ಕಾರ ಪದವಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಸಬೇಕು ಎಂದು ಬಜೆಟ್‌ನಲ್ಲಿ ಮಂಡನೆ ಮಾಡಿತ್ತು. ಆದರೆ ಈಗಿನ ಬಿಜೆಪಿ ಸರ್ಕಾರಿ ಅನುದಾನದ ಕೊರತೆ ನೆಪ ಹೇಳಿ ಕೇವಲ ಪ್ರಥಮ ಪದವಿ ವಿದ್ಯಾರ್ಥಿಗಳಿಗೆ ವಿತರಿಸುತ್ತಿದೆ. ಇದನ್ನು ಇತರೆ ಪದವಿ ವಿದ್ಯಾರ್ಥಿಗಳಿಗೆ ವಿಸ್ತರಿಸದಿದ್ದರೆ ತೀವ್ರ ಹೋರಾಟ ನಡೆಸಲಾಗುವುದು' ಎಂದು ಎಚ್ಚರಿಕೆ ನೀಡಿದರು.

'ಕಡಿಮೆ ವಿದ್ಯಾರ್ಥಿಗಳ ದಾಖಲಾತಿಯ ನೆಪವೊಡ್ಡಿ ಸರ್ಕಾರಿ ಶಾಲೆಗಳನ್ನು ವಿಲೀನ ಮಾಡುವ ಹೆಸರಿನಲ್ಲಿ ಮುಚ್ಚಲಾಗುತ್ತಿದೆ. ಮಾರುಕಟ್ಟೆಯಲ್ಲಿ ಸರಕುಗಳನ್ನು ಮಾರಾಟ ಮಾಡಿದಂತೆ ಶಿಕ್ಷಣವನ್ನು ವ್ಯಾಪಾರ ಮಾಡಲಾಗುತ್ತಿದೆ' ಎಂದು ಟೀಕಿಸಿದರು.

'ಅಂತರರಾಷ್ಟೀಯ ಮಟ್ಟದಲ್ಲಿ ಸ್ಪರ್ಧೆ ಒಡ್ಡುವಂತಹ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಮಾಡಲಾಗುವುದು ಎಂದು ಕೇಂದ್ರ ಸರ್ಕಾರ ಹೇಳಿರುವುದು ಮರೆತಿದೆ. ಆದರೆ, ಪ್ರಾಥಮಿಕ ಶಿಕ್ಷಣದ ಬಲವರ್ಧನೆಯ ಬಗ್ಗೆ ಯಾವುದೇ ಚಕಾರ ಎತ್ತಿಲ್ಲ. ಉನ್ನತ ಶಿಕ್ಷಣದಲ್ಲಿ ಬದಲಾವಣೆ ತರಲು ಮೊದಲು ಪ್ರಾಥಮಿಕ ಶಿಕ್ಷಣ ವ್ಯವಸ್ಥೆ ಸುಧಾರಣೆಗೆ ಕ್ರಮ ವಹಿಸಬೇಕು' ಎಂದು ಒತ್ತಾಯಿಸಿದರು.

'ಎಸ್‌ಎಫ್‌ಐ ಜಿಲ್ಲಾ ಘಟಕದ ಅಧ್ಯಕ್ಷ ವಾಸುದೇವ ರೆಡ್ಡಿ ಮಾತನಾಡಿ, 'ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಇಚ್ಛಾಶಕ್ತಿ ಕೊರತೆಯಿಂದ ಶೈಕ್ಷಣಿಕ ಕ್ಷೇತ್ರವನ್ನು ಖಾಸಗಿಕರಣಗೊಳಿಸುವ ಪ್ರಯತ್ನ ನಡೆಯುತ್ತಿದೆ. ಜಾತ್ಯತೀತ ಮೌಲ್ಯಗಳ ವಿರುದ್ಧ ನೀತಿಗಳನ್ನು ಸರ್ಕಾರ ಜಾರಿಗೊಳಿಸುತ್ತಿದೆ, ಇದರ ವಿರುದ್ಧ ಹೋರಾಟ ರೂಪಿಸಬೇಕಾದ ಅಗತ್ಯವಿದೆ' ಎಂದು ಹೇಳಿದರು.

ಪದಾಧಿಕಾರಿಗಳ ಆಯ್ಕೆ:

ಎಸ್‌ಎಫ್‌ಐ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಶಿವಪ್ಪ, ಕಾರ್ಯದರ್ಶಿಯಾಗಿ ಬಿ.ರಾಜು, ಉಪಾಧ್ಯಕ್ಷರಾಗಿ ಸುರೇಶ್‌ಬಾಬು, ಶ್ರೀಕಾಂತ್, ಅಂಕಿತಾ, ಉದಯ್ ಕುಮಾರ್, ಸಹಕಾರ್ಯದರ್ಶಿಗಳಾಗಿ ಆನಂದ್‌ಕುಮಾರ್, ಸಂಜಯ್, ಸಂದೀಪ್, ಶಂಕರ್, ಸಂಗೀತಾ, ವೇಗಶ್ರೀ ಸೇರಿದಂತೆ 30 ಮಂದಿ ಸಮಿತಿ ಸದಸ್ಯರು ಆಯ್ಕೆಯಾದರು.

ಜೆಎಂಎಸ್ ಜಿಲ್ಲಾ ಘಟಕದ ಕಾರ್ಯದರ್ಶಿ ವಿಜಿ ಕುಮಾರಿ, ಎಸ್‌ಎಫ್‌ಐ ಜಿಲ್ಲಾ ಘಟಕದ ಉಪಾಧ್ಯಕ್ಷೆ ಗಾಯಿತ್ರಿ ಹಾಜರಿದ್ದರು.

ಕೇಳಿಸಿದ್ದು

ಬಣ್ಣನೆ–ಭಾವನೆಗಳ ನಡುವೆ ತವಕ–ತಲ್ಲಣಗಳ ಪಿಸುನುಡಿ

ಕಲಬುರ್ಗಿಯಲ್ಲಿ ನಡೆಯುತ್ತಿರುವ ಅಖಿಲ ಭಾರತ 85ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿನ ಎಚ್.ಎಸ್. ವೆಂಕಟೇಶಮೂರ್ತಿ ಅವರ ಅಧ್ಯಕ್ಷ ಭಾಷಣವು ಕರ್ನಾಟಕ– ಕನ್ನಡಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಆಗಬೇಕಾದ ಕೆಲಸಗಳನ್ನು ಪರಿಣಾಮಕಾರಿಯಾಗಿ ತೆರೆದಿಟ್ಟಿದೆ. ಕನ್ನಡ ಶಿಕ್ಷಣ ಮಾಧ್ಯಮದ ಅಗತ್ಯವನ್ನು ಒತ್ತಿ ಹೇಳಿರುವ ಸಮ್ಮೇಳನಾಧ್ಯಕ್ಷರು, ಶಿಕ್ಷಣ ಸಂಸ್ಥೆಗಳನ್ನು ಹಣ ಸಂಪಾದನೆಯ ದಂಧೆ ಮಾಡಿಕೊಂಡಿರುವ ವ್ಯಾಪಾರಮುಖಿಗಳನ್ನು ನಯವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ.

'ಶಿಕ್ಷಣ ವ್ಯಾಪಾರೀ ಉದ್ಯಮವಲ್ಲ; ಅದು ಅನುಭವವನ್ನು ಮಾತಾಗಿಯೂ ಮಾತನ್ನು ಅನುಭವವಾಗಿಯೂ ಅಖಂಡತ್ವದಲ್ಲಿ ಸಿದ್ಧಿಸಿಕೊಳ್ಳುವ ವ್ಯಕ್ತಿರೂಪಣದ ಸೃಷ್ಟಿಶಾಲೆ' ಎನ್ನುವ ಅವರ ವಿಶ್ಲೇಷಣೆ ಹಾಗೂ ಇಂಗ್ಲಿಷ್ ಶಾಲೆಗಳು ಶಿಕ್ಷಣ ಮಟ್ಟದ ಇಳಿವಿಗೆ ಕಾರಣವಾಗಿವೆ ಎನ್ನುವ ಆತಂಕವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಏಕರೂಪ ಶಿಕ್ಷಣದ ಅನುಷ್ಠಾನದ ಬಗ್ಗೆ ಕಾರ್ಯಪ್ರವೃತ್ತವಾಗಬೇಕಾಗಿದೆ. ನಿಕಟಪೂರ್ವ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಚಂದ್ರಶೇಖರ ಕಂಬಾರರೂ ಇದೇ ವಿಷಯಕ್ಕೆ ಒತ್ತು ಕೊಟ್ಟು, ಪ್ರಾಥಮಿಕ ಶಿಕ್ಷಣದ ರಾಷ್ಟ್ರೀಕರಣಕ್ಕೆ ಒತ್ತಾಯಿಸಿದ್ದುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಹಿಂದಿ ಹೇರಿಕೆಯ ಪ್ರಯತ್ನಗಳನ್ನು ಸ್ಪಷ್ಟವಾಗಿ ವಿರೋಧಿಸಿರುವ ವೆಂಕಟೇಶಮೂರ್ತಿ, 'ಹಿಂದಿಗೆ ಸಮಾನತೆಯಲ್ಲೂ ಪ್ರಥಮ ಸ್ಥಾನ ಎಂಬ ಮಾತನ್ನು ನಾನು ಒಪ್ಪಲಾರೆ' ಎಂದು ಹೇಳಿರುವುದು ಸರಿಯಾಗಿದೆ. ಆದರೆ, ಸಂಸ್ಕೃತ ಅಥವಾ ಪ್ರಾಕೃತವನ್ನು ಸೇತುವೆಯ ಭಾಷೆಯಾಗಿ ರೂಢಿಗೆ ತರಲು ಬಹುವಾರ್ಷಿಕ ಯೋಜನೆ ಅಗತ್ಯ ಎನ್ನುವ ಅವರ ಅಭಿಪ್ರಾಯವನ್ನು ಅರಗಿಸಿಕೊಳ್ಳುವುದು ಕಷ್ಟ. ದಕ್ಕಬೇಕಾದ ಎಲ್ಲವೂ ನಮಗೆ ಕನ್ನಡದ ಮೂಲಕವೇ ದಕ್ಕಬೇಕು, ಕಲಿಯುವ ಮತ್ತು ಕಲಿಸುವ ಭಾಷೆಯೇ ವ್ಯವಹಾರ ಭಾಷೆಯಾಗಬೇಕು ಎನ್ನುವ ನಿಲುವುಗಳನ್ನು ಒಪ್ಪುವುದಾದರೆ, ಸಂಸ್ಕೃತ–ಪ್ರಾಕೃತಗಳನ್ನು ಸಂವಹನ ಭಾಷೆಯಾಗಿ ರೂಪಿಸುವ ಪ್ರಕ್ರಿಯೆ ಹುಲಿಯ ಅಸ್ಥಿಪಂಜರಕ್ಕೆ ಜೀವ ತುಂಬುವ ನಡವಳಿಕೆಯೇ ಆಗಲಿದೆ.

ಕರ್ನಾಟಕದ ಮಹಾನ್ ಲೇಖಕರ ಸಾಹಿತ್ಯವನ್ನು ಭಾರತದ ಇತರ ಭಾಷೆಗಳಿಗೆ ಪರಿಚಯಿಸಬೇಕೆನ್ನುವ ಅವರ ಆಶಯ ಒಳ್ಳೆಯದು. ಕರ್ನಾಟಕದಲ್ಲಿ ಕನ್ನಡಿಗರಿಗೆ ಸಿಂಹಪಾಲು ಉದ್ಯೋಗಗಳನ್ನು ಒದಗಿಸಿಕೊಡಲು ಉದ್ಯೋಗ ಮೀಸಲಾತಿ ಅಗತ್ಯ ಎನ್ನುವ ಒತ್ತಾಯ ಕುರಿತು ವ್ಯಾಪಕ ಚರ್ಚೆ ಆಗಬೇಕಾಗಿದೆ. ಪಠ್ಯಕ್ರಮದಲ್ಲಿ ಕನ್ನಡದ ಸೊಗಡು ಕ್ಷೀಣಿಸುತ್ತಿದ್ದು, ಇಂದಿನ ಶಿಕ್ಷಣ ಕ್ರಮದಿಂದಲೇ ಕನ್ನಡ ಭಾಷೆ ಹಾಗೂ ಆ ಭಾಷೆಯಲ್ಲಿ ಮೈದಳೆದ ಸಾಹಿತ್ಯ ಮತ್ತು ವೈಚಾರಿಕತೆ ನಮ್ಮ ಮಕ್ಕಳಿಂದ ದೂರವಾಗುತ್ತಿದೆ ಎನ್ನುವ ಅಧ್ಯಕ್ಷರ ದುಗುಡವನ್ನು ನಾಡಿನ ಪ್ರಜ್ಞಾವಂತರೆಲ್ಲ ಗಂಭೀರವಾಗಿ ಪರಿಗಣಿಸಬೇಕು.

ಇತ್ತೀಚಿನ ವರ್ಷಗಳ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳಿಗೆ ಹೋಲಿಸಿದರೆ ವೆಂಕಟೇಶಮೂರ್ತಿ ಅವರ ಭಾಷಣ ಓದಲಿಕ್ಕೆ ಸೊಗಸಾಗಿದ್ದು, ಕಾವ್ಯಾತ್ಮಕವಾಗಿಯೂ ಇದೆ. ಸಮಕಾಲೀನ ತಲ್ಲಣಗಳನ್ನು ಕಾವ್ಯರೂಪದಲ್ಲಿ ಅಭಿವ್ಯಕ್ತಿಸುವ ಕ್ರಮ, ಸಮಸ್ಯೆಗಳ ಸರಳೀಕರಣವೂ ಆಗಿಬಿಡುತ್ತದೆ ಎನ್ನುವುದಕ್ಕೆ ಉದಾಹರಣೆಯಾಗಿಯೂ ಈ ಭಾಷಣವನ್ನು ನೋಡುವುದಕ್ಕೆ ಸಾಧ್ಯವಿದೆ. ಗಂಡಾಂತರಗಳ ನಡುವೆ ಕನ್ನಡ ನಂದಾದೀಪವನ್ನು ಎದೆಗೂಡಲ್ಲಿ ಆರದುಳಿಸಿಕೊಂಡು ಬಂದ ಕರಿಮಣ್ಣಿನ ಹಣತೆ ಎಂದು ಕಲಬುರ್ಗಿಯನ್ನು ಕಾವ್ಯಾತ್ಮಕವಾಗಿ ಬಣ್ಣಿಸಿರುವ ಸಮ್ಮೇಳನಾಧ್ಯಕ್ಷರು, ಅದೇ ನೆಲದಲ್ಲಿ ಪೌರತ್ವ (ತಿದ್ದುಪಡಿ) ಕಾಯ್ದೆಯನ್ನು ವಿರೋಧಿಸಿ ನಡೆಯುತ್ತಿರುವ ಪ್ರತಿಭಟನೆಗಳ ಬಗ್ಗೆ ಒಂದು ಮಾತನ್ನೂ ಆಡಿಲ್ಲ.

ಕಲ್ಯಾಣ ಕರ್ನಾಟಕದ ಕಡಕೋಳ ಮಡಿವಾಳಪ್ಪ, ಜಲಾಲ ಸಾಹೇಬ, ಪಿಂಜಾರ ಬಡಾಸಾಹೇಬ ಮುಂತಾದ ತತ್ವಪದಕಾರರ ಧರ್ಮಸಹಿಷ್ಣುತೆಯ ನಿಲುವು ಈ ಹೊತ್ತು ನಮ್ಮ ನಾಡಿಗೆ ಮಾರ್ಗದರ್ಶಕ ಎನ್ನುವ ಅವರ ಮಾತು ಒಪ್ಪತಕ್ಕದ್ದು. 'ಪರಧರ್ಮ ಪರವಿಚಾರಗಳ ಸೈರಣೆಯ...' ಕವಿರಾಜಮಾರ್ಗಕಾರನ ಮಾತನ್ನು ನೆನಪಿಸಿಕೊಂಡು, 'ಹಾಗೆ ಸೈರಿಸಿ ಪರಸ್ಪರ ಹೊಕ್ಕಾಡುತ್ತಾ ಒಗ್ಗೂಡಿ ಪ್ರವಹಿಸುವುದು ಮುಂಬರಿವ ನೆಲೆ' ಎನ್ನುವ ಅಭಿಪ್ರಾಯವೂ ಸ್ವಾಗತಾರ್ಹ. ಆದರೆ, ಅಂಥ ಸೈರಣೆಯ ವಾತಾವರಣ ನಾಡಿನಲ್ಲೀಗ ಇದೆಯೇ ಎನ್ನುವ ಪ್ರಶ್ನೆಗೆ ಮುಖಾಮುಖಿಯಾಗುವ ಪ್ರಯತ್ನವನ್ನೇ ಸಮ್ಮೇಳನಾಧ್ಯಕ್ಷರ ಭಾಷಣ ಮಾಡಿಲ್ಲ.

ಶೃಂಗೇರಿಯಲ್ಲಿ ಇತ್ತೀಚೆಗೆ ನಡೆದ ಚಿಕ್ಕಮಗಳೂರು ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಆಯ್ಕೆಯನ್ನು ವಿವಾದವನ್ನಾಗಿಸಿ, ಸಮ್ಮೇಳನದಿಂದ ದೂರವುಳಿದ ಸರ್ಕಾರದ ನಿಲುವಿನ ಬಗ್ಗೆ ಹಾಗೂ ಆ ಮೇಳಕ್ಕೆ ಸಂಬಂಧಿಸಿದಂತೆ ಸಾಹಿತ್ಯ ಪರಿಷತ್ತಿನ ಕೇಂದ್ರ ಘಟಕದ ಹೊಂದಾಣಿಕೆಯ ಮನೋಧರ್ಮದ ಬಗ್ಗೆ ವೇದಿಕೆಯ ಮೇಲಿನ ಭಾಷಣದಲ್ಲಾದರೂ ಪ್ರತಿಕ್ರಿಯಿಸುವ ಗೋಜಿಗೆ ಅಧ್ಯಕ್ಷ ಭಾಷಣ ಹೋಗಿಲ್ಲ. ಕನ್ನಡದ ಕೆಲಸಗಳಿಗೆ ಅನುದಾನ ನೀಡಲು ಸರ್ಕಾರ ಮೀನಮೇಷ ಎಣಿಸುತ್ತಿರುವುದರ ಪ್ರಸ್ತಾಪವೂ ಭಾಷಣದಲ್ಲಿಲ್ಲ.

ಸಾಹಿತ್ಯ–ಸಂಸ್ಕೃತಿಯ ಜೊತೆಗೆ ಸಾಮಾಜಿಕವಾಗಿಯೂ ಪ್ರಾಕೃತಿಕವಾಗಿಯೂ ನಾಡನ್ನು ಸ್ವಸ್ಥವಾಗಿ ಉಳಿಸಿಕೊಳ್ಳುವುದಕ್ಕೆ ಉಂಟಾಗಿರುವ ಆತಂಕಗಳ ಬಗ್ಗೆ ಸ್ಪಷ್ಟವಾಗಿ, ನಿರ್ಭಿಡೆಯಾಗಿ ಮಾತನಾಡದೇ ಹೋದರೆ ಸಾಹಿತ್ಯ ಸಮ್ಮೇಳನವು ಸರ್ಕಾರದ ಕೃಪಾಪೋಷಿತ ಜಾತ್ರೆಯ ಚೌಕಟ್ಟಿನಲ್ಲಿ ಉಳಿಯುತ್ತದೆಯೇ ವಿನಾ, ಕನ್ನಡಿಗರ ವಿವೇಕ ಮತ್ತು ಸ್ವಾಭಿಮಾನದ ಅಭಿವ್ಯಕ್ತಿಯಾಗುವುದಿಲ್ಲ.

– ಪ್ರಜಾವಾಣಿ ಸಂಪಾದಕೀಯ – ಫೆ. 6

ದಾಖಲೆ ಎಂದೂ ತೋರಿಸೆವು....... ಪುಟ 16 ರಿಂದ

'ವೈರಲ್' ಆಗಿದೆ. ಈಗಾಗಲೇ ಎನ್‌ಆರ್‌ಸಿ– ಪ್ರತಿರೋಧದ ಸಭೆ, ರ್‍ಯಾಲಿ, ಮೆರವಣಿಗೆಗಳಲ್ಲಿ ಕವಿತೆ ವಾಚನ ಸಾಮಾನ್ಯವಾಗಿದೆ. ಅತ್ಯಂತ ಸೃಜನಶೀಲ ಪೋಸ್ಟರುಗಳು, ಬ್ಯಾನರುಗಳು, ಕಲಾಕೃತಿಗಳು ದೇಶದಾದ್ಯಂತ ಪ್ರತಿರೋಧದ ಭಾಗವಾಗಿ ಬಂದಿವೆ. ಒಟ್ಟಾರೆಯಾಗಿ ಇದನ್ನು **'ಎನ್‌ಆರ್‌ಸಿ ವಿರುದ್ಧ ಕಲಾ ಪ್ರತಿರೋಧ'** ಎಂದು ಕರೆಯಬಹುದಾದಷ್ಟು ನಿಚ್ಚಳವಾದ ಟ್ರೆಂಡ್ ಆಗಿದೆ.

'ನಿನ್ನ ದಾಖಲೆ ಯಾವಾಗ ನೀಡುತ್ತಿ?' ಇಂತಹ ಕಲಾ ಪ್ರತಿರೋಧದ ಕವಿತೆಗಳ ಸಂಕಲನ. ಇಲ್ಲಿ ಕನ್ನಡದಲ್ಲಿ ಪ್ರಮುಖವಾಗಿ ಎನ್‌ಆರ್‌ಸಿ ಗೆ ಪ್ರತಿರೋಧದ ಹಿನ್ನೆಲೆಯಲ್ಲಿ ಬಂದ ಕವಿತೆಗಳಿವೆ. ಇವಲ್ಲದೆ ಚಳುವಳಿಯ 'ಅಧಿಕೃತ ಗೀತೆ'ಯೇ ಆಗಿರುವ ವರುಣ್ ಗ್ರೋವರ್ ಅವರ **'ಹಮ್ ಕಾಗಜ್ ನಹೀ ದಿಖಾಯೆಂಗೆ'** ಸೇರಿದಂತೆ ಹಿಂದಿ, ಇಂಗ್ಲೀಷ್ ಮತ್ತಿತರ ಭಾಷೆಗಳಲ್ಲಿ ಎನ್.ಆರ್.ಸಿ ಗೆ ಪ್ರತಿರೋಧ ಚಳುವಳಿಯ ಭಾಗವಾಗಿ ಬಂದ ಕೆಲವು ಪ್ರಮುಖ ಕವಿತೆಗಳ ಅನುವಾದಗಳೂ ಇವೆ. ಇಲ್ಲಿರುವ ಕವಿತೆಗಳಲ್ಲಿ 'ನನ್ನ ದಾಖಲೆ ಕೇಳುವ ಮೊದಲು ನಿಮ್ಮ ದಾಖಲೆ ತೋರಿಸಿ' ಎಂದು ಸವಾಲು ಹಾಕುವ, 'ಅವರ' ಕೆಟ್ಟ ಭೀಕರ ದಾಖಲೆಗಳನ್ನು ಬಯಲಿಗೆಳೆಯುವ ಕವಿತೆಗಳು ಒಂದು ವಿಧ. ನಮ್ಮ ಗುರುತು ದಾಖಲೆಗಳಲ್ಲಿ ಅಲ್ಲ, ನೆಲದಲ್ಲಿ ಹಾಸುಹೊಕ್ಕಾಗಿರುವ ನಮ್ಮ ಬದುಕಿನ ವಿವಿಧ ಆಯಾಮಗಳಲ್ಲಿ ಇದೆ ಎಂದು ದೃಢವಾಗಿ ತಿಳಿಹೇಳುವ ಕವಿತೆಗಳು ಇನ್ನೊಂದು ವಿಧ. ಕವಿತೆಗೆ ಬೆದರಿ ಕೇಸು ಹಾಕುವುದನ್ನು ಮತ್ತಿತರ ದಮನ ಕ್ರಮಗಳನ್ನು ಎದುರಿಸುವ, ಲೇವಡಿ ಮಾಡುವ, ಜನರ ದನಿಯಾಗಬಲ್ಲ ಕಾವ್ಯದ ಶಕ್ತಿಯನ್ನು ಎತ್ತಿ ಹಿಡಿಯುವ ಕವಿತೆಗಳು ಮಗದೊಂದು ವಿಧ. ಇವಲ್ಲದೆ ಹಿಟ್ಲರನ ನಾಜಿವಾದ ಅವನೊಂದಿಗೆ ಸತ್ತಿಲ್ಲ ಎಂಬುದರ ಕುರಿತು ಬರೆದ ಆಡೆನ್ ಅವರ ಚಾರಿತ್ರಿಕ ಕವಿತೆಯ ಅನುವಾದವೂ ಇಲ್ಲಿದೆ. ಸರ್ವಾಧಿಕಾರಿ, ಅದರಲ್ಲೂ ಧರ್ಮದ ಹೆಸರಿನಲ್ಲಿ ಸಮರ್ಥಿಸಿಕೊಳ್ಳುವ, ಪ್ರಭುತ್ವಗಳ ದಮನದ ವಿರುದ್ಧ ಚಳುವಳಿಗಳ ಪ್ರತಿರೋಧದ ಗೀತೆಯಾಗಿದ್ದು, ಎನ್‌ಆರ್‌ಸಿ ವಿರುದ್ಧ ಚಳುವಳಿಯಲ್ಲೂ ವ್ಯಾಪಕವಾಗಿ ಕೇಳಿ ಬಂದಿರುವ ಫೈಜ್ ಅಹ್ಮದ್ ಫೈಜ್ ಅವರ 'ಹಮ್ ದೇಖೇಂಗೆ'ಯ ಅನುವಾದವೂ ಇದೆ.

ಇವಲ್ಲದೆ ಪ್ರತಿರೋಧದ ಭಾಗವಾಗಿ ಬಂದ ಪೋಸ್ಟರುಗಳು, ಕಲಾಕೃತಿಗಳು ಇಲ್ಲಿವೆ. Fearless- "ಹಮ್ ಯಹೀಂ ಕೆ ಹೈಂ" (ನಿರ್ಭಯರು– ನಾವು ಇಲ್ಲಿಯವರೇ, ಮಹಿಳೆಯರು, ಮುಸ್ಲಿಮರು, ಹಿಂದುಗಳು, ಸಿಖ್ಖರು, ಆದಿವಾಸಿಗಳು, ದಲಿತರು ಇಲ್ಲಿಯವರೇ) ಈ ಚಳುವಳಿಯಲ್ಲಿ ಮೂಡಿಬಂದು ಎಲ್ಲರ ಗಮನ ಸೆಳೆದಿರುವ ಕಲಾಕೃತಿಯನ್ನು ಮುಖಪುಟದಲ್ಲಿ, ಮತ್ತು ಶಾಹೀನ್ ಬಾಗ್ ಭೇಟಿಯಿಂದ ಸ್ಫೂರ್ತಿ ಪಡೆದು ರಚಿಸಿರುವ, ಅಲ್ಲಿ ಪ್ರದರ್ಶಿತಗೊಂಡು ಎಲ್ಲರನ್ನೂ ಸೆಳೆಯುತ್ತಿರುವ 'ಶಾಹೀನ್ ಬಾಗ್– ಹಮ್ ದೇಖೇಂಗೆ– ಲಾಜಿಮ್ ಹೈ ಹಮ್ ಭೀ ದೇಖೇಂಗೆ '(ನಾವು ಕಾಣುವೆವು, ನಾವು ಕಂಡೇ ಕಾಣುವೆವು) ಎಂಬ ಕಲಾಕೃತಿಯನ್ನು ಹಿಂದಿನ ಪುಟದಲ್ಲಿ ಬಳಸಿಕೊಡಿದ್ದೇವೆ.

ಬಹು ಹಿಂದೆ ಓದಿದ ಕವಿತೆಯೇಕೋ ಮತ್ತೆ ಮತ್ತೆ ನೆನಪಾಗುತ್ತಿದೆ.

"ನಿಮ್ಮ ಮಾತುಕತೆಗಳಲ್ಲಿ ಹುದುಗಿದ ಬೆಕ್ಕು / ಸಂಶಯದ ಪಂಜವೆತ್ತಿ
ನನ್ನ ನಂಬಿಕೆ ನೀಯತ್ತು ಹಕ್ಕು / ಕೊನೆಗೆ ಸಾಚಾತನವನ್ನು ಪರಚಿ, ಒತ್ತಿ
ನೋವಿಗೆ ಕಣ್ಣು ತುಂಬಿದ್ದರೂ / ಚೆಲ್ಲಿದ ರಕ್ತದಲ್ಲಿ ರಾಷ್ಟ್ರೀಯತೆಯ ಧಾತುಗಳ
ನನ್ನೆದುರಿನಲ್ಲೇ ತನಿಖೆ ಮಾಡುವುದನ್ನು / ಹುಸಿನಗುತ್ತ ಎದುರಿಸುವುದಿದೆಯಲ್ಲ
ಅದು ಬಲು ಕಷ್ಟದ ಕೆಲಸ" (ನಿಮ್ಮೊಡನಿದ್ದೂ ನಿಮ್ಮಂತಾಗದೆ – ನಿಸಾರ್ ಅಹ್ಮದ್)

‘ಪ್ಯಾಲೆಸ್ಟೀನ್ ಶಾಂತಿ’ಗೆ ಮೋಸದ ಟ್ರಂಪ್ ಯೋಜನೆ



ನಾಗರಾಜ ನಂಜುಂಡಯ್ಯ

ಡೆಮಾಕ್ರಟಿಕ್ ಅಧ್ಯಕ್ಷೀಯ ಅಭ್ಯರ್ಥಿ ಗಳಾದ, ಬರ್ನಿ ಸ್ಯಾಂಡರ್ಸ್ ಮತ್ತು ಎಲಿಜಬತ್ ವಾರೆನ್ ಮಾತ್ರ ಯೋಜನೆಯ ವಿರುದ್ದ ಬಲವಾಗಿ ಪ್ರತಿಕ್ರಿಯಿಸಿದ್ದಾರೆ. ಪ್ಯಾಲೆಸ್ಟೀನ್ ನ್ನು ಸ್ವಾಧೀನಪಡಿಸಿಕೊಳ್ಳಲು ರೂಪಿಸಿರುವ, ಇಸ್ರೇಲ್ ನ ಅಕ್ರಮ ವಸಾಹತುಗಳ ಪರವಾದ "ಒಂದು ರಬ್ಬರ್ ಸ್ಟಾಂಪ್" ಯೋಜನೆ ಇದಾಗಿದೆ. ಇದರಿಂದ ಪ್ಯಾಲೇಸ್ಟಿನಿಯನ್ ಪ್ರಭುತ್ವಕ್ಕೆ ಯಾವುದೇ ರೀತಿಯ ಸಾರ್ವಭೌಮತ್ವ ದ ಅವಕಾಶ ಸಿಗುವುದಿಲ್ಲ ಎಂದಿದ್ದಾರೆ ವಾರೆನ್. ಈ ಯೋಜನೆಯು ಶಾಂತಿಯ ಒಪ್ಪಂದವಲ್ಲ, ಬದಲಿಗೆ ಸಂಘರ್ಷವನ್ನು ಮತ್ತಷ್ಟು ಶಾಶ್ವತಗೊಳಿಸುತ್ತದೆ. ಶಾಂತಿ ಒಪ್ಪಂದವು ಇಸ್ರೇಲಿ ಅತಿಕ್ರಮಣವನ್ನು ಕೊನೆಗೊಳಿಸಬೇಕು ಮತ್ತು ಪ್ಯಾಲೇಸ್ಟಿನಿ ಸ್ವಯಂ-ನಿಧಾರದ ಹಕ್ಕನ್ನು ಒಂದು ಸ್ವತಂತ್ರ ದೇಶವಾಗಿ ಸಾಧಿಸಬೇಕು. ಅದ್ಯಾವುದು ಇಲ್ಲಿ ಕಾಣುತ್ತಿಲ್ಲ ಎಂದು ಸ್ಯಾಂಡರ್ಸ್ ಹೇಳಿದ್ದಾರೆ. ಬದಲಿಗೆ, "ಶತಮಾನದ ಒಪ್ಪಂದ" ವೆಂದು ಹೇಳಲಾದ ಈ ಯೋಜನೆಯು, ವಿಶ್ವ ಸಂಸ್ಥೆ ಅಂಗೀಕರಿಸಿದ್ದ ಪ್ಯಾಲೇಸ್ಟಿನಿಯನ್ ತಾಯ್ನಾಡಿನ ನಿರ್ಣಯಗಳನ್ನು ಏಕಪಕ್ಷೀಯವಾಗಿ ರದ್ದು ಪಡಿಸಿದೆ ಮತ್ತು ಇಸ್ರೇಲ್ ಒತ್ತಾಯಿಸುತ್ತಿದ್ದ ಎಲ್ಲವನ್ನೂ, ಪ್ಯಾಲೆಸ್ಟೀನಿಗೆ ಏನನ್ನೂ ಕೊಡದಿರುವ ಏಕಪಕ್ಷೀಯ ಯೋಜನೆಯಾಗಿದೆ ಎಂಬ ಅಭಿಪ್ರಾಯಗಳು ಮೂಡಿ ಬಂದಿವೆ. ಪ್ಯಾಲೆಸ್ಟೀನಿ ಜನರಿಗೆ ಈ ಯೋಜನೆ ಶಾಕ್ ನೀಡಿದೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇಸ್ರೇಲ್‌ನ ಪ್ರಧಾನಿ ಬೆಂಜಮಿನ್ ನೆತನ್ಯಾಹು ಈ ಇಬ್ಬರು ಬಲಪಂಥೀಯ ಕಿತಾಪತಿ ನಾಯಕರು ಸೇರಿಕೊಂಡು ಪ್ಯಾಲೇಸ್ಟೀನ್ ಕುರಿತಂತೆ ರೂಪಿಸಿರುವ ಶಾಂತಿ ಯೋಜನೆಯು ವಿವಾದಾತ್ಮಕವಾಗಿದೆ ಮತ್ತು ಪ್ಯಾಲೇಸ್ಟೀನಿ ಜನರಿಗೆ ಮೊಸವೆಸಗುವ ಮತ್ತೊಂದು ಯೋಜನೆಯಾಗಿದೆ ಎಂದು ಈ ಇಬ್ಬರ ವಂಚನಾತ್ಮಕ ರಾಜಕೀಯವನ್ನು ಬಲ್ಲ ಜಗತ್ತಿನ ಯಾರಿಗಾದರೂ ಸುಲಭವಾಗಿ ಅರ್ಥವಾಗುತ್ತದೆ.

ಇದು ಪ್ಯಾಲೇಸ್ಟೀನಿ ಜನರ ಬಗ್ಗೆ ಇಸ್ರೇಲ್ ಹೊಂದಿರುವ ಆಕ್ರಾಮಕ ನೀತಿಗಳನ್ನು ಎತ್ತಿ ಹಿಡಿಯಲು ರೂಪಿಸಿರುವ ಯೋಜನೆ. ಪಶ್ಚಿಮ ಏಶ್ಯಾದ, ಏಕೆ ಜಗತ್ತಿನ, ಅತಿ ದೀರ್ಘ ಕಾಲದ ವಿವಾದಗಳಲ್ಲಿ ಪ್ರಮುಖವಾದ ಪ್ಯಾಲೇಸ್ಟಿನಿ ಜನರ ಭೂ ಪ್ರದೇಶಗಳನ್ನು ಸಂಪೂರ್ಣವಾಗಿ ಕಬಳಿಸಲು ರೂಪಿಸಿರುವ ಒಂದು ಮೋಸದ ಯೋಜನೆಯಾಗಿದೆ. ಈ ನಿಟ್ಟಿನಲ್ಲಿ ಈಗಿರುವ ಎಲ್ಲಾ ಯೋಜನೆಗಳನ್ನು ಮೀರಿದ, ಒಂದು ಹೊಸ "ತಾಯಿ ಯೋಜನೆ" ಇದಾಗಿದೆ ಎಂದು ಈ ಇಬ್ಬರೂ ಬಲಪಂಥೀಯ ನಾಯಕರು ವ್ಯಾಖ್ಯಾನ ಮಾಡಿದ್ದಾರೆ.

ಈ ಹೊಸ ಯೋಜನೆಯನ್ನು ಜನವರಿ 28ರಂದು ವಾಶಿಂಗ್ಟನ್ ನ ಶ್ವೇತ ಭವನದಲ್ಲಿ ಘೋಷಿಸಿದ್ದಾರೆ. ಈ ಘೋಷಣೆಯ ಸಮಯ-ಸಂದರ್ಭ ಸ್ವಾರಸ್ಯಕರವಾಗಿದೆ. ಅಮೆರಿಕದ ಸೆನೆಟಿನಲ್ಲಿ ಟ್ರಂಪ್ ಅವರ ವಿರುದ್ಧ ದೋಷಾರೋಪಣೆ (ಇಂಪೀಚ್ಮೆಂಟ್) ವಿಚಾರಣೆ ನಡೆಯುತ್ತಿದೆ. ಹಾಗೆಯೇ, ಇಸ್ರೇಲ್ ನಲ್ಲಿ ಇದೇ ದಿನದಂದು, ಪ್ರಧಾನಿ ಬೆಂಜಮಿನ್ ನೆತನ್ಯಾಹು ಲಂಚ ಮತ್ತು ವಂಚನೆ ಆರೋಪದ ಮೇಲೆ ದೋಷಾರೋಪಣೆಗೆ ಗುರಿಯಾಗಿದ್ದಾರೆ.

ಇದೇ ದಿನ ಈ ಇಬ್ಬರೂ ಶ್ವೇತಭವನದಲ್ಲಿ ಒಗ್ಗೂಡಿ ವಿವಾದಾತ್ಮಕ ಹೊಸ ಪ್ಯಾಲೇಸ್ಟೀನಿ ಶಾಂತಿ ಯೋಜನೆಯನ್ನು ಘೋಷಿಸಿದ್ದಾರೆ. ಜೊತೆಗೆ, ಈ ಹೊಸ ಯೋಜನೆ "ಪ್ಯಾಲೇಸ್ಟಿನಿಯನ್ ಜನರಿಗೆ ಐತಿಹಾಸಿಕ ಅವಕಾಶ" ಕಲ್ಪಿಸಿಕೊಡುವ ಯೋಜನೆಯಾಗಿದೆ ಎಂದು ಟ್ರಂಪ್ ಹೇಳಿಕೆ ನೀಡಿದ್ದಾರೆ. ಹೀಗಾಗಿ, ಇದರ ಹಿಂದಿರುವ ಮೋಸ, ವಂಚನೆ ಮತ್ತು ಪಿತೂರಿಗಳನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ.

ಮೊದಲಿಗೆ, ಈ ತೀರ್ಮಾನ ಕೈಗೊಳ್ಳುವಾಗ ಸಂಬಂಧ ಪಟ್ಟ, ಪ್ಯಾಲೇಸ್ಟಿನಿಯನ್ ಅಥವಾ ಜೋರ್ಡಾನ್ ಅಥವಾ ಈಜಿಪ್ಟಿನ ಯಾವುದೇ ಪ್ರತಿನಿಧಿಗಳನ್ನು ಆಹ್ವಾನಿಸಿರಲಿಲ್ಲ. ಅವರೆಲ್ಲರನ್ನು ಒಳಗೊಳ್ಳಬೇಕಾದ ಅಗತ್ಯತೆ ಇರಲಿಲ್ಲವೆಂದೇ ಈ ಇಬ್ಬರೂ ಪ್ರತಿಪಾದಿಸಿದ್ದಾರೆ. ಇವರೆಲ್ಲರ ಅನುಪಸ್ಥಿತಿಯಲ್ಲಿಯೇ, ಈ ಹೊಸ ಯೋಜನೆ ಘೋಷಿಸಲ್ಪಟ್ಟಿದೆ. ಯೋಜನೆಯ ಘೋಷಣೆ ಮಾಡುವಾಗ ಅಕ್ಕಪಕ್ಕದಲ್ಲಿ ನಿಂತಿರುವ ಇವರಿಬ್ಬರ ಭಾವ-ಭಂಗಿ ಇಡೀ ವ್ಯವಹಾರದಲ್ಲಿ ಪ್ಯಾಲೇಸ್ಟಿನಿಯನ್ ಜನರು ಮುಖ್ಯವಲ್ಲ ಎಂದು ಸೂಚಿಸುವಂತಿದೆ. ಈ ಪ್ರಕ್ರಿಯೆಯು ಯೋಜನೆಗಳ ಹಿಂದಿರುವ ಮೋಸಗೊಳಿಸುವ ಮನಸ್ಸುಗಳನ್ನು ಜಗತ್ತಿಗೆ ಬಹಿರಂಗ ಪಡಿಸಿದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಒಟ್ಟಿನಲ್ಲಿ, ಟ್ರಂಪ್ ಮತ್ತು ನೇತುನ್ಯಾಹು ರವರ ಈ ಯೋಜನೆ, ಅಮೆರಿಕದ ಇಸ್ರೇಲ್-ಪರ ಸರಣಿ ನೀತಿಗಳ ಪರಾಕಾಷ್ಠೆಯಾಗಿದೆ ಎಂದು ಸರಳವಾಗಿ ಎಲ್ಲರಿಗೂ ಅರ್ಥವಾಗುತ್ತದೆ. ಇಸ್ರೆಲಿನಲ್ಲಿ ಯುಎಸ್ ನ ರಾಯಬಾರ ಕಚೇರಿಯನ್ನು (ಈಗಿನ ರಾಜಧಾನಿ ಟೆಲ್ ಅವಿವ್ ನಿಂದ) ವಿವಾದಿತ ಜೆರುಸೆಲೆಮ್ ಗೆ ಸ್ಥಳಾಂತರಿಸಿದ್ದು, ಪಶ್ಚಿಮ ದಂಡೆಯಲ್ಲಿರುವ ಇಸ್ರೇಲ್‌ನ ವಸಾಹತುಗಳಿಗೆ ಮಾನ್ಯತೆ ನೀಡಿದ್ದು ಹಾಗೂ ಪ್ಯಾಲೇಸ್ಟಿನ್ ಗೆ ಕೊಡುತ್ತಿದ್ದ ಎಲ್ಲ ಅನುದಾನಗಳನ್ನು ನಿಲ್ಲಿಸಿದ್ದು – ಇವೇ ಆ ಇತ್ತೀಚಿನ ಕ್ರಮಗಳು.

ಯೋಜನೆಯ ರೂಪುರೇಷುಗಳನ್ನು ಗಮನಿಸೋಣ....

ಶ್ವೇತ ಭವನದಲ್ಲಿ ಅಂದು ಬಿಡುಗಡೆಗೊಳಿಸಿದ 181 ಪುಟಗಳ ಡಾಕ್ಯುಮೆಂಟ್ "ಎರಡು ರಾಷ್ಟ್ರ-ಪ್ರಭುತ್ವಗಳ ಪರಿಹಾರ" ವನ್ನು ನೀಡಿದೆ. ಈ ಯೋಜನೆಯ ಪ್ರಕಾರ “ಅವಿಭಜಿತ” ಜೆರುಸೆಲೆಮ್ ಇಸ್ರೇಲ್‌ನ ರಾಜಧಾನಿಯಾಗಿರುತ್ತದೆ. ಪೂರ್ವ ಜೆರುಸಲೆಮ್ ರಾಜಧಾನಿಯಾಗಿಸಲು ಪ್ಯಾಲೆಸ್ಟೀನ್ ಹಕ್ಕೊತ್ತಾಯ ಸಲ್ಲಿಸುತ್ತಾ ಬಂದಿದೆ. ಇದರ ಬದಲಿಗೆ ಟ್ರಂಪ್ 50 ಬಿಲಿಯನ್ ಡಾಲರ್ ನೆರವು ನೀಡುವ ಮತ್ತು ಪೂರ್ವ ಜೆರುಸೆಲೆಮ್ ನಲ್ಲಿ ಪ್ಯಾಲೇಸ್ಟಿನಿಯನ್ ರಾಯಬಾರಿ ಕಚೇರಿ ತೆರೆಯುವ ಭರವಸೆ ನೀಡಿದ್ದಾರೆ. ಪ್ಯಾಲೇಸ್ಟಿನಿ ಪ್ರಭುತ್ವದ ಹಾದಿಯಲ್ಲಿ ಮುಂದಿನ ನಾಲ್ಕು ವರ್ಷಗಳಲ್ಲಿ ಎಲ್ಲ ಹಿಂಸಾಚಾರಗಳು ನಿಲ್ಲಬೇಕು ಎಂಬುದು ಯೋಜನೆಯ ಶರತ್ತು.

ಇಸ್ರೇಲ್ ಮತ್ತು ಭವಿಷ್ಯದ ಪ್ಯಾಲೇಸ್ಟಿನಿಯನ್ ದೇಶಗಳು ಮುಂದೆ ಹೇಗೆ ಕಾಣಿಸಿಕೊಳ್ಳುತ್ತದೆ ಎಂಬುದನ್ನು ತೋರಿಸುವ ಪರಿಕಲ್ಪನಾ ನಕ್ಷೆಗಳನ್ನು ಯೋಜನೆ ಒಳಗೊಂಡಿದೆ. ಇದು ಟ್ರಂಪ್ ನ ಬೊಗಳೆಗಳಿಗೆ ವ್ಯತಿರಿಕ್ತವಾಗಿದೆ. ಈ ಯೋಜನೆಯ ಪ್ರಮುಖ ಅಂಶಗಳನ್ನು ನೋಡಿದರೆ, ಪಶ್ಚಿಮ ಬ್ಯಾಂಕ್ ನಲ್ಲಿ ಅಕ್ರಮ ವಸಾಹತುಗಳನ್ನು ಇಸ್ರೇಲಿ ಪ್ರದೇಶವೆಂದು ಗುರುತಿಸಲಾಗಿದೆ. ಜೋರ್ಡಾನ್ ಕಣಿವೆಯನ್ನು ಇಸ್ರೇಲ್ ವಶಪಡಿಸಿಕೊಳ್ಳುತ್ತದೆ. ಪ್ಯಾಲೇಸ್ಟಿನಿ ನಿರಾಶ್ರಿತ ಜನರಿಗೆ ತಮ್ಮ ತಾಯ್ನಾಡಿಗೆ ಹಿಂದಿರುಗುವ ಅವಕಾಶದ ಹಕ್ಕುಗಳನ್ನು ನಿರಾಕರಿಸಲಾಗಿದೆ.

ಯೋಜನೆಯ ಮತ್ತೊಂದು ಪ್ರಮುಖ ಅಂಶವೆಂದರೆ, ಪ್ಯಾಲೇಸ್ಟಿನಿಯನ್ ಪ್ರಭುತ್ವವು ‘ಶರತ್ತುಬದ್ಧ’ವಾಗಿರುತ್ತದೆ. ಅಂದರೆ ಅದಕ್ಕೆ ಭೂ ಸೈನ್ಯ ಮತ್ತು ವಾಯುಸೈನ್ಯವನ್ನು ಇಟ್ಟುಕೊಳ್ಳುವ ಯಾವುದೇ ಹಕ್ಕುಗಳನ್ನು ಹೊಂದಿರುವುದಿಲ್ಲ. ಮತ್ತೊಂದೆಡೆ ಇದೇ ಸಂದರ್ಭದಲ್ಲಿ ಇಸ್ರೇಲ್ ತನ್ನ ವಾಯು ಮತ್ತು ಇತರೆ ಎಲ್ಲಾ ಮಿಲಿಟರಿಯನ್ನು ಸಂಪೂರ್ಣವಾಗಿ ತನ್ನ ಹತೋಟಿಯಲ್ಲಿಯೇ ಮುಂದುವರಿಸಲಿದೆ. ಇದನ್ನು ನೆತುನ್ಯಾಹು ತನ್ನ ಸಿನಿಕತನದಿಂದ ‘ಪ್ರಭುತ್ವ ಮೈನಸ್’ ಎಂದು ಕರೆದಿದ್ದಾರೆ. ಹೊಸ ಯೋಜನೆಯ ಪ್ರಕಾರ, ಇಸ್ರೇಲಿ ಅಕ್ರಮ ವಸಾಹತುಗಳು ಮತ್ತು ಮಿಲಿಟರಿ ಸ್ಥಾವರಗಳಿಂದ ಸುತ್ತುವರಿದಿರುವ ಪಶ್ಚಿಮ ದಂಡೆ ಮತ್ತು ಗಾಜಾ ಪ್ರದೇಶಗಳನ್ನೊಳಗೊಂಡ ಪ್ಯಾಲೆಸ್ಟೀನಿ ದೇಶ, ಸಂಪೂರ್ಣ ಸಮುದ್ರದಿಂದ ಆವರಿಸಿರುವ ದ್ವೀಪ ಸಮೂಹದಂತಿರುತ್ತದೆ

ಹೊಸ ಯೋಜನೆಗೆ ಪ್ರತಿಕ್ರಿಯೆಗಳು

ಈ ಟ್ರಂಪ್-ನೆತನ್ಯಾಹು ಶಾಂತಿ ಯೋಜನೆಯು ಪ್ಯಾಲೆಸ್ಟೀನ್ ನ್ನು ಒಂದಕ್ಕೊಂದು ಸಂಪರ್ಕವಿಲ್ಲದ ಶಾಶ್ವತ ಜೈಲು ವಾರ್ಡ್ ಗಳಂತಿರುವ ತುಣುಕು ಭೂಪ್ರದೇಶಗಳ ಸಮೂಹವನ್ನು ಸೃಷ್ಟಿಸುತ್ತದೆ. ಮತ್ತು ಇದರ ಗಡಿ ಪ್ರದೇಶಗಳನ್ನು ಅತಿಕ್ರಮಣಕಾರರು ನಿಯಂತ್ರಿಸುತ್ತಿರುತ್ತಾರೆ. ಎಂದು ಮಾಧ್ಯಮ ವಿಶ್ಲೇಷಕರೊಬ್ಬರು ಹೇಳಿದ್ದಾರೆ. ಈ ಯೋಜನೆಯ ಅನಾವರಣವು, ಜಾಗತಿಕ ವೇದಿಕೆಯಲ್ಲಿ ಟ್ರಂಪ್ ನ ಹೊಸ ಕಟು ಪ್ರಹಸನದಂತೆ ಹೊಮ್ಮಿದೆ. ಈ ಘೋಷಣೆ ಯಾವುದೇ ವಿಶ್ವಾಸಾರ್ಹತೆ ಯನ್ನು ಹೊಂದಿಲ್ಲ. ಒಟ್ಟಾರೆಯಾಗಿ, ಈ ಹೊಸ ನಕ್ಷೆಯು, ಸಾರ್ವಭೌಮ ಪ್ಯಾಲೇಸ್ಟಿನಿಯನ್ ಪ್ರಭುತ್ವಕ್ಕಿಂತ ಹೆಚ್ಚಾಗಿ, ಸ್ವಿಸ್ ಚೀಸ್ ತುಂಡುಗಳಂತೆ ಕಾಣುತ್ತದೆ ಎಂದಿದೆ ‘ಅಲ್ ಜಜೀರಾ’.

ಡೆಮಾಕ್ರಟಿಕ್ ಅಧ್ಯಕ್ಷೀಯ ಅಭ್ಯರ್ಥಿ ಗಳಾದ, ಬರ್ನಿ ಸ್ಯಾಂಡರ್ಸ್ ಮತ್ತು ಎಲಿಜಬತ್ ವಾರೆನ್ ಮಾತ್ರ ಯೋಜನೆಯ ವಿರುದ್ದ ಬಲವಾಗಿ ಪ್ರತಿಕ್ರಿಯಿಸಿದ್ದಾರೆ. ಪ್ಯಾಲೆಸ್ಟೀನ್ ನ್ನು ಸ್ವಾಧೀನಪಡಿಸಿಕೊಳ್ಳಲು ರೂಪಿಸಿರುವ, ಇಸ್ರೇಲ್ ನ ಅಕ್ರಮ ವಸಾಹತುಗಳ ಪರವಾದ "ಒಂದು ರಬ್ಬರ್ ಸ್ಟಾಂಪ್" ಯೋಜನೆ ಇದಾಗಿದೆ. ಇದರಿಂದ ಪ್ಯಾಲೇಸ್ಟಿನಿಯನ್ ಪ್ರಭುತ್ವಕ್ಕೆ ಯಾವುದೇ ರೀತಿಯ ಸಾರ್ವಭೌಮತ್ವ ದ ಅವಕಾಶ ಸಿಗುವುದಿಲ್ಲ ಎಂದಿದ್ದಾರೆ ವಾರೆನ್. ಈ ಯೋಜನೆಯು ಶಾಂತಿಯ ಒಪ್ಪಂದವಲ್ಲ, ಬದಲಿಗೆ ಸಂಘರ್ಷವನ್ನು ಮತ್ತಷ್ಟು ಶಾಶ್ವತಗೊಳಿಸುತ್ತದೆ. ಶಾಂತಿ ಒಪ್ಪಂದವು ಇಸ್ರೇಲಿ ಅತಿಕ್ರಮಣವನ್ನು ಕೊನೆಗೊಳಿಸಬೇಕು ಮತ್ತು ಪ್ಯಾಲೇಸ್ಟಿನಿ ಸ್ವಯಂ-ನಿಧಾರದ ಹಕ್ಕನ್ನು ಒಂದು ಸ್ವತಂತ್ರ ದೇಶವಾಗಿ ಸಾಧಿಸಬೇಕು. ಅದ್ಯಾವುದು ಇಲ್ಲಿ ಕಾಣುತ್ತಿಲ್ಲ ಎಂದು ಸ್ಯಾಂಡರ್ಸ್ ಹೇಳಿದ್ದಾರೆ. ಬದಲಿಗೆ, "ಶತಮಾನದ ಒಪ್ಪಂದ" ವೆಂದು ಹೇಳಲಾದ ಈ ಯೋಜನೆಯು, ವಿಶ್ವ ಸಂಸ್ಥೆ ಅಂಗೀಕರಿಸಿದ್ದ ಪ್ಯಾಲೇಸ್ಟಿನಿಯನ್ ತಾಯ್ನಾಡಿನ ನಿರ್ಣಯಗಳನ್ನು ಏಕಪಕ್ಷೀಯವಾಗಿ ರದ್ದು ಪಡಿಸಿದೆ ಮತ್ತು ಇಸ್ರೇಲ್ ಒತ್ತಾಯಿಸುತ್ತಿದ್ದ ಎಲ್ಲವನ್ನೂ ಪ್ಯಾಲೆಸ್ಟೀನಿಗೆ ಏನನ್ನೂ ಕೊಡದಿರುವ ಏಕಪಕ್ಷೀಯ ಯೋಜನೆಯಾಗಿದೆ ಎಂಬ ಅಭಿಪ್ರಾಯಗಳು ಮೂಡಿ ಬಂದಿವೆ. ಪ್ಯಾಲೆಸ್ಟೀನಿ ಜನರಿಗೆ ಈ ಯೋಜನೆ ಶಾಕ್ ನೀಡಿದೆ.

ಈ ಇಬ್ಬರೂ ಬಲಪಂಥೀಯ ತಿಕ್ಕಲುಗಳು ರೂಪಿಸಿ ಬಹಿರಂಗ ಪಡಿಸಿರುವ ಈ ಯೋಜನೆ ಒಂದು "ಯೋಜಿತ ವಿನಾಶ" ವಾಗಿದೆ. ಇದೊಂದು ಏಕಪಕ್ಷೀಯ ಯೋಜನೆ. ರಿಯಲ್ ಎಸ್ಟೇಟ್ ದೊರೆ ಟ್ರಂಪ್ ಅತಿಕ್ರಣಕಾರಿ ನೆತೆನ್ಯಾಹು ನ ಅತಿಕ್ರಮಣಗಳನ್ನು ಸಕ್ರಮಗೊಳಿಸುವ ಕೆಲಸ ಮಾಡಿದ್ದಾರೆ. ಟ್ರಂಪ್ ಗೆ ಎರಡು ದೇಶಗಳ ನಡುವೆ ಪ್ರಾಮಾಣಿಕ ಮಧ್ಯವರ್ತಿ ಆಗಬಲ್ಲ ಅಂತರಾಷ್ಟ್ರೀಯ ರಾಯಭಾರದ ಕೌಶಲಗಳೇ ಇಲ್ಲ. ಟ್ರಂಪ್ ಗೆ ಇದು ಯೆಹೂದಿ ಹಣದ ದೊರೆಗಳ ಲಾಬಿಯಿಂದ 2020 ಅಧ್ಯಕ್ಷೀಯ ಚುನಾವಣಾ ನಿಧಿ ಸಂಗ್ರಹಕ್ಕೆ ಅನುವು ಮಾಡಿಕೊಡುವ ಯೋಜನೆಯಷ್ಟೇ. ಅದಕ್ಕಿಂತ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕಾಗಿಲ್ಲ.



ಇಬ್ಬರೂ ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಲು ಹರಿಯಬಿಟ್ಟ ಯೋಜನೆ. ಎಂಬಿತ್ಯಾದಿಯಾಗಿ ಹಲವು ಪ್ರತಿಕ್ರಿಯೆಗಳು ಬಂದಿವೆ.

ಅಂತರರಾಷ್ಟೀಯ ಪ್ರತಿಕ್ರಿಯೆಗಳು

ಯೋಜನೆಗಳನ್ನು ಘೋಷಿಸಿದ ಕೆಲವು ದಿನಗಳ ನಂತರ, ಬೆಂಜಮಿನ್ ನೆತನ್ಯಾಹು, ಅಂತರರಾಷ್ಟೀಯ ಬೆಂಬಲಕ್ಕಾಗಿ ಧಾವಿಸಿ, ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ರನ್ನು ಬೇಟಿ ಮಾಡಿದರು. ನೆತನ್ಯಾಹು ವಾಷಿಂಗ್ಟನ್ ಬೇಟಿ ನೀಡಿ ನಂತರ ಅವರು ಭೇಟಿಯಾದ ಮೊದಲ ವಿಶ್ವ ನಾಯಕರಾಗಿದ್ದರು. ಪ್ಯಾಲೆಸ್ಟೀನ್ ಅಧ್ಯಕ್ಷ ಮಹಮೂದ್ ಅಬ್ಬಾಸ್ ಪ್ರಕಾರ, ಟ್ರಂಪ್ ರ ಒಪ್ಪಂದ, ಪ್ಯಾಲೇಸ್ಟಿನಿಯನ್ ಜನರ ಸ್ವಯಂ-ನಿರ್ಧಾರದ ಹಕ್ಕನ್ನು ಕಸಿದುಕೊಳ್ಳುತ್ತದೆ. ಆದ್ದರಿಂದ, ಅಬ್ಬಾಸ್ ರವರು ಈ ಯೋಜನೆಯನ್ನು ತೀವ್ರವಾಗಿ ವಿರೋಧಿಸುತ್ತಾರೆ ಎಂದು ಪುಟಿನ್ ನೆತನ್ಯಾಹು ಗೆ ತಿಳಿಸಿದ್ದಾರೆ ಎನ್ನಲಾಗಿದೆ.

ಇನ್ನು "ಆರ್ಗನೈಸೇಶನ್ ಆಫ್ ಇಸ್ಲಾಮಿಕ್ ಕೋ-ಆಪರೇಷನ್’ (ಒಐಸಿ) ಸದಸ್ಯ ರಾಷ್ಟಗಳು, ಸೌದಿ ಅರೇಬಿಯಾದ ರಾಜಧಾನಿಯಾದ ರಿಯಾದ್ ನಲ್ಲಿ ಜಮಾಯಿಸಿ ಟ್ರಂಪ್ ಪ್ಯಾಲೆಸ್ಟೀನ್ ಶಾಂತಿ ಯೋಜನೆಯನ್ನುಸರ್ವಾನುಮತದಿಂದ ಸಾರಸಗಟಾಗಿ ತಿರಸ್ಕರಿಸಿದ್ದಾರೆ. ಒಐಸಿ ಪ್ರಧಾನ ಕಾರ್ಯದರ್ಶಿ ಯೂಸುಫ್ ಬಿನ್ ಅಹ್ಮದ್ ಅಲ್ ಒಥೈಮೀನ್ ‘ಪ್ಯಾಲೆಸ್ಟೀನ್ ಸಮಸ್ಯೆಗೆ ಯಾವುದೇ ಪರಿಹಾರವು’ ಅದರ ‘ಸಾರ್ವಭೌಮ ಮತ್ತು ಭೌಗೋಳಿಕವಾಗಿ ಸಂಯೋಜಿತ ಪ್ಯಾಲೇಸ್ಟಿನಿ ದೇಶವನ್ನು ಸ್ಥಾಪಿಸಲು ಆಧಾರವಾಗಿರಬೇಕು ಮತ್ತು ಪೂರ್ವ ಜೆರುಸೆಲೆಮ್ ಅದರ ರಾಜಧಾನಿಯಾಗಿರಬೇಕು’ ಎಂಬ ತಮ್ಮ ನಿಲುವನ್ನು ಪುನಃ ಪ್ರತಿಪಾದಿಸಿದ್ದಾರೆ. ಟರ್ಕಿಯ ವಿದೇಶಾಂಗ ಸಚಿವ ಮೆವ್ಲುಡ್ ಕಾವುಸೋಗ್ಲು ಅವರು ಟ್ರಂಪ್ ಮತ್ತು ನೆತನ್ಯಾಹು ರವರ ಯೋಜನೆಯ ಪ್ರಹಸನವನ್ನು, ಅದು ಒಂದು ಅಂತರ್ರಾಷ್ಟ್ರೀಯ ನೀತಿ-ನಿಯಮಗಳ ಪ್ರಕಾರ ಸಮಸ್ಯೆಯನ್ನು ಪರಿಹರಿಸುವ ಮಾತುಕತೆಗೂ ಆಧಾರವಾಗುವ ಅರ್ಹತೆ ಹೊಂದಿಲ್ಲ ಎಂದು ಉಗ್ರವಾಗಿ ಟೀಕಿಸಿದ್ದಾರೆ.. ಯುರೋಪಿಯನ್ ಕೂಟ ಎರಡೂ ಪಕ್ಷಗಳು ಉಭಯ ಮಾತುಕತೆಗಳಿಂದ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಹೇಳಿಕೆ ನೀಡಿದೆ. ಆದರೆ, ಬ್ರಿಟನ್ ಯೋಜನೆಯನ್ನು ಸ್ವಾಗತಿಸಿದೆ. ಜರ್ಮನಿ ವಿವಾದಗ್ರಸ್ತ ಎರಡು ಪಕ್ಷಗಳು ತೊಡಗಿಸಿಕೊಳ್ಳಬೇಕು ಎಂದಿದೆ. ಫ್ರಾನ್ಸ್ ವಿದೇಶಾಂಗ ಸಚಿವರುಗಳು, ಯೋಜನೆಯನ್ನು ಸ್ವಾಗತಿಸಿದ್ದರು ಸಹಾ, ಪ್ರಸ್ತುತ ಪಡಿಸಿರುವ ಶಾಂತಿಯ ಯೋಜನೆಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡುತ್ತೇವೆ ಎಂದಿದ್ದಾರೆ.

ಭಾರತದ ಪ್ರಧಾನಿ ಪಶ್ಚಿಮದಲ್ಲಿರುವ ತಮ್ಮ ಸೈದ್ಧಾಂತಿಕ ಮಾರ್ಗದರ್ಶಕರಿಗೆ, ಇಸ್ರೇಲಿ ಮಿತ್ರರಿಗೆ ತಮ್ಮ ಬದ್ಧತೆ ಮತ್ತು ನಿಷ್ಠೆಯನ್ನು ಪುನರುಚ್ಚಿಸಿದ್ದಾರೆ. ಈ ಯೋಜನೆ ಅಂತ್ರಾಷ್ಟ್ರೀಯ ಕಾನೂನುಗಳ ಸ್ಪಷ್ಟ ಉಲ್ಲಂಘನೆ ಎಂಬುದನ್ನು ಮತ್ತು ಪ್ಯಾಲೆಸ್ಟೀನಿ ಜನತೆಯ ಸ್ವಾತಂತ್ರ್ಯ ಹೋರಾಟಕ್ಕೆ ಭಾರತದ ಪರಂಪರಾಗತ ಸೌಹಾರ್ದ ಬೆಂಬಲವನ್ನು ನಿರ್ಲಕ್ಷಿಸಿ, ಈ ಯೋಜನೆಯನ್ನು ಒಪ್ಪಿಕೊಳ್ಳಲು ಪ್ಯಾಲೇಸ್ಟಿನಿಯರನ್ನು ಕೇಳಿಕೊಂಡಿದ್ದಾರೆ.

ಕೊನೆಯದಾಗಿ, ಅಂತರರಾಷ್ಟೀಯ ಬಲಪಂಥೀಯ ಆಂದೋಲನವು ಅಂತರರಾಷ್ಟೀಯ ರಾಜತಾಂತ್ರಿಕ ತೆಯ ಎಲ್ಲಾ ನೈತಿಕತೆಯನ್ನು ಬರಿದು ಮಾಡುತ್ತಿದೆ. ಅಂತರರಾಷ್ಟೀಯ ಸಂಬಂಧಗಳಿಗೆ ಅದರ ಯೋಜನೆಯ ವಿಧಾನವು, ಪ್ರಚೋದಕ ವಾಗಿರುತ್ತದೆ ಮತ್ತು ಶಾಂತಿಗೆ ವಿರೋಧಿಯಾಗಿರುತ್ತವೆ. ಜ್ವಲಂತ ಸಮಸ್ಯೆಗಳಿಗೆ ಕೊಳಕು ಪರಿಹಾರಗಳನ್ನು, ಹೊರೆತುಪಡಿಸಿ ಏನನ್ನೂ ನೀಡದ, ಮೋಸಗೊಳಿಸುವ ಶಕ್ತಿ ಗಳೊಂದಿಗೆ, ನಮ್ಮ ಭಾರತದ ಪ್ರಸಕ್ತ ಆಡಳಿತ ನಿರ್ಭಯವಾಗಿ ಗುರುತಿಸಿಕೊಂಡಿದೆ ಎಂದಾದರೆ, ಶಾಂತಿ ಬಯಸುವ ಜಗತ್ತಿಗೆ ನಾವು ಕೊಡುವ ಸಂದೇಶವಾದರೂ ಏನು ...?

JANASHAKTHI KANNADA VARA PATRIKE February 10-16, 2020 Price: Rs. 10/- Date of Publication: 7 February 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಸಿಎಎ–ಎನ್‌ಆರ್‌ಸಿ–ಎನ್‌ಪಿಆರ್ ಗಳಿಗೆ ಬಂದ ಕಾವ್ಯ ಪ್ರತಿರೋಧದ ಕುರಿತು ಕಳೆದ ವಾರ ವರದಿಯಾಗಿತ್ತು. ಕ್ರಿಯಾ ಮಾಧ್ಯಮ ಇಂತಹ ಕವನಗಳ ಹಾಗೂ ಜತೆಗೆ ಪೋಸ್ಟರು, ಕಲಾಕೃತಿಗಳ ಒಟ್ಟಾರೆ ಕಲಾ ಪ್ರತಿರೋಧದ ದಿಢೀರ್ ಸಂಕಲನವೊಂದನ್ನು ಪ್ರಕಟಿಸಿದೆ. ಇದು ಕಲಬುರ್ಗಿಯಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಪುಸ್ತಕ ಕ್ರಿಯಾ ಮಾಧ್ಯಮದ ಸ್ಟಾಲಿನಲ್ಲಿ ಬಿಡುಗಡೆಯಾಗಿದೆ. ಈ ಸಂಕಲನದ ಸಂಪಾದಕರಾದ ಯಮುನಾ ಗಾಂವ್ಕರ್ ಅವರ ಸಂಪಾದಕರ ಮಾತಿನ ಆಯ್ದ ಭಾಗ ಮತ್ತು ಬಿಡುಗಡೆಯ ಕಿರು ವರದಿ ಇಲ್ಲಿದೆ. ಸಿಎಎ–ಎನ್‌ಆರ್‌ಸಿ–ಎನ್‌ಪಿಆರ್ ಗೆ ಪ್ರತಿರೋಧದ ಎಲ್ಲ ಪ್ರತಿಭಟನೆ, ಪ್ರದರ್ಶನ, ಸಭೆ, ರ್‍ಯಾಲಿಗಳಲ್ಲಿ ಓದಬೇಕಾದ ಕವನಗಳು ಈ ಪುಸ್ತಕದಲ್ಲಿವೆ. ಈ ಪುಸ್ತಕದಲ್ಲಿರುವ ಚಳುವಳಿಯ 'ಅಧಿಕೃತ ಗೀತೆ'ಯೇ ಆಗಿ ಇನ್ನಷ್ಟು ಆಶು ವಿಸ್ತರಣೆ ಪಡೆಯುತ್ತಿರುವ ವರುಣ್ ಗ್ರೋವರ್ ಅವರ ಮೂಲ ಕವಿತೆ 'ಹಮ್ ಕಾಗಜ್ ನಹೀ ದಿಖಾಯೆಂಗೆ'ಯ ಕನ್ನಡ ಅನುವಾದ ಇಲ್ಲಿ ಕೊಡಲಾಗಿದೆ.



ದಾಖಲೆ ಎಂದೂ ತೋರಿಸೆವು..

ಯಮುನಾ ಗಾಂವ್ಕರ್


ಸಾವಿರಾರು ನೂರಾರು ವರ್ಷಗಳಿಂದ ಬಾಳಿ ಬದುಕಿ ಬಹುತ್ವದ ಭಾರತ ಕಟ್ಟಿದವ್ವರಿಗೆ, ಇಲ್ಲಿನ ಮಣ್ಣಿನ ಕಣಕಣದಲ್ಲೂ ರಕ್ತವನ್ನೇ ಬೆವರಾಗಿಸಿದವರಿಗೆ, ಈ ನೆಲದೊಂದಿಗಿನ ಸಂಬಂಧದ ದಾಖಲೆ ಒದಗಿಸಿ ಎಂದು ಕೇಳುವುದೇ ಮೂರ್ಖತನ. ಇಂತಹ ಮೂರ್ಖತನದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಜಾತಿ, ಧರ್ಮ, ಭಾಷೆ, ಪ್ರದೇಶ, ಲಿಂಗ ಬೇಧಗಳನ್ನು ಮೀರಿ ದೇಶದಾದ್ಯಂತ ಪ್ರತಿಭಟನೆಯ ಕಿಚ್ಚು ಹಬ್ಬಿದೆ. ಸ್ವಾತಂತ್ರ್ಯ ಚಳುವಳಿಯನ್ನು ನೆನಪಿಸುವಂತೆ ಸಾಗರದ ಅಲೆಗಳಂತೆ ಜನ ಮುನ್ನುಗ್ಗುತ್ತಿದ್ದಾರೆ.


ಈ ಶತಮಾನದ 'ಅವಮಾನಿತ ಕಾಲ' ಎಂದೇ ವ್ಯಾಖ್ಯಾನಿಸಬಹುದಾದ ಈ ಕಾಲದಲ್ಲಿ ಕಾವ್ಯ ಬೀದಿಗೆ ಬರದಿರಲು ಸಾಧ್ಯವೇ ಇಲ್ಲ. ಉಸಿರುಗಟ್ಟಿಸುವ ಪ್ರಭುತ್ವದ ಅರಮನೆ ಹಂಗಿನರಮನೆಯಾಗಿದೆ. 'ನಾನು ನಿಮ್ಮಂತೆ, ನಿಮ್ಮವರಂತೆ, ನಿಮ್ಮ ಸಖನಂತೆ' ಎಂದು ನಂಬಿಸಿ ಕೊರಳು ಕೊಯ್ಯುವ ಕೆಲಸ ಸಾಗಿದೆ. ಕೊರಳು ಕೊಯ್ಯುವ ಕತ್ತಿ ಬಹಳ ಹರಿತವಾಗಿದೆ. ಇಂತಹ ಸನ್ನಿವೇಶದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ತೀವ್ರವಾದ ಹಲ್ಲೆ ನಡೆಯುತ್ತಿರುವಾಗ ಕವಿಗಳು, ಕಲಾವಿದರು, ಚಿಂತಕರು ಮೌನಗರ್ಭದಿಂದ ಹೊರಬರಬೇಕಾಗಿದೆ. ಬರುತ್ತಿದ್ದಾರೆ ಕೂಡಾ. ಪ್ರಭುತ್ವದ ಸರ್ವಾಧಿಕಾರದ ವಿರುದ್ಧ ಜನರ ಜೊತೆಗೆ ನಿಂತು ಅವರನ್ನು ಎಚ್ಚರಿಸುವುದರಲ್ಲಿ ತೊಡಗಿದ್ದಾರೆ. ಭವಿಷ್ಯದ ಕುರಿತು ಭರವಸೆ ಮೂಡಿಸುವ ಬೆಳವಣಿಗೆ ಇದು.

ಕೊಪ್ಪಳದ ಕವಿ ಹಾಗೂ ಪತ್ರಕರ್ತ ಸಿರಾಜ್ ಬಿಸರಳ್ಳಿಯವರು ಇತ್ತೀಚೆಗೆ ನಡೆದ ಆನೆಗೊಂದಿ ಉತ್ಸವದಲ್ಲಿ ತಾವು ರಚಿಸಿದ್ದ 'ನಿನ್ನ ದಾಖಲೆ ಯಾವಾಗ ನೀಡುತ್ತಿ?' ಎಂಬ ಕವಿತೆಯೊಂದನ್ನು ಓದಿದರು. ಪ್ರಭುತ್ವದ ಭಕ್ತರು ನೀಡಿದ ದೂರಿನ ಮೇರೆಗೆ ಪೊಲೀಸರು ಕವಿಯ ಮೇಲೆ FIR ಹಾಕಿದ್ದಾರೆ. ಕವಿಗಳನ್ನು ದೇಶದ್ರೋಹಿಗಳೆಂದು, ಕವಿತೆಗಳನ್ನು ದೇಶದ್ರೋಹದ, ಧರ್ಮದ್ರೋಹದ ಕೃತ್ಯಗಳು ಎಂದು ಪರಿಗಣಿಸುವ ಪರಿಪಾಠ ಇಂದು ನೆನ್ನೆಯದೇನೂ ಅಲ್ಲ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ 'ನರಬಲಿ' ಎಂಬ ಕವಿತೆ ಬರೆದ ದ.ರಾ.ಬೇಂದ್ರೆಯವರನ್ನೂ ಜೈಲಿಗೆ ತಳ್ಳಿತ್ತು ಅಂದಿನ ಬ್ರಿಟಿಷ್ ಸರ್ಕಾರ. ಆ ಮೆಲೆಯೂ ಇಂತ ಪ್ರಕರಣಗಳು ಆಗಾಗ ನಡೆದದ್ದಿದೆ. ಆದರೆ ಪ್ರತಿರೋಧದ ದನಿಗೆ ಮುಖಾಮುಖಿಯಾಗಲು ಬೆದರಿದ ಪ್ರಭುತ್ವ ಇಂದು ಈ ದಾಳಿಯನ್ನು ತೀವ್ರಗೊಳಿಸಿದೆ.

ಒಂದು ಕವಿತೆಯ ಮೇಲೆ FIR ದಾಖಲಿಸಿದ್ದನ್ನು ಪ್ರತಿಭಟಿಸಿ, ಸಿಎಎ–ಎನ್‌ಆರ್‌ಸಿ–ಎನ್‌ಪಿಆರ್ ಗಳನ್ನು ಪ್ರಶ್ನಿಸುವ, ಪ್ರಭುತ್ವಕ್ಕೆ ಸೆಡ್ಡು ಹೊಡೆಯುವ ಸಾಲು ಸಾಲು ಕವಿತೆಗಳು ಬಂದಿವೆ. ಅಕ್ಷರ ಲೋಕದ ಈ ಸಾತ್ವಿಕ ಪ್ರತಿರೋಧ ಹೇಗಿದೆ ಎಂದರೆ ಸಿರಾಜ್ ಬಿಸರಳ್ಳಿಯವರ ಪದ್ಯ ಕೇವಲ ಎರಡು ದಿನಗಳಲ್ಲಿ 11 ಭಾಷೆಗಳಿಗೆ ಅನುವಾದವಾಗಿ


ಪುಟ 14 ಕ್ಕೆ





ಪುಸ್ತಕ ಬಿಡುಗಡೆ

'ನಿನ್ನ ದಾಖಲೆ ಯಾವಾಗ ನೀಡುತ್ತಿ' – ಎನ್.ಆರ್.ಸಿ ಗೆ ಕಲಾ ಪ್ರತಿರೋಧದ ಸಂಕಲ ಫೆಬ್ರವರಿ 6 ರಂದು ಸಂಜೆ ಕಲಬುರ್ಗಿಯಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಪುಸ್ತಕ ಕ್ರಿಯಾ ಮಾಧ್ಯಮದ ಸ್ಟಾಲಿನಲ್ಲಿ ಬಿಡುಗಡೆಯಾಗಿದೆ. ಖ್ಯಾತ ಲೇಖಕರಾದ ಆರ್. ಪೂರ್ಣಿಮ, ಆರ್.ಕೆ. ಹುಡಗಿ, ಬಸವರಾಜ ಸಬರದ ಅವರುಗಳು ಪುಸ್ತಕ ಬಿಡುಗಡೆ ನೆರವೇರಿಸಿದರು. ಮುಸ್ಲಿಂ ಕನ್ನಡ ಲೇಖಕ ಸಂಘದ ಖುರ್ಷಿದ್ ಅಲಿ ಅವರು ಸಂಕಲನದ ಒಂದು ಕವಿತೆ ಓದಿದರು.



ದಾಖಲೆ ಎಂದೂ ತೋರೆವು ನಾವು

ಸರ್ವಾಧಿಕಾರಿಗಳು ಸಾವಿರ ಬರಲಿ, ಸರ್ವಾಧಿಕಾರ ಬರುವುದು
ಹೋಗುವುದು;
ದಾಖಲೆ ಎಂದೂ ತೋರೆವು ನಾವು ದಾಖಲೆ ಎಂದೂ
ತೋರಿಸೆವು!

ಅಶ್ರುವಾಯುವ ಎರಚುವಿರಿ ನೀವು ವಿಷದ ಚಹಾ ಕುದಿಸುವಿರಿ,
ಪ್ರೀತಿಯ ಸಕ್ಕರೆ ಬೆರೆಸುತ ನಾವು ಗಟಗಟಗಟನೆ ಕುಡಿಯುವೆವು !
ದಾಖಲೆ ಎಂದೂ ತೋರೆವು ನಾವು ದಾಖಲೆ ಎಂದೂ
ತೋರಿಸೆವು

ಈ ದೇಶದ ಹೆಮ್ಮೆಯ ಮಕ್ಕಳು ನಾವು ಇಲ್ಲಿ ರಾಮಪ್ರಸಾದನೂ
ಬಿಸ್ಮಿಲನು!
ಎಲ್ಲರ ರಕ್ತವೂ ಬೆರೆತಿಹುದಿಲ್ಲಿ ಈ ಮಣ್ಣನು ಹೇಗೆ ಹಂಚುವಿರಿ?

ಪೊಲೀಸರ ಲಾಠಿ ಬೀಸುವಿರಿ, ಸಾರಿಗೆ ಬಾಗಿಲು ಮುಚ್ಚುವಿರಿ
ನಡೆಯುತ ನುಗ್ಗಿ ಬರುವೆವು ನಾವು ದಾಖಲೆ ಎಂದೂ
ತೋರಿಸೆವು!

ಬೀಡನು ಬಿಟ್ಟು ಕೂರುವೆವಿಲ್ಲೇ, ದಾಖಲೆ ಎಂದೂ ತೋರಿಸೆವು
ಸಂವಿಧಾನಕೆ ತಲೆ ಬಾಗುವೆವು, ದಾಖಲೆ ಎಂದೂ ತೋರಿಸೆವು
ಜನಗಣಮನವನೂ ಹಾಡುವೆವು, ದಾಖಲೆ ಎಂದೂ ತೋರಿಸೆವು
ಜಾತಿಗೀತಿಯಲಿ ಒಡೆವುದ ತಡೆದು ಅನ್ನದ ಹಕ್ಕನು ಕೇಳುವೆವು

ದಾಖಲೆ ಎಂದೂ ತೋರೆವು ನಾವು, ದಾಖಲೆ ಎಂದೂ
ತೋರಿಸೆವು !

–ವರುಣ್ ಗ್ರೋವರ್ (ಅನುವಾದ : ಚೇತನಾ ತೀರ್ಥಹಳ್ಳಿ)

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**